# ಕರ್ನಾಟಕ ವಿಕಾಸ

Karnataka Vikas

ಜೂನ್ June 2016



**ದಿನಾಂಕ: 13.05.2016 ರಂದು ನಡೆದ**

**"ಜೀತ ಪದ್ಧತಿ" ನಿರ್ಮೂಲನೆ ಕುರಿತು**

**ಒಂದು ದಿನದ ಕಾರ್ಯಾಗಾರದ**

**ಉದ್ಘಾಟನೆ**

## ದಿನಾಂಕ: 13.05.2016 ರಂದು ನಡೆದ "ಜೀತ ಪದ್ಧತಿ" ನಿರ್ಮೂಲನೆ ಕುರಿತು ಒಂದು ದಿನದ ಕಾರ್ಯಾಗಾರದ ಛಾಯಾಚಿತ್ರಗಳು.
















# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಜೂನ್ 2016 ಸಂಪುಟ : 57

June 2016 Volume : 57

ಸಂಚಿಕೆ : 07

Issue : 07


## ಈ ಸಂಚಿಕೆಯೊಳಗೆ


| | | |
|---|---|---|
| 5. | ವರದಿ | – ಎನ್. ಮಂಜುಶ್ರೀ, IAS |
| 10. | ಲೇಖನ | – ಜಿ. ವೆಂಕಟೇಶ್<br>– ದೇವಣ್ಣ ಎ. ಪಿ.<br>– ಡಾ|| ವಿ. ರಾಮಪ್ರಸಾತ್ ಮನೋಹರ IAS |
| 19. | ಯಶೋಗಾಥೆ | – ಕಾಡಸಿದ್ದ ಎಸ್. ಕಟ್ಟಿಮನಿ<br>– ಚನ್ನವೀರಸ್ವಾಮಿ ಎಸ್. ಹಿರೇಮಠ<br>– ಗಿರೀಶ ಎಸ್. ಬೆನ್ನೂರ<br>– ರಂಜೀತ ಕಾಂಬಳೆ<br>– ಜಿ. ಚಂದ್ರಕಾಂತ |
| 32. | ಕವಿಯ(ಕ್ಷ)ಪ್ರಶ್ನೆ | – ಎಂ. ಸಿದ್ದರಾಜು |
| 33. | ಕಾವ್ಯ ವಿಕಾಸ | – ಕೊದ್ದಡ್ಡಿ ಮಹೇಶ್ |
| 34. | ಪಂಚತಂತ್ರ ವರದಿ | |
| 35. | ಸಕಾಲ ವರದಿ | |
| 36. | ಸುತ್ತೋಲೆ | |






ಪ್ರಕಾಶಕರು

**ಕೆ. ಯಾಲಕ್ಕಿ ಗೌಡ**

ನಿರ್ದೇಶಕರು (ಪಂ. ರಾಜ್ )

ಹಾಗೂ ಸರ್ಕಾರದ ಪದನಿಮಿತ್ತ

ಜಂಟಿ ಕಾರ್ಯದರ್ಶಿ

ಪ್ರಧಾನ ಸಂಪಾದಕರು

**ಬೂವನಹಳ್ಳಿ ನಾಗರಾಜ್**

ನಿರ್ದೇಶಕರು, ಸುವರ್ಣ ಗ್ರಾಮೋದಯ

ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ

ಉಪ ಕಾರ್ಯದರ್ಶಿ

**ವೈ. ಮಹಾಂಕಾಳಪ್ಪ**

ಸಂಪಾದಕರು ಹಾಗೂ

ಸಾರ್ವಜನಿಕ ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು

**ಡಾ. ಎಂ.ಎಸ್. ಮಂಜುನಾಥ**

**ನಾಗರಾಜ್. ಬಿ. ವಾಗಾ**

ವ್ಯವಸ್ಥಾಪಕರು

**ಹೆಚ್.ಬಿ. ಗುರುಸ್ವಾಮಿ**


### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ . 100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ವಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಛೇರಿ ವಿಳಾಸ



ಸಂಪಾದಕರು ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹು ಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : 080 – 22353857
www.rdpr.kar.nic.in
Email : kvrdpr@gmail.com


### ವಿಶೇಷ ಸೂಚನೆ


ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆಯ ಕುರಿತು ನಿಮ್ಮ ನುಡಿ




ಮಾನ್ಯರೆ,

ಕರ್ನಾಟಕ ವಿಕಾಸ ಮೇ 2016ರ ಮಾಸ ಪತ್ರಿಕೆಯ ಮುಖಪುಟದಲ್ಲಿ ಮೂಡಿಬಂದ ದಿನಾಂಕ:24.04.2016 ರಂದು ಜಾರ್ಖಂಡ್ ರಾಜ್ಯದ ಜೆಮ್‌ಷೆಡ್‌ಪುರದಲ್ಲಿ ನಡೆದ ಗ್ರಾಮ ಉದಯ್ ಸೇ ಭಾರತ್ ಉದಯ್ ಕಾರ್ಯಕ್ರಮದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರಿಂದ ಕರ್ನಾಟಕದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರುಗಳು ಪ್ರಶಸ್ತಿ ಸ್ವೀಕರಿಸಿರುವುದು ತುಂಬಾ ಸಂತೋಷವಾಗಿದೆ. 'ಗ್ರಾಮದ ಅಭಿವೃದ್ಧಿಯೇ ದೇಶದ ಅಭಿವೃದ್ಧಿ' ಎಂಬ ಲೇಖನ ಮಾಹಿತಿಪೂರ್ಣವಾಗಿತ್ತು. ಮಹಾತ್ಮ ಗಾಂಧೀಜಿಯವರು ಹೇಳಿದ ದೇಶದ ಆತ್ಮ ಹಳ್ಳಿಗಳಲ್ಲಿ ಅಡಗಿದೆ. ಗ್ರಾಮೋದ್ಧಾರವೇ ದೇಶದ ಉದ್ಧಾರಕ್ಕೆ ಅಡಿಪಾಯ ಎಂಬ ನುಡಿಗೆ ಪುಷ್ಟಿ ನೀಡುವಂತಿದೆ. ಅಣ್ಣಾ ಹಜಾರೆ, ಗಾಂಧಿ ಯುಗದ ಪಳೆಯುಳಿಕೆ ಎನ್ನುವ ಎಸ್.ಕೃಷ್ಣಪ್ಪ ಕೋಡಿಪಾಳ್ಯರವರ ಲೇಖನ ಸ್ಪೂರ್ತಿದಾಯಕವಾಗಿತ್ತು ಮತ್ತು ಮಾರ್ಗದರ್ಶಕವಾಗಿತ್ತು.

**ಶ್ರೀ ಬಸವರಾಜ ಹೂಗಾರ**
ಹಿರೇಸಿಂಗನಗುತ್ತಿ, ಮುಕ್ಕಾಂ ಅಂಚೆ, ಹುನಗುಂದ ತಾಲೂಕು, ಬಾಗಲಕೋಟೆ.

2016ರ ಮೇ ತಿಂಗಳ ಕರ್ನಾಟಕ ವಿಕಾಸ ಮಾಸ ಪತ್ರಿಕೆ ಓದುಗರಿಗೆ ಶ್ರದ್ಧೆ, ಉತ್ಸಾಹ ಮೂಡಿಸಿದೆ. ವರ್ಣರಂಜಿತ ಮುಖಪುಟಗಳು, ಭಾವಚಿತ್ರಗಳು, ವಿವಿಧ ಕಾರ್ಯಕ್ರಮಗಳ ಸಭೆಗಳು, ಉತ್ತಮ ವರದಿ ಲೇಖನಗಳು, ಸುತ್ತೋಲೆಗಳು, ಜಿಲ್ಲಾ ಪಂಚಾಯತಿಯ ಮೀಸಲಾಗಿ ಅಧಿಸೂಚನೆ, ಕವಿಯ(ಕ್ವ)ಪ್ರಶ್ನೆ?, ಕಾವ್ಯವಿಕಾಸ ಎಲ್ಲವೂ ಚೆನ್ನಾಗಿ ಮೂಡಿಬಂದಿದೆ. ಡಾ॥ ಬಿ.ಆರ್.ಅಂಬೇಡ್ಕರ್‌ರವರ 125ನೇ ವರ್ಷದ ಜನ್ಮದಿನಾಚಾರಣೆ ಅಂಗವಾಗಿ ಪ್ರಕಟವಾಗಿರುವ ಲೇಖನದಲ್ಲಿ ಅವರ ವಿಚಾರಧಾರೆ, ಚಿಂತನೆಗಳು, ಜನತೆಗೆ ಅರಿವು ಮೂಡಿಸಿದೆ. ಕೋಲಾರ ಜಿಲ್ಲೆ ಮಾಲೂರು ತಾಲೂಕು ಪಂಚಾಯತಿ 28 ಗ್ರಾಮ ಪಂಚಾಯತಿಗಳಿಗೆ ಗ್ರಾಮ ಉದಯ್ ಸೇ ಭಾರತ್ ಉದಯ್ ಅಭಿಯಾನದ ವಿವಿಧ ಕಾರ್ಯಗಳನ್ನು ಕಲಾತಂಡಗಳ ಮುಖಾಂತರ ಗ್ರಾಮದ ಜನತೆಗೆ ಗ್ರಾಮಾಭಿವೃದ್ಧಿಯ ಬಗ್ಗೆ ಅರಿವು ಮೂಡಿಸಿರುವುದು ಸ್ವಾಗತಾರ್ಹ.

**ಶ್ರೀ ಮರಿದೇವರ ಸಿದ್ದಪ್ಪ**
ನಿವೃತ್ತ ಶಿಕ್ಷಕರು, ಚೌಡಾಪುರ ಅಂಚೆ, ಕೂಡ್ಲಿಗಿ ತಾಲೂಕು, ಬಳ್ಳಾರಿ 583135.

ಮೇ 2016ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಡಾ॥ ಬಿ.ಆರ್.ಅಂಬೇಡ್ಕರ್ ರವರ 125ನೇ ಜಯಂತೋತ್ಸವ ಅಂಗವಾಗಿ ಮೂಡಿ ಬಂದದ್ದು ಸಂತಸ ತಂದಿತು. ಗ್ರಾಮಗಳ ಅಭಿವೃದ್ಧಿಯಾದರೆ ದೇಶದ ಅಭಿವೃದ್ಧಿಯಾಗುವುದು ನಿತ್ಯಸತ್ಯ. ಮಹಾತ್ಮ ಗಾಂಧೀಜಿಯವರ ಘೋಷಣೆಯು ಇದೇ ಆಗಿತ್ತು. ರಾಚಯ್ಯ ಚೌಕಿಮಠರವರು ತಮ್ಮ ಲೇಖನದಲ್ಲಿ ಈ ವಿಚಾರವನ್ನು ಚೆನ್ನಾಗಿವ್ಯಕ್ತಪಡಿಸಿದ್ದಾರೆ. ವರದಿ ಲೇಖನ, ಚಿಂತನೆ, ಯಶೋಗಾಥೆ, ಸುತ್ತೋಲೆಗಳು ವಾಚಕರಿಗೆ ಪ್ರಯೋಜನಕಾರಿಗಳಾಗಿವೆ. ಕರ್ನಾಟಕ ವಿಕಾಸ ಗ್ರಾಮಗಳ ಅಭಿವೃದ್ಧಿಗೆ ಹತ್ತು ಹಲವು ವಿಚಾರ ತಿಳಿಸುವ ಉತ್ತಮ ಪತ್ರಿಕೆಯಾಗಿದೆ.

**ಶ್ರೀ ಕೊತ್ತಲ ಮಹದೇವಪ್ಪ**
ಶಿಕ್ಷಕ-ಸಾಹಿತಿ, ವಿನಾಯಕನಗರ, ಲಕ್ಷ್ಮೇಶ್ವರ, ಗದಗ 582116.

ವರದಿ

# ಗ್ರಾಮ ಉದಯ್ ಸೆ ಭಾರತ್ ಉದಯ್ ಕಾರ್ಯಕ್ರಮ



ಎನ್. ಮಂಜುಶ್ರೀ, ಐ.ಎ.ಎಸ್.

ಗ್ರಾಮ ಉದಯ್ ಸೆ ಭಾರತ್ ಉದಯ್ ಅಭಿಯಾನ, ರಾಷ್ಟ್ರೀಯ ಸಾಮರಸ್ಯ ದಿವಸ್ ಮತ್ತು ರಾಷ್ಟ್ರೀಯ ಪಂಚಾಯತ್ ರಾಜ್ ದಿವಸ್ ಕಾರ್ಯಕ್ರಮವನ್ನು ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ವತಿಯಿಂದ ಯಶಸ್ವಿಯಾಗಿ ಆಚರಿಸಲಾಯಿತು.

ಗ್ರಾಮ ಉದಯ್ ಸೆ ಭಾರತ್ ಉದಯ್ ಅಭಿಯಾನ, ರಾಷ್ಟ್ರೀಯ ಸಾಮರಸ್ಯ ದಿವಸ್ ಮತ್ತು ರಾಷ್ಟ್ರೀಯ ಪಂಚಾಯತ್ ರಾಜ್ ದಿವಸ್ ಆಚರಣೆಗಾಗಿ ದಿನಾಂಕ: 14.04.2016 ರಿಂದ ದಿನಾಂಕ: 24.04.2016ರವರೆಗೆ ಗ್ರಾಮ ಪಂಚಾಯತಿಗಳಲ್ಲಿ ಜನಪ್ರತಿನಿಧಿಗಳು, ಸ್ವ-ಸಹಾಯ ಸಂಘದ ಪ್ರತಿನಿಧಿಗಳು, ಕ್ಷೇತ್ರ ಇಲಾಖೆಗಳ ತಳಮಟ್ಟದ ಎಲ್ಲಾ ಅಧಿಕಾರಿ, ಗ್ರಾಮಸ್ಥರನ್ನು ಆಹ್ವಾನಿಸಿ, ಜನವಸತಿ ಸಭೆ, ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳನ್ನು ಆಯೋಜಿಸಿ ಪರಿಣಾಮಕಾರಿಯಾಗಿ ಯಶಸ್ವಿಗೊಳಿಸಲು ಸರ್ಕಾರದ ಸುತ್ತೋಲೆಯಲ್ಲಿ ಈ ಕೆಳಕಂಡಂತೆ ಸೂಚಿಸಲಾಗಿದೆ.



1. **ಸಾಮಾಜಿಕ ನ್ಯಾಯ/ಸಾಮಾಜಿಕ ಸಾಮರಸ್ಯ.**
2. **ಕೃಷಿ, ಆರೋಗ್ಯ ಮತ್ತು ಶಿಕ್ಷಣ.**
3. **ಗ್ರಾಮ ಪಂಚಾಯಿತಿಯಿಂದ ಸಾರ್ವಜನಿಕರಿಗೆ ದೊರಕುವ ಸೌಲಭ್ಯಗಳು ಹಾಗೂ ಯೋಜನೆಗಳು.**
4. **ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ(ಜಿ.ಪಿ.ಡಿ.ಪಿ.) ತಯಾರಿಕೆ.**
5. **ರಾಷ್ಟ್ರೀಯ ಪಂಚಾಯತ್ ರಾಜ್ ದಿವಸ್ ಆಚರಣೆಯ ಹಿನ್ನೆಲೆ ಮತ್ತು ಮಹತ್ವ.**
6. **ಸಾಂಸ್ಕೃತಿಕ ಚಟುವಟಿಕೆಗಳು, ವಸ್ತು ಪ್ರದರ್ಶನ ಮತ್ತು ಗ್ರಾಮೀಣ ಕ್ರೀಡಾ ಕೂಟಗಳ ಆಯೋಜನೆ.**

ಅದರಂತೆ, ದಿನಾಂಕ: 14.04.2016 ರಿಂದ ದಿನಾಂಕ: 24.04.2016ರವರೆಗೆ ಬೆಂಗಳೂರು ನಗರ ಜಿಲ್ಲೆಯಲ್ಲಿ **"ಗ್ರಾಮ ಉದಯ್ ಸೆ**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಬೆಂಗಳೂರು.

**ಭಾರತ್ ಉದಯ್ ಅಭಿಯಾನ, ರಾಷ್ಟ್ರೀಯ ಸಾಮರಸ್ಯ ದಿವಸ್ ಮತ್ತು ರಾಷ್ಟ್ರೀಯ ಪಂಚಾಯತ್ ರಾಜ್ ದಿವಸ್"** ಆಚರಣೆಯನ್ನು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದಿಷ್ಟಪಡಿಸಿದ ಅಂಶಗಳಂತೆ, ಕುಮಾರಿ ಎನ್. ಮಂಜುಶ್ರೀ, ಐ.ಎ.ಎಸ್., ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಬೆಂಗಳೂರು ಇವರ ಉಸ್ತುವಾರಿಯಲ್ಲಿ, ಗ್ರಾಮ ಉದಯ್ ಸೆ ಭಾರತ್ ಉದಯ್ ಕಾರ್ಯಕ್ರಮದ ಮಾರ್ಗದರ್ಶಿ ಅಧಿಕಾರಿ, ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿ ಕೆ. ರೇವಣಪ್ಪ, ಜಿಲ್ಲಾ ವಾರ್ಡ್‌ಸಭಾ ಮತ್ತು ಗ್ರಾಮಸಭಾ ನೋಡಲ್ ಅಧಿಕಾರಿ ಜಿಲ್ಲಾ ಪಂಚಾಯಿತಿಯ ಸಹಾಯಕ ಯೋಜನಾಧಿಕಾರಿ ಕೆ.ಜಿ. ಜಗದೀಶ್, ಜಿಲ್ಲಾ ಪಂಚಾಯಿತಿಯ ಮುಖ್ಯ ಯೋಜನಾಧಿಕಾರಿ ನರಸಿಂಹಯ್ಯ ಮತ್ತು ಸಹಾಯಕ ಯೋಜನಾಧಿಕಾರಿ ಮುನಿಕೃಷ್ಣಪ್ಪರವರನ್ನು ತಾಲ್ಲೂಕು ನೋಡಲ್ ಅಧಿಕಾರಿಗಳಾಗಿ ಮತ್ತು ಗ್ರಾಮ ಪಂಚಾಯಿತಿಗೆ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಿ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ 96 ಗ್ರಾಮ ಪಂಚಾಯಿತಿಗಳಲ್ಲಿ ಸ್ಥಳೀಯವಾಗಿ ಸಾಕಷ್ಟು ಪ್ರಚಾರಗಳನ್ನು ಕೈಗೊಂಡು, ಕಾರ್ಯಸೂಚಿಯ ವೇಳಾಪಟ್ಟಿಯನ್ನು ಹೊರಡಿಸಿ, ದಿನಾಂಕ: 14.04.2016 ರಿಂದ ದಿನಾಂಕ: 16.04.2016ರವರೆಗೆ ಸಾಮಾಜಿಕ ಸಾಮರಸ್ಯ ಕಾರ್ಯಕ್ರಮ, ದಿನಾಂಕ: 17.04.2016 ರಿಂದ ದಿನಾಂಕ: 20.04.2016ರವರೆಗೆ ಗ್ರಾಮ ಕಿಸಾನ್ ಸಭಾ ಹಾಗೂ ದಿನಾಂಕ: 21.04.2016 ರಿಂದ ದಿನಾಂಕ: 24.04.2016ರವರೆಗೆ ಗ್ರಾಮ ಸಭಾ ಮೀಟಿಂಗ್ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಚರಿಸಲಾಯಿತು.

## ಸಾಮಾಜಿಕ ಸಾಮರಸ್ಯ ಕಾರ್ಯಕ್ರಮ

(ದಿನಾಂಕ: 14.04.2016 ರಿಂದ ದಿನಾಂಕ:



16.04.2016ರವರೆಗೆ)

"ರಾಷ್ಟ್ರೀಯ ಸಮ್ರಸ್ಥ ದಿವಸ್" ಆಗಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಜಯಂತಿಯನ್ನು ಏರ್ಪಡಿಸಿ, ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಜೀವನ, ವ್ಯಕ್ತಿತ್ವ, ರಾಷ್ಟ್ರೀಯ ಏಕೀಕರಣದಲ್ಲಿ ಅವರ ದೃಷ್ಟಿತ್ವ ಮತ್ತು ಸಂವಿಧಾನಾತ್ಮಕ ಕೊಡುಗೆಗಳ ಬಗ್ಗೆ ವಿಚಾರಧಾರೆಗಳನ್ನು ಜನ ಪ್ರತಿನಿಧಿಗಳು ಮತ್ತು ಜನಸಾಮಾನ್ಯರು, ಸ್ವಸಹಾಯ ಸಂಘಗಳು, ಯುವಕ/ಯುವತಿ ಸಂಘಗಳು ಹಾಗೂ ಇತರೆ ಸಂಘಟನೆಗಳ ಸದಸ್ಯರುಗಳಿಗೆ ಪ್ರಚುರಪಡಿಸಲಾಯಿತು. ಸಾಮಾಜಿಕ ಸಾಮರಸ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಕೋಮು ಸಾಮರಸ್ಯ ಮತ್ತು ಸಹಿಷ್ಣುತೆ ಕಾಯ್ದುಕೊಳ್ಳುವ ಬಗ್ಗೆ ಮತ್ತು ಗ್ರಾಮಗಳಲ್ಲಿ ಸಂಪೂರ್ಣವಾಗಿ ಶೌಚಾಲಯ ನಿರ್ಮಾಣ ಮಾಡಿ, ಅವುಗಳನ್ನು ಬಳಸಿಕೊಳ್ಳುವುದರ ಮಾಲಕ ಹಾಗೂ ಹಾಲಿ ಇರುವ ಶೌಚಾಲಯಗಳನ್ನು ಸಮರ್ಪಕವಾಗಿ ಬಳಸಿ ಸ್ವಚ್ಛತೆ ವಿಷಯದಲ್ಲಿ ನಿರಂತರತೆಯನ್ನು ಕಾಪಾಡುವ ಮೂಲಕ ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತ, ಸ್ವಾವಲಂಬಿ ಸ್ವಚ್ಛ ಗ್ರಾಮಗಳನ್ನಾಗಿಸಲು ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿಜ್ಞಾವಿಧಿಯನ್ನು ಭೋಧಿಸಲಾಯಿತು.

ಪರಿಶಿಷ್ಟ ಜಾತಿ ಮತ್ತು ಪಂಗಡದ ವರ್ಗದವರ ಕಲ್ಯಾಣಕ್ಕಾಗಿ ಗ್ರಾಮ ಪಂಚಾಯಿತಿಗಳಿಂದ ನೀಡಲಾಗುವ ಸೌಲಭ್ಯಗಳ ಬಗ್ಗೆ ತಿಳಿಸಿ, ಅರ್ಹ ಫಲಾನುಭವಿಗಳನ್ನು ಗುರುತಿಸಿ ಅಡುಗೆ ಅನಿಲ ಸಂಪರ್ಕ ಸಾಧನಗಳಾದ ಗ್ಯಾಸ್ ಸಿಲಿಂಡರ್, ಗ್ಯಾಸ್



ಸ್ಟೌವ್, ಗ್ಯಾಸ್ ರಕ್ಷಣಾ ಉಪಕರಣ, ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು. ಪರಿಶಿಷ್ಟ ಜಾತಿ ಮತ್ತು ಪಂಗಡದ ವರ್ಗದವರಿಗೆ ಇತರೆ ಪ್ರಮುಖ ಇಲಾಖೆ / ನಿಗಮದಿಂದ ವಿವಿಧ ಯೋಜನೆಗಳಡಿ ಕಾರ್ಯಗತಗೊಳಿಸಲಾಗುತ್ತಿರುವ ಆರ್ಥಿಕ ನೆರವಿನ ಕಾರ್ಯಕ್ರಮಗಳ ಬಗ್ಗೆ ವಿವರ ನೀಡಲಾಯಿತು.

ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಾಂಗದವರು ವಾಸಿಸುವ ಕಾಲೋನಿಗಳಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಮತ್ತು ಗ್ರಾಮಸ್ಥರ ಸಮ್ಮುಖದಲ್ಲಿ ರಸ್ತೆ ಸ್ವಚ್ಚಗೊಳಿಸುವಿಕೆ, ಚರಂಡಿ ಹೂಳು ತೆಗೆಯುವ ಕಾರ್ಯವನ್ನು ನಡೆಸಲಾಯಿತು. ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಪರಿಶಿಷ್ಠ ಜಾತಿ ಮತ್ತು ಪಂಗಡದ ಜನಾಂಗದ ಕಾಲೋನಿಗಳಲ್ಲಿ ದ್ರವ ತ್ಯಾಜ್ಯ ನಿರ್ವಹಣೆಗೆ ತ್ವರಿತವಾಗಿ ಸೋಕ್ ಪಿಟ್‌ಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ತೀರ್ಮಾನಿಸಲಾಗಿದೆ

ಸಾಮಾಜಿಕ ಕಾರ್ಯಕ್ರಮಗಳ ಅನುಷ್ಠಾನದಲ್ಲಿ, ಶೋಷಿತ ವರ್ಗದವರು, ಅಂಗವಿಕಲರು, ಹಿರಿಯ ನಾಗರೀಕರು, ಅಲೆಮಾರಿಗಳು, ವಸತಿ ರಹಿತರು, ಆರ್ಥಿಕವಾಗಿ ಹಿಂದುಳಿದವರ ಸಬಲೀಕರಣದಲ್ಲಿ ಗ್ರಾಮ ಪಂಚಾಯಿತಿ, ಜನಪ್ರತಿನಿಧಿಗಳು, ಸ್ವಸಹಾಯ ಸಂಘಗಳು, ಮಹಿಳಾ ಸಂಘಗಳು, ಯುವಕ ಸಂಘಗಳ ಪಾತ್ರಗಳು ಮಹತ್ವವಾಗಿದ್ದು, ಸಮನ್ವಯತೆಯನ್ನು ಸಾಧಿಸಿ, ಮದ್ಯಪಾನ, ಇತರೆ ದುಷ್ಚಟಮುಕ್ತ ಸಮಾಜ ನಿರ್ಮಾಣ ಮಾಡಲು, ಸಾಮಾಜಿಕ ಪಿಡುಗುಗಳಾದ ಬಾಲ ಕಾರ್ಮಿಕ, ಜೀತ ಪದ್ಧತಿಗಳನ್ನು ಹೋಗಲಾಡಿಸಲು ಜನವಸತಿ ಸಭೆ, ವಾರ್ಡ್‌ಸಭೆಗಳಲ್ಲಿ ಪ್ರೇರೇಪಿಸಲಾಯಿತು. ಸ್ಥಳೀಯ ಆರ್ಥಿಕ ಅಭಿವೃದ್ಧಿಗಾಗಿ ಗ್ರಾಮಗಳಲ್ಲಿ ಸಾಧಿಸಬೇಕಾಗಿರುವ ಅಭಿವೃದ್ಧಿಯ ಬಗ್ಗೆ ಚರ್ಚಿಸಿ, ಮುಂದಿನ ಐದು ವರ್ಷಗಳಲ್ಲಿ ಕೈಗೊಳ್ಳಬಹುದಾದ ಪ.ಜಾತಿ ಮತ್ತು ಪ.ಪಂಗಡದ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಚರ್ಚಿಸಿ, ವಿವಿಧ ಯೋಜನೆಗಳಡಿ ಅನುಷ್ಠಾನಕರಿಸಬಹುದಾದ ಕಾರ್ಯಗಳು, ಫಲಾನುಭವಿಗಳ ಆಯ್ಕೆಯನ್ನು ಆಧ್ಯತಾವಾರು ಗುರುತಿಸಿ ಪಟ್ಟಿ ಮಾಡಲಾಯಿತು. ಪ.ಜಾತಿ/ಪ.ಪಂಗಡದ ಜನಾಂಗದವರು ವಾಸಿಸುವ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದ ಗ್ರಾಮಗಳನ್ನು ಆಯ್ಕೆ ಮಾಡಿ, ಕುಡಿಯುವ ನೀರು, ರಸ್ತೆ



ಮತ್ತು ಚರಂಡಿ ಅಭಿವೃದ್ಧಿ ಪಡಿಸುವುದು. ನಾಗರೀಕ ಹಕ್ಕುಗಳ ಸಂರಕ್ಷಣೆ, ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ದೌರ್ಜನ್ಯ ಪ್ರತಿಬಂಧ ನಿಯಮಗಳ ಬಗ್ಗೆ ತಿಳಿಸಲಾಯಿತು.

## ಗ್ರಾಮ ಕಿಸಾನ್ ಸಭಾ

(ದಿನಾಂಕ: 17.04.2016 ರಿಂದ ದಿನಾಂಕ: 20.04.2016ರವರೆಗೆ)

ಗ್ರಾಮ ಪಂಚಾಯಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ರೈತರಿಗೆ ಕೃಷಿ ಇಲಾಖೆಯ ಅಧಿಕಾರಿಗಳ ಸಹಭಾಗಿತ್ವದಲ್ಲಿ ಕೃಷಿಗೆ ಸಂಬಂಧಿಸಿದ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆ, ಪ್ರಧಾನ ಮಂತ್ರಿ ಕೃಷಿ ಸಿಂಚಯೀ, ಕೃಷಿ ಭಾಗ್ಯ, ಭೂಚೇತನ ಕೃಷಿ



ಅಭಿಯಾನ, ಸಾವಯುವ ಕೃಷಿ, ರಾಷ್ಟ್ರೀಯ ಕೃಷಿ ವಿಮಾ, ಬೇವು ಸಂಯೋಜಿತ ಗೊಬ್ಬರ ಮತ್ತು ಗ್ರಾಮೀಣ ವಿದ್ಯುದ್ಧೀಕರಣ ಮೊದಲಾದ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಯೋಜನೆಗಳ ಮಾಹಿತಿ ನೀಡಲಾಯಿತು. ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಒಕ್ಕಲು ಕಣ, ನಮ್ಮ ಹೊಲ ನಮ್ಮ ದಾರಿ, ಕುರಿ/ದನದ ದೊಡ್ಡಿ ಇತರೆ ಬಗ್ಗೆ ತಿಳಿಸಲಾಯಿತು. ಮಣ್ಣಿನ ತೇವಾಂಶ ರಕ್ಷಣಾ ಕ್ರಮಗಳು, ಕೃಷಿಹೊಂಡ ನಿರ್ಮಾಣ, ವೈಜ್ಞಾನಿಕ ಬೇಸಾಯ ಕ್ರಮಗಳು, ಸಾಯಿಲ್ ಹೆಲ್ತ್ ಕಾರ್ಡ್, ಪಶು ಸಂಗೋಪನೆ, ಪಿಸಿ ಕಲ್ಚರ್, ಬೆಳೆ ವರ್ತುಲ, ತೋಟಗಾರಿಕೆ, ಹನಿ ನೀರಾವರಿ ಮಹತ್ವ, ಯೋಜನೆಗಳ ಬಗ್ಗೆ ರೈತರಿಗೆ ಅರಿವು ಮೂಡಿಸಿ ಕೃಷಿ ಆದಾಯ ದ್ವಿಗುಣಗೊಳಿಸುವ ದಿಸೆಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಅರ್ಹ ಫಲಾನುಭವಿಗಳಿಗೆ ಕೀಟನಾಶಕ ಸಿಂಪರಣಾ ಯಂತ್ರಗಳನ್ನು ವಿತರಿಸಲಾಯಿತು. ದ್ರವ ತ್ಯಾಜ್ಯ ನಿರ್ವಹಣಾ ಇಂಗು ಗುಂಡಿಗಳ ನಿರ್ಮಾಣ ಕಾಮಗಾರಿಗಳ ಬಗ್ಗೆ ತಿಳಿಸಲಾಯಿತು. ಶ್ರೀ ಪಿ.ಎಸ್. ಚಕ್ರವರ್ತಿ, ಉಪಕಾರ್ಯದರ್ಶಿ, ಕೃಷಿ ಮಂತ್ರಾಲಯ, ಭಾರತ ಸರ್ಕಾರ ಇವರು ಕೇಂದ್ರ ಸರ್ಕಾರದ ಪ್ರತಿನಿಧಿಯಾಗಿ ಆಗಮಿಸಿ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿಯ ಜಿಲ್ಲಾ ಗ್ರಾಮ ಸಭಾ ನೋಡಲ್ ಅಧಿಕಾರಿ ಶ್ರೀ ಕೆ.ಜಿ. ಜಗದೀಶ್‌ರವರೊಂದಿಗೆ ಜಿಲ್ಲೆಯ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ "ಗ್ರಾಮ ಉದಯ್ ಸೆ ಭಾರತ್ ಉದಯ್" ಕಾರ್ಯಕ್ರಮವನ್ನು ವೀಕ್ಷಿಸಿರುತ್ತಾರೆ.

ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರು ಮತ್ತು ಸ್ವಚ್ಛತೆ, ತ್ಯಾಜ್ಯ ಮತ್ತು ಕಸ ನಿರ್ವಹಣೆಯ ಬಗ್ಗೆ ಅರಿವು ಮೂಡಿಸಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ದಿನ ನಿತ್ಯವು ಶೌಚಾಲಯವನ್ನು ಬಳಸಲು ತಿಳಿಸಲಾಯಿತು. ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತ ಗ್ರಾಮವನ್ನಾಗಿಸುವ ದಿಸೆಯಲ್ಲಿ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ತಿಳಿಸಲಾಯಿತು. ಹಲವು ಗ್ರಾಮ ಪಂಚಾಯಿತಿಗಳಲ್ಲಿ ಸಕ್ಕಿಂಗ್ ವಾಹನ ಮತ್ತು ಸ್ವಚ್ಛತಾ ವಾಹನಗಳಿಗೆ ಚಾಲನೆ ನೀಡಲಾಯಿತು.

ಆರೋಗ್ಯ ಇಲಾಖೆಯಿಂದ ಉಚಿತ ಆರೋಗ್ಯ ತಪಾಸಣೆ, ಉಚಿತ ಕಣ್ಣಿನ ಚಿಕಿತ್ಸೆ, ರಕ್ತದಾನ ಶಿಬಿರ, ಜಾನುವಾರು ಆರೋಗ್ಯ ತಪಾಸಣಾ ಶಿಬಿರ, ನೇತ್ರದಾನ ಶಿಬಿರಗಳನ್ನು ಏರ್ಪಡಿಸಲಾಯಿತು. ನೇತ್ರದಾನ ನೋಂದಣಿ, ಹಿರಿಯ ನಾಗರೀಕರಿಗೆ ಗುರುತಿನ ಚೀಟಿ ನೋಂದಣಿ ಮಾಡಿಸಲಾಯಿತು. ಸಾಂಕ್ರಾಮಿಕ



ರೋಗಗಳನ್ನು ತಡೆಗಟ್ಟಲು ಕೈಗೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳನ್ನು ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯಾಧಿಕಾರಿಗಳು ತಿಳಿಸಿದರು. ಗರ್ಭಿಣಿಯರಿಗೆ ದೊರಕುವ ಯೋಜನೆಗಳು ಮತ್ತು ಮುಂಜಾಗ್ರತಾ ಕ್ರಮಗಳ ಬಗ್ಗೆ ಅರಿವು ಮೂಡಿಸಲಾಯಿತು.

ರೈತರಲ್ಲಿ ಆತ್ಮಸ್ಥೈರ್ಯವನ್ನು ಹೆಚ್ಚಿಸಿ, ರೈತರ ಆತ್ಮಹತ್ಯೆ ತಡೆಯುವಲ್ಲಿ ವೈಜ್ಞಾನಿಕ ಕೃಷಿ ಪದ್ಧತಿಯು ಸಹಕಾರಿಯಾಗಲಿದ್ದು, ಅರಣ್ಯೀಕರಣ, ಸಾಂಪ್ರದಾಯಿಕ ನೀರಿನ ಮೂಲಗಳ ಪುನಶ್ಚೇತನಗೊಳಿಸುವುದು,



ಜಮೀನು ಅಭಿವೃದ್ಧಿ ಕಾಮಗಾರಿಗಳನ್ನು ಸಂಬಂಧಿಸಿದ ಇಲಾಖೆಗಳ ಮೂಲಕ ಅನುಷ್ಠಾನ ಗೊಳಿಸಲು ದೊರಕುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಹಿತಾದೃಷ್ಠಿಯಲ್ಲಿ ದೊರಕುವ ಸ್ಕಾಲರ್‌ಶಿಪ್, ವಿದ್ಯಾರ್ಥಿ ನಿಲಯದ ಸೌಲಭ್ಯಗಳ ಬಗ್ಗೆ ತಿಳಿಸಿ, ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸಲು ತಿಳಿಸಲಾಯಿತು.

## ಗ್ರಾಮ ಸಭಾ ಮೀಟಿಂಗ್

(ದಿನಾಂಕ: 21.04.2016 ರಿಂದ ದಿನಾಂಕ: 24.04.2016ರವರೆಗೆ)

ಚುನಾಯಿತ ಪ್ರತಿನಿಧಿಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಹಭಾಗಿತ್ವದಲ್ಲಿ, ಸಮಗ್ರ ವಿಕೇಂದ್ರಿಕರಣ ತತ್ವದ ಆಧಾರದಲ್ಲಿ ಪಂಚಾಯತ್ ರಾಜ್ 73ನೇ ಕಾಯಿದೆ ಜಾರಿಗೆ ಬಂದ ದಿನವನ್ನು ಗ್ರಾಮ ಪಂಚಾಯಿತಿಗಳಲ್ಲಿ ಜಾನಪದ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ಆಚರಿಸಲಾಯಿತು. ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡಿರುವ ಅಧಿಕಾರ, ಗ್ರಾಮ ಸಭೆಗಳಿಗೆ ನೀಡಿರುವ ಅಧಿಕಾರ ವಿಕೇಂದ್ರೀಕರಣ ಪರಿಕಲ್ಪನೆಯ ಬಗ್ಗೆ ನಾಗರೀಕರಿಗೆ ಅರಿವು ಮೂಡಿಸಲಾಯಿತು. ಗ್ರಾಮೀಣ ಸ್ವಚ್ಛತೆ, ವೈಯಕ್ತಿಕ ಶೌಚಾಲಯ ನಿರ್ಮಾಣ, ಗ್ರಾಮೀಣ ಕುಡಿಯುವ ನೀರು ಸರಬರಾಜು ಕಾಮಗಾರಿ, ಎನ್.ಆರ್.ಎಲ್.ಎಂ. ಯೋಜನೆ, 14ನೇ ಹಣಕಾಸು ಯೋಜನೆ, ಶೇಕಡ 25ರ ಪ.ಜಾತಿ/ಪ.ಪಂಗಡಗಳ ವೆಚ್ಚದ ಅನುದಾನ, ಶೇಕಡ 3ರ ವಿಕಲಚೇತನರ ವೆಚ್ಚದ ಅನುದಾನ, ಎಂ.ಜಿ.ಎನ್.ಆರ್.ಇ.ಜಿ.ಎ. ಕಾಮಗಾರಿಗಳು, ಘನತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣ, ದ್ರವ ತ್ಯಾಜ್ಯ ನಿರ್ವಹಣಾ ಸೋಕ್ ಪಿಟ್ ನಿರ್ಮಾಣದ ಬಗ್ಗೆ ಚರ್ಚಿಸಿ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಗ್ರಾಮ ಸಭೆಗಳನ್ನು ನಡೆಸಿ, ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದಂತೆ, ಪಂಚಾಯಿತಿ ಅಭಿವೃದ್ಧಿ ಯೋಜನೆಗಳನ್ನು ಚರ್ಚಿಸಿ, ಅಂತಿಮಗೊಳಿಸಲಾಯಿತು. ದಿನಾಂಕ: 23.04.2016 ರಂದು ಕರ್ನಾಟಕ ರಾಜ್ಯದ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಸ್ಯಾಟ್‌ಕಾಮ್ ಮೂಲಕ ನೀಡಿದ ಸಂದೇಶವನ್ನು ಹಾಗೂ ದಿನಾಂಕ: 24.04.2016ರಂದು "ರಾಷ್ಟ್ರೀಯ ಪಂಚಾಯತ್ ರಾಜ್ ದಿವಸ್" ಅಂಗವಾಗಿ ವಿಶೇಷ ಗ್ರಾಮ ಸಭೆಯಲ್ಲಿ ಭಾರತ ಸರ್ಕಾರದ ಸನ್ಮಾನ್ಯ



ಪ್ರಧಾನಮಂತ್ರಿಯವರು ನೀಡಿದ ಸಂದೇಶದ ಕಾರ್ಯಕ್ರಮವನ್ನು ಜನಪ್ರತಿನಿಧಿಗಳು, ಸಾರ್ವಜನಿಕರು ಮತ್ತು ವಿದ್ಯಾರ್ಥಿ ಗಳಿಗೆ ವೀಕ್ಷಿಸಲು ಅನುವು ಮಾಡಿ ಕೊಡಲಾಯಿತು.

ದಿನಾಂಕ: 24.04.2016ರ "ರಾಷ್ಟ್ರೀಯ ಪಂಚಾಯತ್ ರಾಜ್ ದಿವಸ್" ಅಂಗವಾಗಿ ದಿನಾಂಕ: 14.04.2016 ರಿಂದ ದಿನಾಂಕ: 24.04.2016ರವರೆಗೆ ಬೆಂಗಳೂರು ನಗರ ಜಿಲ್ಲೆಯಲ್ಲಿ "ಗ್ರಾಮ ಉದಯ್ ಸೆ ಭಾರತ್ ಉದಯ್" ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಚರಿಸಲಾಯಿತು.

ಲೇಖನ

# 'ವಿಶ್ವ ಪರಿಸರ ದಿನ'
# ಪಂಚಾಯತಿ ಸಹಯೋಗದೊಂದಿಗೆ
# ಶಾಲಾ ಮಕ್ಕಳಿಗೊಂದು ಮಹತ್ವದ ಮಾಹಿತಿ



ಜಿ. ವೆಂಕಟೇಶ್

**ಏಳು ನೂರು ಕೋಟಿ ಕನಸುಗಳು ಒಂದೇ ಪೃಥ್ವಿ, ಕಾಳಜಿಯಿಂದ ಬಳಸಿ**

'ಏರುತ್ತಿರುವ ಜನ
ಪೇರುತ್ತಿರುವ ಧನ
ದ್ವಂದ್ವ ಸಹಿತ ಮನ
ನಾಶವಾಗುತ್ತಿದೆ ವನ
ಇಂದು ಊರೆಲ್ಲಾ
ಬರೀ ಕಾಂಕ್ರೀಟ್ ಕಾನನ!'

ಭೂಮಿ ಮತ್ತು ಪರಿಸರ ರಕ್ಷಣೆಗೆ ಪರಿಸರ ಸ್ನೇಹಿ ಚಟುವಟಿಕೆಗಳನ್ನು ಕೈಗೊಳ್ಳುವಂತೆ ಜಾಗತಿಕವಾಗಿ ಜಾಗೃತಿ ಮೂಡಿಸಲು ಪ್ರತಿ ಜೂನ್- 5ನ್ನು ವಿಶ್ವ ಪರಿಸರ ದಿನವಾಗಿ ಆಚರಿಸಲಾಗುತ್ತಿದೆ.



ಎಂಬ ಕವಿವಾಣಿಯಂತೆ ಜೂನ್- 5 ರ ಪರಿಸರ ದಿನಾಚರಣೆಗೆ ಹೇಳಿ ಬರೆಯಿಸಿದಂತಿದೆ. ಅಂದರೆ ಜನ ಸಂಖ್ಯಾ ಸ್ಫೋಟ, ಹೆಚ್ಚುತ್ತಿರುವ ಆರ್ಥಿಕ ಚಟುವಟಿಕೆಗಳು ಮುಂತಾದ ಕಾರಣಗಳಿಂದ ನೈಸರ್ಗಿಕ ಸಂಪನ್ಮೂಲಗಳು ಅಪಾಯದ ಅಂಚು ತಲುಪಿವೆ. ಇದೇ ಪರಿಸ್ಥಿತಿ ಮುಂದುವರೆದರೆ 2050ರ ವೇಳೆಗೆ ಮಾನವರ ವಾಸಕ್ಕೆ ಇಂತಹ ಮೂರು ಭೂಮಿಗಳು ಸಾಕಾಗುವುದಿಲ್ಲ ಎಂದು ವಿಜ್ಞಾನಿಗಳು ಆತಂಕ ವ್ಯಕ್ತ ಪಡಿಸಿದ್ದಾರೆ.

### ಪರಿಸರ ದಿನದ ಹಿನ್ನಲೆ:

ನೈಸರ್ಗಿಕ ಸಂಪನ್ಮೂಲಗಳ ಮೇಲೆ ಹೆಚ್ಚಿನ ಅವಲಂಬನೆಯ ಕಾರಣ ಜಾಗತಿಕ ತಾಪಮಾನ ಹಾಗೂ ಹವಾಮಾನ ವೈಪರಿತ್ಯದ ಮೇಲೆ ಗಂಭೀರ

ಕ್ಲರ್ಕ್ ಕಂ ಕಂಪ್ಯೂಟರ್ ಆಪರೇಟರ್, ಅಗರ ಗ್ರಾಮ ಪಂಚಾಯಿತಿ, ಬೆಂಗಳೂರು-560082.



ಪರಿಣಾಮ ಬೀರಿದೆ. ಮಾನವನ ಮಧ್ಯೆ ಪ್ರವೇಶದಿಂದಾಗಿ ಪ್ರಾಣಿ ಮತ್ತು ಸಸ್ಯ ಸಂಕುಲಗಳಿಗೆ ಧಕ್ಕೆಯಾಗಿದ್ದು, ಮಾನವ–ವನ್ಯ ಜೀವಿಗಳ ನಡುವಿನ ಸಂಘರ್ಷ ತೀವ್ರಗೊಂಡಿದೆ. ಮಾನವ ತನ್ನ ಆಸೆ ಆಕಾಂಕ್ಷೆಗಳಿಗೆ ಕಡಿವಾಣ ಹಾಕಿಕೊಳ್ಳುವ ಮೂಲಕ ಮುಂದಿನ ಪೀಳಿಗೆಯವರಿಗೆ ಭೂಮಿಯನ್ನು ಕಾಪಾಡವುದು ಆದ್ಯ ಕರ್ತವ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಭೂಮಿ ಮತ್ತು ಪರಿಸರ ರಕ್ಷಣೆಗೆ ಪರಿಸರ ಸ್ನೇಹಿ ಚಟುವಟಿಕೆಗಳನ್ನು ಕೈಗೊಳ್ಳುವಂತೆ ಜಾಗತಿಕವಾಗಿ ಜಾಗೃತಿ ಮೂಡಿಸಲು ಪ್ರತಿ ಜೂನ್– 5ನ್ನು ವಿಶ್ವ ಪರಿಸರ ದಿನವಾಗಿ ಆಚರಿಸಲಾಗುತ್ತಿದೆ.

1972ರಲ್ಲಿ ನಡೆದ ‘ಮಾನವ – ಪರಿಸರ’ ಕುರಿತ ಸಮ್ಮೇಳನದಲ್ಲಿ ವಿಶ್ವ ಸಂಸ್ಥೆಯ ಮಹಾಧಿವೇಶನ ಪ್ರತಿ ಜೂನ್–5ನ್ನು ‘ವಿಶ್ವ ಪರಿಸರ ದಿನ’ವಾಗಿ ಆಚರಿಸುವಂತೆ ಘೋಷಿಸಿತು. ಪ್ರತಿ ವರ್ಷವೂ ಆಯಾ ಸಂದರ್ಭಕ್ಕೆ ತಕ್ಕ ಘೋಷವಾಕ್ಯದೊಂದಿಗೆ ಪರಿಸರ ದಿನವನ್ನು ಆಚರಿಸಲಾಗುತ್ತಿದೆ. ‘ಏಳು ನೂರುಕೋಟಿ ಕನಸುಗಳು ಒಂದೇ ಪೃಥ್ವಿ, ಕಾಳಜಿಯಿಂದ ಬಳಸಿ’ ಎಂಬುದು ಪ್ರಸಕ್ತ 2015 ಸಾಲಿನ ಘೋಷವಾಕ್ಯ ದೊಂದಿಗೆ 2011ರಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆಗೆ ಭಾರತ ಮುಂದಾಳತ್ವ ವಹಿಸಿತ್ತು.

ಪ್ರಸಕ್ತ ಗಳಿಗೆಯಲ್ಲಿ ಹಿರಿಯ ಕಿರಿಯರೆನ್ನದೆ ಪ್ರತಿಯೊಬ್ಬರೂ ತಮ್ಮ ಪರಿಸರದ ರಕ್ಷಣೆಯ ಹೊಣೆಯ ಜೊತೆಗೆ ಪರಿಸರ ಸಂರಕ್ಷಣೆ ಮತ್ತು ನಿರ್ವಹಣೆಯ ಪಾತ್ರದ ಜೊತೆ ಈ ಬಾರಿಯ ಧ್ಯೇಯ ವಾಕ್ಯ ‘ಏಳು ನೂರು ಕೋಟಿ ಕನಸುಗಳು ಒಂದೇ ಪೃಥ್ವಿ, ಕಾಳಜಿಯಿಂದ ಬಳಸಿ’ ಪ್ರತಿಯೊಬ್ಬರಿಗೂ ತಿಳಿದಿರಬೇಕಾದ ವಿಚಾರ.

‘ಹಸಿರೇ ಉಸಿರು’ ಎಂಬುದನ್ನು ನಾವೆಲ್ಲಾ ಮರೆತು ಕಾಡು ಎಂಬ ಪದವನ್ನು ಬರೀ ಪುಸ್ತಕದ ಹಾಳೆಯ ಮೇಲೆ ಚಿತ್ರದ ರೂಪದಲ್ಲಿ ನೋಡುವಂತಾಗುತ್ತಿರುವ ಈ ಸಂದರ್ಭದಲ್ಲಿ ನಗರೀಕರಣದ ಹೆಸರಿನಲ್ಲಿ ಮರಗಳನ್ನು ಧರೆಗಿಳಿಸಿ ಆ ಜಾಗದಲ್ಲಿ ರಸ್ತೆ, ಮನೆಗಳು, ಮಾಲ್‌ಗಳು, ಅಪಾರ್ಟ್‌ಮೆಂಟ್‌ಗಳು ನಿರ್ಮಾಣವಾಗುತ್ತಿದೆ. ಪರಿಸರದ ನಾಶದತ್ತ ಹೆಜ್ಜೆ ಇಡುತ್ತಿರುವ ನಮ್ಮಗಳ ಮನಸ್ಥಿತಿಯಲ್ಲಿ ಎಚ್ಚರಿಕೆಯ ಗಂಟೆ ಮೊಳಗಿಸಲು ಮತ್ತೆ ಬಂದಿದೆ “ವಿಶ್ವ ಪರಿಸರ ದಿನ”. 1972ರಿಂದಲೂ ನಿರಂತರವಾಗಿ ಆಚರಿಸಲಾಗುತ್ತಿರುವ ಈ ದಿನವನ್ನು ಯುನೈಟೆಡ್ ನೇಷನ್ಸ್ ಎನ್ವಿರಾನ್‌ಮೆಂಟ್ ಪ್ರೋಗ್ರಾಂ ಯೋಜನೆಯ ಅಡಿಯಲ್ಲಿ ಆಚರಿಸಲಾಗುತ್ತಿದೆ. ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಕೂಡ ಕಳೆದ 25 ವರ್ಷಗಳಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರ ಹಬ್ಬವನ್ನು ಆಚರಿಸಿಕೊಂಡು ಬರುತ್ತಿರುವ ಜೊತೆಗೆ ಈ ವರ್ಷವೂ ಜೂನ್–5ರಂದು ನಮ್ಮ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ವ್ಯಾಪ್ತಿಗಳಲ್ಲಿ ಬರುವ ಎಲ್ಲಾ ಶಾಲಾ ಕಾಲೇಜುಗಳ ಮಕ್ಕಳಿಗೂ ಈ ಪರಿಸರದ ಮಹತ್ವದ ಅರಿವಾಗಲಿ ಎಂಬುದು ನಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಶಯ.

### ಪಂಚಾಯತಿಗಳಲ್ಲಿ ಪರಿಸರ ದಿನಾಚರಣೆ:

ವಿಶ್ವದ ಎಲ್ಲೆಡೆ ಎಲ್ಲಾ ಸಂಘ, ಸಂಸ್ಥೆಗಳು ಸದರಿ ಪರಿಸರ ದಿನ ಆಚರಣೆ ವಿವಿಧ ಧ್ಯೇಯಗಳ ಮೂಲಕ ಆಚರಿಸಲಾಗುತ್ತಿದೆ. ಕಳೆದ ಮೂರ್‍ನಾಲ್ಕು ವರ್ಷಗಳಿಂದ ಕರ್ನಾಟಕ ಸರ್ಕಾರ ಗ್ರಾಮ ಪಂಚಾಯತಿ ಮಟ್ಟದಲ್ಲಿ ಜೈವಿಕ ಇಂಧನದ ಉತ್ಪಾದನೆ ಮತ್ತು ಬಳಕೆಯ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯು ರಾಜ್ಯಾದ್ಯಂತ ಜೂನ್– 5ರಂದು ಅಂತರರಾಷ್ಟ್ರೀಯ ಪರಿಸರ ದಿನಾಚರಣೆ ಆಚರಿಸಲಾಗುತ್ತಿದೆ. ಈ ದಿನಾಚರಣೆ ಅಂಗವಾಗಿ ರಾಜ್ಯಾದ್ಯಂತ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್‌ಗಳು ಸರ್ಕಾರದ ವಿವಿಧ ಇಲಾಖೆಗಳು, ಸಂಘ, ಸಂಸ್ಥೆಗಳ ಸಹಯೋಗದೊಂದಿಗೆ ಜೈವಿಕ ಇಂಧನ ಉತ್ಪಾದನೆ ಹಾಗೂ ಬಳಕೆಯನ್ನು ಪ್ರೋತ್ಸಾಹಿಸಲು ಈ ಕೆಳಕಂಡ ಐಇಸಿ ಚಟುವಟಿಕೆ ಗಳನ್ನು ಹಮ್ಮಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ.



1. ಎಲ್ಲಾ ಶಾಲಾ ಕಾಲೇಜುಗಳಲ್ಲಿ ಜೈವಿಕ ಇಂಧನ ಕುರಿಯು ಚರ್ಚಾಕೂಟ, ಚಿತ್ರ ಕಲಾ ಶಿಭಿರ, ಕಾರ್ಯಾಗಾರ, ವಸ್ತು ಪ್ರದರ್ಶನ ಇತ್ಯಾದಿಗಳನ್ನು ಏರ್ಪಡಿಸುವುದು.
2. ವಿವಿಧ ಜೈವಿಕ ಇಂಧನ ಸಸಿಗಳಾದ ಹೊಂಗೆ, ಬೇವು, ಹಿಪ್ಪು, ಸಿರೂಬ ಸಸಿಗಳನ್ನು ನೆಡುವ ಕಾರ್ಯಕ್ರಮ.
3. ಭಿತ್ತಿಪತ್ರ, ಕರ ಪತ್ರ ಇತ್ಯಾದಿಗಳ ಮುದ್ರಣ ಮತ್ತು ಹಂಚಿಕೆ.
4. ಸ್ಥಳೀಯ ದಿನಪತ್ರಿಕೆಗಳಲ್ಲಿ ಜೈವಿಕ ಇಂಧನ ಬಳಕೆ ಬಗ್ಗೆ ಕಾರ್ಯಕ್ರಮಗಳ ವರದಿ, ಪರಿಸರ ಸಂರಕ್ಷಣೆ, ಜೈವಿಕ ಇಂಧನ ಉತ್ಪಾದನೆ ಮತ್ತು ಬಳಕೆಗೆ ಪ್ರೋತ್ಸಾಹ ನೀಡುವ ಸಾರ್ವಜನಿಕ ಪ್ರಕಟಣೆಗಳು.
5. ಸ್ಥಳೀಯ ಜನಪ್ರತಿನಿಧಿಗಳನ್ನೊಳಗೊಂಡ ಸಭಾ ಕಾರ್ಯಕ್ರಮಗಳು, ಸೈಕಲ್ ಜಾಥಾ, ಜಾಗೃತಿ ನಡಿಗೆ ಇತ್ಯಾದಿಗಳನ್ನು ಆಯೋಜಿಸುವುದು ಇನ್ನು ಹತ್ತು ಹಲವು.

"ರಾಷ್ಟ್ರದ ಭದ್ರತೆಗೆ, ಪರಿಸರ ಸಂರಕ್ಷಣೆಗೆ, ಇಂಧನ ಸಂರಕ್ಷಣೆಗೆ ಮುಂದಾಗೋಣ ಮುಂಬರುವ ಸಂಕಷ್ಟದ ದಿನಗಳನ್ನು ಸಮರ್ಥವಾಗಿ ಎದುರಿಸಲು ಕಂಕಣ ಬದ್ಧರಾಗೋಣ, ಜೈವಿಕ ಇಂಧನ ಬೆಳೆಸೋಣ" ಪ್ರತಿಜ್ಞೆಯೊಂದಿಗೆ ಈ ಜೈವಿಕ ಇಂಧನದ ಬಗ್ಗೆ ಇನ್ನಷ್ಟು ವಿಚಾರಗಳನ್ನು ತಿಳಿದುಕೊಳ್ಳೋಣ.

### ಜೈವಿಕ ಇಂಧನ:

ಜೈವಿಕ ಇಂಧನವು ಜೈವಿಕ ಮೂಲಗಳಿಂದ ಅಂದರೆ ಸಸ್ಯಜನ್ಯ ಅಥವಾ ಪ್ರಾಣಿಜನ್ಯ ಮೂಲಗಳಿಂದ ಉತ್ಪಾದನೆಯಾಗುವ ಇಂಧನ, ವಿವಿಧ ಎಣ್ಣೆ ಬೀಜಗಳು, ಪ್ರಾಣಿಜನ್ಯ ಕೊಬ್ಬು, ಸಿಹಿಜೋಳ, ಗೋವಿನ ಜೋಳ ಮುಂತಾದ ಸಕ್ಕರೆ ಅಂಶವುಳ್ಳ ಉತ್ಪನ್ನಗಳಿಂದ ಭವಿಷ್ಯದಲ್ಲಿ ಸಮುದ್ರದ ಹಿನ್ನೀರಿನಲ್ಲಿ, ಅನುಪಯುಕ್ತ ಹಾಗೂ ಮಲಿನ ನೀರಿನ ಮೇಲೆ ಸುಲಭವಾಗಿ ಬೆಳೆಯಬಲ್ಲ ಆಲ್ಗಿ (ಹಸಿರು ಪಾಚಿ) ಬೆಳೆಗಳಿಂದ ಜೈವಿಕ ಇಂಧನವನ್ನು ತಯಾರಿಸಿ ವಾಹನ ಹಾಗೂ ಇತರೆಡೆ ಬಳಸಬಹುದಾಗಿದೆ.

ವಿಶ್ವದ ಕಚ್ಚಾ ತೈಲದ ನಿಕ್ಷೇಪ ಮುಂಬರುವ 30 ವರ್ಷಗಳಲ್ಲಿ ಬರಿದಾಗುವ ಸೂಚನೆಯನ್ನು ನಮ್ಮ ವಿಜ್ಞಾನಿಗಳು ನೀಡಿದ್ದಾರೆ. ಭಾರತದ ತೈಲ ನಿಕ್ಷೇಪ ಕೇವಲ 10 ವರ್ಷಗಳಿಗಾಗುವಷ್ಟು ಮಾತ್ರ ಲಭ್ಯವಿರುವುದಾಗಿ ಊಹಿಸಿದ್ದಾರೆ. ಆದ್ದರಿಂದ ಪರ್ಯಾಯ ಇಂಧನ ಸಂಪನ್ಮೂಲಗಳ ಅನ್ವೇಷಣೆ ಅತ್ಯಗತ್ಯವಾಗಿರುತ್ತದೆ. ಕಚ್ಚಾ ತೈಲಕ್ಕೆ ಪರ್ಯಾಯವಾಗಿ ಜೈವಿಕ ಇಂಧನ ರಾಷ್ಟ್ರದ ಇಂಧನ ಸಮಸ್ಯೆ ಬಗೆಹರಿಸಬಲ್ಲ ಏಕೈಕ ಆಶಾಕಿರಣವಾಗಿದೆ.

ಹೊಂಗೆ, ಬೇವು, ಹಿಪ್ಪೆ, ಸೀಮಾರೂಬಾ, ಕಾಡು ಹರಳುಗಳಿಂದ ಅನೇಕ ಮರಗಿಡಗಳ ಬೀಜಗಳಿಂದ ತೈಲ ಪಡೆದು ಈ ಜೈವಿಕ ಇಂಧನವನ್ನು ಕಚ್ಚಾ ತೈಲಕ್ಕೆ ಪರ್ಯಾಯ ಇಂಧನವಾಗಿ ಬಳಸಬಹುದಾಗಿದೆ. ಇದರ ಜೊತೆಗೆ ದೊರಕುವ ಹಿಂಡಿ ಉತ್ತಮ ಸಾವಯವ ಗೊಬ್ಬರ, ಮರಗಳ ಎಲೆಯನ್ನು ಹಸಿರೆಲೆ ಗೊಬ್ಬರವಾಗಿಯೂ ಉಪಯೋಗಿಸಬಹುದಾಗಿದೆ. ಎಣ್ಣೆಯಿಂದ ಬಸ್ಸು, ಲಾರಿ, ಟ್ರಾಕ್ಟರ್, ಕಾರು, ಜೀಪುಗಳಿಂದ ವಾಹನಗಳ ಇಂಜಿನಿನಲ್ಲಿ ಯಾವುದೇ ಬದಲಾವಣೆ ಮಾಡದೆ ಓಡಿಸಬಹುದು. ಕಾರ್ಖಾನೆಗಳ ಯಂತ್ರಗಳಲ್ಲಿ ಡೀಸಲ್‌ಗೆ ಪರ್ಯಾಯವಾಗಿ ಈ ಜೈವಿಕ ಇಂಧನ ಬಳಸಬಹುದು. ರೈಲುಗಳನ್ನು ಸಹ ಓಡಿಸಲು ಸಾಧ್ಯವಿದೆ.

ವಿವಿಧ ರೀತಿಯ ಮೌಲ್ಯವರ್ಧನೆ ಚಟುವಟಿಕೆಗಳನ್ನು ಗ್ರಾಮೀಣ ಪ್ರದೇಶದಲ್ಲೇ ಮಾಡಬಹುದಾಗಿದ್ದು, ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಷ್ಠಿಯ ಅವಕಾಶಗಳನ್ನು ಹೆಚ್ಚಿಸುವುದಲ್ಲದೇ, ರೈತರಿಗೆ ಹೆಚ್ಚುವರಿ ಆದಾಯ ತರಬಲ್ಲದು, ಗ್ರಾಮೀಣ ಪ್ರದೇಶದ ಇಂಧನದ ಅವಶ್ಯಕತೆಯನ್ನು ಅಲ್ಲೇ ತಯಾರಾದ ಇಂಧನಗಳಿಂದ ಪೂರೈಸಿ, ಹೆಚ್ಚುವರಿ ಇಂಧನವನ್ನು ಮಾರಾಟ ಮಾಡಬಹುದಾಗಿದೆ. ಜೈವಿಕ ಇಂಧನ ಸಸಿಗಳನ್ನು ಕೃಷಿಗೆ ಯೋಗ್ಯವಾಗಿರದ ರಾಜ್ಯದ 13.5 ಲಕ್ಷ ಹೆಕ್ಟೇರ್ ಬರಡು, ಬಂಜರು ಭೂ ಪ್ರದೇಶಗಳಲ್ಲಿ ನದಿ, ಕಾಲುವೆ ಹಾಗೂ ರೈತರ ಜಮೀನುಗಳ ಬೇಲಿ,

ಬದುಗುಂಟ, ಸರ್ಕಾರಿ ಹಾಗೂ ಖಾಸಗಿ ಜಮೀನುಗಳಲ್ಲಿ ಬೆಳಸಬಹುದಾಗಿದೆ. ಬಯಲು ಸೀಮೆ ಹಾಗೂ ಕಡಿಮೆ ಮಳೆಯಾಗುವ ಭೂ ಪ್ರದೇಶದಲ್ಲಿ ಜೈವಿಕ ಇಂಧನ ಸಸಿಗಳನ್ನು ಸುಲಭವಾಗಿ ಬಳಸಬಹುದಾಗಿದೆ. ಅರಣ್ಯೀಕರಣದ ಜೊತೆಗೆ ಪರಿಸರ ಮಾಲಿನ್ಯ ತಡೆಗಟ್ಟಬಹುದಾಗಿದೆ. ಉತ್ತಮ ಸಾವಯವ ಗೊಬ್ಬರದ ಜೊತೆಗೆ ರಾಷ್ಟ್ರದ ಇಂಧನ ಸುರಕ್ಷತೆಗೆ ಭದ್ರ ಬುನಾದಿ ಹಾಕಬಹುದಾಗಿದೆ.

ಕರ್ನಾಟಕದಲ್ಲಿ ಅರಣ್ಯ ಇಲಾಖೆ, ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯಿತ್ ರಾಜ್ ಇಲಾಖೆ, ಸಣ್ಣ ನೀರಾವರಿ ಇಲಾಖೆ ಮತ್ತು ಕೃಷಿ ಇಲಾಖೆಗಳನ್ನು ಸಕ್ರಿಯವಾಗಿ ಜೈವಿಕ ಇಂಧನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಾಗಿದೆ. ಮುಂಬರುವ 3 ವರ್ಷಗಳಲ್ಲಿ 1 ಲಕ್ಷ ಹೆಕ್ಟೆರ್ ಭೂ ಪ್ರದೇಶದಲ್ಲಿ 4 ಕೋಟಿ ಹಾಗೂ 10 ಕೋಟಿ ಸಸಿಗಳಲ್ಲಿ ರೈತರ ಹೊಲದ ಬದುಗಳಲಿ ಸಮರೋಪಾದಿಯಲ್ಲಿ ಜೈವಿಕ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು.

**ಜೈವಿಕ ಇಂಧನದ ಅನುಕೂಲತೆಗಳು:**

1. ಜೈವಿಕ ಇಂಧನದ ಕಾರ್ಯಕ್ರಮ ಹಲವಾರು ಉದ್ಯೋಗ ಅವಕಾಶಗಳನ್ನು ಒದಗಿಸುವುದರ ಜೊತೆಗೆ ರೈತರು, ಕೃಷಿ ಕಾರ್ಮಿಕರು ಬಿಡುವಿನ ವೇಳೆಯಲ್ಲಿ ಬೀಜ ಸಂಗ್ರಹಣೆ ಮತ್ತು ಮಾರಾಟದಿಂದ ಅಧಿಕ ಆರ್ಥಿಕ ಲಾಭ ಗಳಿಸಬಹುದು.
2. ಹಲವು ಸಂಶೋಧನೆಗಳಿಂದ ಜೈವಿಕ ಇಂಧನ, ಪೆಟ್ರೋಲಿಯಂ ಇಂಧನಕ್ಕಿಂತ ಕಡಿಮೆ ಪ್ರಮಾಣದಲ್ಲಿ ಕಾರ್ಬನ್ ಆಕ್ಸೈಡ್‌ಗಳನ್ನು ವಾತಾವರಣಕ್ಕೆ ಬಿಡುತ್ತದೆ.
3. ಪೆಟ್ರೋಲಿಯಂ ಇಂಧನ ವಾತಾವರಣಕ್ಕೆ ಕಾರ್ಬನ್ ಡೈಆಕ್ಸೈಡ್‌ನ್ನು ಹೆಚ್ಚಿನ ಪ್ರಮಾಣದಲ್ಲಿ ಸೇರಿಸುತ್ತಾ ಹೋಗುತ್ತದೆ. ಜೈವಿಕ ಇಂಧನ ಸಸ್ಯಗಳು ವಾತಾವರಣದಲ್ಲಿನ ಕಾರ್ಬನ್ ಡೈಆಕ್ಸೈಡ್‌ನ ಕೆಲವು ಭಾಗವನ್ನು ತಾವೇ ಪುನಃ ಬಳಸಿಕೊಳ್ಳುತ್ತವೆ.
4. ಜೈವಿಕ ಇಂಧನವು ಪರಿಸರ ಸ್ನೇಹಿ ಹಾಗೂ ಪುನರುತ್ಪಾದಿಸಲ್ಪಡುವ ಇಂಧನ.
5. ಜೈವಿಕ ಇಂಧನದಲ್ಲಿ ಗಂಧಕದ ಪ್ರಮಾಣ ಅತ್ಯಂತ ಕಡಿಮೆ.
6. ಸುರಕ್ಷಿತ ನಿರ್ವಹಣೆ, ಸಂಗ್ರಹಣೆ ಮತ್ತು ಸಾಗಾಣಿಕೆ.
7. ಇಂಜಿನ್ ಮಾರ್ಪಾಡಿನ ಅಗತ್ಯವಿಲ್ಲ.
8. ಇಂಜಿನಿನ ಕಾರ್ಯಕ್ಷಮತೆ ಹೆಚ್ಚಿನ ಇಂಜಿನಿನ ಬಾಳಿಕೆಯನ್ನು ಹೆಚ್ಚಿಸುತ್ತದೆ.
9. ಹೈಡ್ರೋಕಾರ್ಬನ್, ಸುಡದ ಇಂಗಾಲದ ಕಣಗಳ ಉಗುಳುವಿಕೆಯಲ್ಲಿ ಇಳಿಮುಖ.
10. ಜೈವಿಕ ಇಂಧನದ ಮರಗಳನ್ನು ಬೆಳೆಸುವುದರಿಂದ ಮಣ್ಣಿನ ಸವಕಳಿಯನ್ನು ತಡೆಯಬಹುದು ಮತ್ತು ಮಣ್ಣಿನ ತೇವಾಂಶ ಕಾಪಾಡುವುದರೊಂದಿಗೆ ಈ ಪ್ರದೇಶವನ್ನು ನಿತ್ಯ ಹರಿರಾಗಿಸಬಹುದು.

ನಿರಂತರ ಆದಾಯ ಪಡೆಯುವ ದೃಷ್ಟಿಯಲ್ಲಿ ವಿವಿಧ ಜೈವಿಕ ಇಂಧನದ ಮರಗಳನ್ನು ಮಿಶ್ರ ಬೆಳೆಯಾಗಿ ಬೆಳೆಸುವುದು ಸೂಕ್ತ. ಕೆಲವು ಮರಗಳು 3ನೇ ವರ್ಷದಿಂದ ಆದಾಯ ಕೊಡಲು ಪ್ರಾರಂಭಿಸಿದರೆ ಇನ್ನು ಕೆಲವು ಮರಗಳು 7 ರಿಂದ 10 ವರ್ಷದಿಂದ ಫಲ ಬಿಡಲು ಪ್ರಾರಂಭಿಸಿ ನೂರಾರು ವರ್ಷ ನಿರಂತರ ಆದಾಯ ಕೊಡುತ್ತವೆ. ಈಗಾಗಲೇ ಅರಣ್ಯ ಸಸ್ಯಕ್ಷೇತ್ರಗಳಲ್ಲಿ ವಿವಿಧ ಜೈವಿಕ ಇಂಧನ ಸಸಿಗಳನ್ನು ಕಸಿ ಮಾಡಿ ರೈತರಿಗೆ ನೀಡುವುದರಿಂದ ಹಿಡಿದು "ಬರಡು ಬಂಗಾರ" ಹಾಗೂ 'ಹಸಿರು ಹೊನ್ನು' ದಂತಹ ವಿವಿಧ ವಿಶೇಷ ಯೋಜನೆಗಳನ್ನು ರಾಜ್ಯ ಸರ್ಕಾರವು ಹಮ್ಮಿಕೊಂಡಿದೆ. ನಮ್ಮಮೂಲ ಉದ್ದೇಶ ಜೂನ್-5ರ 'ಪರಿಸರ ದಿನ'ವನ್ನು ಅರ್ಥಪೂರ್ಣವಾಗಿ ಆಚರಿಸಲು ಗ್ರಾಮೀಣ ಪ್ರದೇಶದ ಗ್ರಾಮೀಣ ಜನತೆಯ ಆರ್ಥಿಕ ಅಭಿವೃದ್ಧಿ, ಗ್ರಾಮಗಳ ಸಬಲೀಕರಣ ಹಾಗೂ ಅರಣ್ಯ ಪ್ರದೇಶದ ಹೆಚ್ಚಳಕ್ಕಾಗಿ ಜೈವಿಕ ಇಂಧನದ ಬೀಜಗಳನ್ನು ಉತ್ಪಾದಿಸಿ, ಮುಂದೆ ಬರುವ ಇಂಧನದ ಸಮಸ್ಯೆಗೆ ಇಂದಿನಿಂದಲೇ ಪರಿಹಾರೋಪಾಯವನ್ನು ಕರ್ನಾಟಕ ರಾಜ್ಯ ಜೈವಿಕ ಮಂಡಳಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸಹಯೋಗದೊಂದಿಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್‌ಗಳ ರಾಜ್ಯದ ಎಲ್ಲಾ ಜನತೆಗೂ ಸಹ ಜೈವಿಕ ಇಂಧನದ ಉತ್ಪಾದನೆ, ಬಳಕೆಯ ಬಗ್ಗೆ ಅರಿವು ಮೂಡಿಸುವುದು ಅಗತ್ಯವಾಗಿದೆ.

ಲೇಖನ

# ಗ್ರಾಮ ಪಂಚಾಯತಿಗಳ ವಿದ್ಯುತ್ ಬಿಲ್ ಪಾವತಿಯಲ್ಲಿ ಸಮರ್ಪಕ ನಿರ್ವಹಣೆ



ದೇವಣ್ಣ ಎ.ಪಿ.

ಮಾಸಿಕ ಸಭೆಯಲ್ಲಿ ವಿದ್ಯುತ್ ಬಿಲ್ ಪಾವತಿ ಹಾಗೂ ಅನಗತ್ಯ ವಿದ್ಯುತ್ ಪೋಲಾಗುವ ಕುರಿತು ಪರಿಹಾರ ಮಾರ್ಗೋಪಾಯ ಗಳನ್ನು ಚರ್ಚಿಸುವುದು ಅವಶ್ಯವಾಗಿದೆ.

ಗ್ರಾಮ ಪಂಚಾಯತಿಗಳಲ್ಲಿ ಬೀದಿ ದೀಪದ ವ್ಯವಸ್ಥೆ, ಕುಡಿಯುವ ನೀರು ಒದಗಿಸುವ ಸೇವೆಯು ಗ್ರಾಮ ಪಂಚಾಯಿತಿಯ ನಿರಂತರ ಕರ್ತವ್ಯವಾಗಿದೆ. ಇದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ಬಳಕೆಯಾಗುತ್ತಿದೆ. ಕುಡಿಯುವ ನೀರಿನ ವಿದ್ಯುತ್ ಸ್ಥಾವರಗಳ ಮತ್ತು ಬೀದಿ ದೀಪಗಳ ಅಸಮರ್ಪಕ ನಿರ್ವಹಣೆಯಿಂದ ಪಂಚಾಯತಿಗಳ ಮೇಲೆ ಸಾಕಷ್ಟು ವಿದ್ಯುತ್ ವೆಚ್ಚ ಹೊರೆಯಾಗಿದೆ. ಗ್ರಾಮ ಪಂಚಾಯತಿಯ ವಾರ್ಷಿಕ ಅನುದಾನದಲ್ಲಿ ಶೇ. 60ರಷ್ಟು ವಿದ್ಯುತ್ ಬಿಲ್ ಪಾವತಿಗಾಗಿ ವಿನಿಯೋಗಿಸಲಾಗುತ್ತಿದೆ. ಎಸ್ಕಾಂಗಳು ನೀಡುತ್ತಿರುವ ಬಿಲ್ಲುಗಳಲ್ಲಿ ಹಲವಾರು ಲೋಪದೋಷಗಳಿದ್ದು ಗ್ರಾಮ ಪಂಚಾಯತಿಗಳು ಸಹ ಇದರ ಬಗ್ಗೆ ನಿರ್ಲಕ್ಷ್ಯ ಭಾವನೆ ಮತ್ತು ಧೋರಣೆ ಹೊಂದಿರುತ್ತಾರೆ ಎಂಬುದು ಬಹುತೇಕ ಮಂದಿಯ ಅಭಿಪ್ರಾಯವಾಗಿದೆ.

"ಉಳಿಸಿದ ಪ್ರತಿ ಯುನಿಟ್ ವಿದ್ಯುತ್ ಮತ್ತೇರಡು ಯುನಿಟ್ ಉತ್ಪಾದನೆಗೆ ಸಮ" ಈ ನಿಟ್ಟಿನಲ್ಲಿ ಎಲ್ಲಿ, ಯಾವ ರೀತಿ ಯಾವ ಹಂತದಲ್ಲಿ ಸೋರಿಕೆಯಾಗುತ್ತಿದೆ. ಇದಕ್ಕೆ ಸ್ಪಷ್ಟವಾದ ಕಾಣರವೇನೆಂಬುದನ್ನು ಯೋಚಿಸಿದಾಗ ಪರಿಹಾರ ಗುರುತಿಸಲು ಸಾಧ್ಯವಾಗುತ್ತದೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಗೆ 4 ರಿಂದ 6 ಗ್ರಾಮಗಳವರೆಗೂ ಸೇರಿದ್ದು ಇದಕ್ಕೆ ಹೊಂದಿಕೊಂಡಂತೆ ಉಪ ಗ್ರಾಮಗಳು ಇರುತ್ತವೆ. ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಗ್ರಾಮಗಳ ವಿದ್ಯುತ್ ಬಿಲ್ ಅದೇ ಪಂಚಾಯಿತಿಗೆ ಸೇರಿದ್ದಾಗಿದೆಯೇ ಎಂಬುದನ್ನು ದೃಢೀಕರಿಸಿಕೊಳ್ಳಬೇಕು. ಕೆಲವು ಸಾರಿ ಪಕ್ಕದ ಪಂಚಾಯಿತಿಗೆ ಸೇರ್ಪಡೆಯಾಗಿರುವ ಗ್ರಾಮಗಳ ಬಿಲ್ಲು ಇನ್ನೊಂದು ಗ್ರಾಮ ಪಂಚಾಯಿತಿಗೆ ಸೇರ್ಪಡೆಯಾಗಿ ಆ ಪಂಚಾಯಿತಿಗೆ ವಿದ್ಯುತ್ ಬಿಲ್ಲು ಸೇರಲ್ಪಟ್ಟು ಎಸ್ಕಾಂ ಲೆಡ್ಜರ್ ನಿರ್ವಹಣೆ ವಹಿಗೂ ಹೊಂದಾಣಿಕೆಯಾಗದೆ ಇರುವುದು ಕಂಡುಬಂದಿರುತ್ತದೆ. ಇದನ್ನು ಸರಿಪಡಿಸಿಕೊಳ್ಳಬೇಕಾಗಿರುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರುತ್ತದೆ.

ಗ್ರಾಮ ಪಂಚಾಯತಿಯಲ್ಲಿ ಅನೇಕ ನೀರಿನ ಸ್ಥಾವರಗಳು ಇದ್ದು ಅದರಲ್ಲಿ ಕೆಲವು ನಿಷ್ಕ್ರಿಯವಾಗಿರುತ್ತವೆ. ಹೀಗಿದ್ದರೂ ಸಹ ವಿದ್ಯುತ್ ಬಿಲ್ ಬರುತ್ತಲೇ ಇರುತ್ತದೆ. ಇಂತಹವುಗಳನ್ನು ಗುರುತಿಸಿ ವ್ಯವಸ್ಥಿತಗೊಳಿಸುವುದು ಗ್ರಾಮ ಪಂಚಾಯತಿಯ ಆದ್ಯ ಕರ್ತವ್ಯವಾಗಿರುತ್ತದೆ.

ಆಯಾ ಗ್ರಾಮ ಪಂಚಾಯತಿಗೆ ಸೇರಿದ ಕುಡಿಯುವ ನೀರಿನ ಸ್ಥಾವರಗಳು ಮತ್ತು ಬೀದಿ ದೀಪಗಳಿಗೆ ಮೀಟರ್ ಅಳವಡಿಸಿರುತ್ತಾರೆಯೇ?, ಅಳವಡಿಸಿದ್ದಲ್ಲಿ ಮೀಟರ್ ಕೆಲಸ ನಿರ್ವಹಿಸುತಿದೆಯೇ? ಎಂಬುದನ್ನು ದೃಢಪಡಿಸಿಕೊಳ್ಳಬೇಕು.

ಸಂಶೋಧನಾ ಸಹಾಯಕರು, ಅಬ್ದುಲ್ ನಜೀರ್‌ಸಾಬ್ ರಾಷ್ಟ್ರೀಯ ಗ್ರಾಮೀಣ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು.

# ಮಾದರಿ ರಿಜಿಸ್ಟರ್ ನಮೂನೆ

| ಕ್ರ.ಸಂ | ಗ್ರಾ.ಪಂ ಹೆಸರು | ಗ್ರಾ.ಪಂಗೆ ಸೇರಿದ ಗ್ರಾಮ /ಉಪಗ್ರಾಮ ಗ್ರಾಮಗಳ ಹೆಸರು | ಗ್ರಾಮಗಳ ನೀರಿನ ಸ್ಥಾವರದ ಮೀಟರ್ ನಂ. | ಗ್ರಾಮಗಳ ಬೀದಿ ದೀಪಗಳ ಮೀಟರ್ ನಂ. | ಮೀಟರ್ ರೀಡಿಂಗ್‌ನ ವಿವರ ಮತ್ತು ನಮೂದು ಮಾಡಿರುವ ಮೊತ್ತ | ಕಳೆದ ವರ್ಷ ಆರ್ಥಿಕ ಸಾಲಿನಲ್ಲಿ ಬಾಕಿ ಇರುವ ವಿದ್ಯುತ್ ಬಿಲ್ | ಸದರಿ ಮಾಹೆಯ ವಿದ್ಯುತ್ ಬಿಲ್ | ವಿದ್ಯುತ್ ಬಿಲ್ ಪಾವತಿಸಿದ ದಿನಾಂಕ ಮತ್ತು ಮೊತ್ತ | ವಿದ್ಯುತ ಬಿಲ್ ಪಾವತಿಸಿದ ನಂತರ ಉಳಿದುಕೊಂಡಿರುವ ಬಾಕಿ ಮೊತ್ತ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |
| | | | | | | | | | |



ಹಗಲಿನಲ್ಲಿ ಬೀದಿ ದೀಪ ಉರಿಯುತ್ತಿರುವ ದೃಶ್ಯ

ಕೆಲವು ಬಾರಿ ಬೀದಿ ದೀಪಗಳಿಗೆ ಮೀಟರ್ ಹಾಕದೆ ಸ್ಲ್ಯಾಬ್ ಸಿಸ್ಟಂನಲ್ಲಿ ಬಿಲ್ಲು ನೀಡುತ್ತಿರುವುದು ಸಾಮಾನ್ಯವಾಗಿದ್ದು ಇದರಿಂದ ವಿದ್ಯುತ್ ವೆಚ್ಚವು ಅಧಿಕವಾಗಿ ಪಂಚಾಯತಿಗೆ ಹೆಚ್ಚಿನ ಆರ್ಥಿಕ ಹೊರೆ ಕಂಡು ಬರುತ್ತದೆ.

ಅನೇಕ ಪಂಚಾಯತಿಗಳಲ್ಲಿ ಹಗಲಿನಲ್ಲೂ ಬೀದಿ ದೀಪ ಉರಿಯುತ್ತಿದ್ದು ಹಾಗೂ ಓವರ್‌ಹೆಡ್ ಟ್ಯಾಂಕ್ / ಮಿನಿ ಟ್ಯಾಂಕ್‌ಗಳಲ್ಲಿ ನೀರು ತುಂಬಿ ಅನವಶ್ಯಕವಾಗಿ ಪೋಲಾಗುತ್ತಿರುತ್ತದೆ. ಕೆಲವು ಸಾರಿ ಖಾಸಗಿಯವರು ಇದೇ ನೀರನ್ನು ತೋಟಕ್ಕೆ ಉಪಯೋಗಿಸುತ್ತಾರೆ. ಇದರಿಂದ ಆಗುವ ಆರ್ಥಿಕ ನಷ್ಟವನ್ನು ವಾರ್ಡ್ ಸಭೆ, ಗ್ರಾಮ ಸಭೆಗಳು ಚರ್ಚಿಸುವುದು ಸೂಕ್ತ.

ಗ್ರಾಮ ಪಂಚಾಯತಿಯು ಪ್ರತಿ ಮಾಸಿಕ ಸಭೆಯಲ್ಲಿ ವಿದ್ಯುತ್ ಬಿಲ್ ಪಾವತಿ ಹಾಗೂ ಅನಗತ್ಯ ವಿದ್ಯುತ್ ಪೋಲಾಗುವ ಕುರಿತು ಪರಿಹಾರ ಮಾರ್ಗೋಪಾಯಗಳನ್ನು ಚರ್ಚಿಸುವುದು, ಅಲ್ಲದೆ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಯ ಕಾರ್ಯದಕ್ಷತೆಯಲ್ಲಿ ಚರ್ಚಿಸಿ, ಪ್ರೋತ್ಸಾಹಿಸುವುದು ಬಹಳ ಮುಖ್ಯವಾಗಿರುತ್ತದೆ.

ಗ್ರಾಮಸ್ಥರಿಂದ ವಿದ್ಯುತ್ ದುರ್ಬಳಕೆಯಾಗುತ್ತಿರುವುದನ್ನು ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹಾಗೂ ವಾರ್ಡ್ ಸದ್ಯಸರು ವಿದ್ಯುತ್ ದುರ್ಬಳಕೆಯಿಂದ ಪಂಚಾಯತಿಗೆ ಆಗುವ ಆರ್ಥಿಕ ಹೊಣೆಯನ್ನು ಗ್ರಾಮ ಸಭೆಯಲ್ಲಿ ಚರ್ಚಿಸುವುದು.

ಈ ಎಲ್ಲಾ ಅಂಶಗಳನ್ನು ಪಂಚಾಯತಿಯವರು ಅಳವಡಿಸಿಕೊಂಡಲ್ಲಿ ಸಂಪನ್ಮೂಲ ಪೋಲಾಗುವುದನ್ನು (ಸೋರಿಕೆ) ತಡೆಗಟ್ಟಬಹುದಲ್ಲದೇ ಉಳಿಸಿದ ಹಣದಿಂದ ಗ್ರಾಮಾಭಿವೃದ್ಧಿ ಕೆಲಸಗಳನ್ನು ಮಾಡಲು ಸಹಕಾರಿಯಾಗುತ್ತದೆ. ಈ ಮೂಲಕ ಗ್ರಾಮಗಳ ಹೆಚ್ಚಿನ ವಿದ್ಯುತ್ ಹೊರೆಯನ್ನು ಕಡಿಮೆ ಮಾಡಿಕೊಳ್ಳಬಹುದಾಗಿದೆ.

ಲೇಖನ

# ಉತ್ತರ ಕನ್ನಡ ಜಿಲ್ಲಾ ಪಂಚಾಯತ್, ಕಾರವಾರ ಎಪಿಜೆ ಅಬ್ದುಲ್ ಕಲಾಮ್ ಸುಸಂಧಿ ಮೆರಿಟ್



ಡಾ|| ವಿ. ರಾಮಪ್ರಸಾತ್ ಮನೋಹರ IAS

ನಾಲ್ಕು ವರ್ಷಗಳ ಫೆಲೋಶಿಪ್ ಪ್ರೋಗ್ರಾಮ್ ಕೋರ್ಸ್ ಪೂರ್ಣವಾದ ಬಳಿಕ ಅರ್ಹತೆ ಮತ್ತು ಹೆಚ್ಚು ಕೌಶಲ್ಯವುಳ್ಳ ವಿದ್ಯಾರ್ಥಿಗಳಿಗೆ ಹೈಟೆಕ್ / ಐಟಿಗೆ ಸಂಬಂಧಿಸಿದ ಕಂಪನಿಗಳಲ್ಲಿ ಉದ್ಯೋಗ ದೊರಕಿಸಿ ಕೊಡಲಾಗುವುದು.

ಉತ್ತರ ಕನ್ನಡ ಜಿಲ್ಲೆಯು ಹೆಚ್ಚು ಜ್ಞಾನ ಸಂಪತ್ತುಳ್ಳ ಜನರಿಂದ ಸುವಿಖ್ಯಾತವಾಗಿದೆ. ಆದರೆ ಅತ್ಯಧಿಕ ಪ್ರಮಾಣದಲ್ಲಿ ಅರಣ್ಯ ಪ್ರದೇಶ ಮತ್ತು ಬೆಟ್ಟ ಗುಡ್ಡಗಳ ಜಿಲ್ಲೆಯಾಗಿರುವುದರಿಂದ ಸೀಮಿತ ಜಾಗದಲ್ಲಿ ಕೈಗಾರಿಕಾ ಅಭಿವೃದ್ಧಿಯ ಕೊರತೆಯಿದೆ. ಕೈಗಾರಿಕೆಗಳ ಅಭಾವದಿಂದಾಗಿ ಈ ಜಿಲ್ಲೆಯ ವಿದ್ಯಾವಂತ ಯುವಜನರಲ್ಲಿ ಕೈಗಾರಿಕಾ ಕೇಂದ್ರಿತ ಕೌಶಲ್ಯಗಳು ಕಡಿಮೆಯಿರುವುದರಿಂದ ಅವರು ನಿರುದ್ಯೋಗ ಮತ್ತು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವಿಕೆಯು ವಿಲಕ್ಷಣ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವಿಕೆಯಿಂದಾಗಿ ಪ್ರತಿಭಾವಂತ ಬಡ ವಿದ್ಯಾರ್ಥಿಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಗುಣಮಟ್ಟದ ಉನ್ನತ ಶಿಕ್ಷಣದಿಂದ ವಂಚಿತರಾಗಿ ಪಿಯುಸಿ ನಂತರ ಭಾರೀ ಪ್ರಮಾಣದಲ್ಲಿ ನಿರುದ್ಯೋಗಿಗಳಾಗಿ ಉಳಿಯುವಂತಾಗುತ್ತಿದೆ.



ಈ ಸಮಸ್ಯೆಗಳನ್ನು ಉಪಶಮನಗೊಳಿಸಲು ಹಾಗೂ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಬುದ್ಧಿವಂತ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನುಕೂಲ ಒದಗಿಸಿಕೊಡುವುದಕ್ಕಾಗಿ ಜಿಲ್ಲೆಯಲ್ಲಿ ಎಪಿಜೆ ಅಬ್ದುಲ್ ಕಲಾಂ ಸುಸಂಧಿ ಮೆರಿಟ್ ಫೆಲೋಶಿಪ್ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಾಗಿದೆ.

## ಉದ್ದೇಶ :

ಈ ಆವಿಷ್ಕಾರಾತ್ಮಕ ಕಾರ್ಯಕ್ರಮವು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಕೈಗಾರಿಕೆಗಳ ತರಬೇತಿ ಪಾಲುದಾರಿಕೆಯಲ್ಲಿ ಕೈಗಾರಿಕಾ ತರಬೇತಿಯೊಂದಿಗೆ ಸಮಗ್ರವಾದ ಉದ್ಯೋಗ ಕೇಂದ್ರಿತ ಉನ್ನತ ಶಿಕ್ಷಣ ಮತ್ತು ಬಿ.ಎಸ್ಸಿ. ಎಲೆಕ್ಟ್ರಾನಿಕ್ಸ್ ಕೋರ್ಸ್ ವ್ಯಾಸಂಗ ಮಾಡಲು ವಿದ್ಯಾರ್ಥಿಗಳಿಗೆ ಹಣಕಾಸು ನೆರವು ನೀಡುವ ಉದ್ದೇಶ ಹೊಂದಿದೆ. ಅಗತ್ಯ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಉತ್ತರ ಕನ್ನಡ ಜಿಲ್ಲಾ ಪಂಚಾಯತ್, ಕಾರವಾರ



ತಾಂತ್ರಿಕ ಮತ್ತು ಶೈಕ್ಷಣಿಕ ಕೌಶಲ್ಯವುಳ್ಳ ವಿದ್ಯಾರ್ಥಿಗಳಿಗೆ ಕೋರ್ಸಿನ ಕೊನೆಯಲ್ಲಿ ಬಿ.ಎಸ್ಸಿ. ಎಲೆಕ್ಟ್ರಾನಿಕ್ಸ್ ಪದವಿಯೊಂದಿಗೆ ಉದ್ಯೋಗದ ನಿಶ್ಚಿತತೆ ನೀಡಲಾಗುತ್ತಿದೆ.

**ಕಾರ್ಯಕ್ರಮದ ಸಹಭಾಗಿತ್ವ :**

1. ಉತ್ತರ ಕನ್ನಡ ಜಿಲ್ಲಾ ಪಂಚಾಯತ್ – ಜಾಗೃತಿ ಮೂಡಿಸುವುದು ಮತ್ತು ಸಾಮಾಜಿಕ ಚಲನಶೀಲತೆ ಉಂಟುಮಾಡುವುದು, ಆಯ್ಕೆಗಾಗಿ ಪರೀಕ್ಷೆ ನಡೆಸುವುದು, ಈ ಪರೀಕ್ಷೆ ತೆಗೆದುಕೊಳ್ಳುವುದಕ್ಕಾಗಿ ವಿದ್ಯಾರ್ಥಿಗಳಿಗೆ ಕಾರ್ಯಾಗಾರ ಏರ್ಪಡಿಸುವುದು.
2. ಏಕಲವ್ಯ ವಿಎಲ್ಎಸ್ಐ ಆರ್ ಎಂಡ್ ಡಿ ಪ್ರೈವೇಟ್ ಲಿಮಿಟೆಡ್ ಹುಬ್ಬಳ್ಳಿ.
3. ಕೆ.ಎಲ್.ಇ. ಟೆಕ್ನಾಲಜಿಕಲ್ ಯೂನಿವರ್ಸಿಟಿ, ಹುಬ್ಬಳ್ಳಿ.
4. ಸಂಕಲ್ಪ ಸೆಮಿಕಂಡಕ್ಟರ್ಸ್.
5. ದೇಶಪಾಂಡೆ ಫೌಂಡೇಶನ್, ಹುಬ್ಬಳ್ಳಿ

**ಕೋರ್ಸ್ ಬಗ್ಗೆ ಮಾಹಿತಿ :**

**ಪದವಿ :** ಬಿಎಸ್ಸಿ ಸ್ಪೆಶಲೈಸೇಶನ್ ಇನ್ ಎಲೆಕ್ಟ್ರಾನಿಕ್ಸ್

**ಕೋರ್ಸ್ ಕಾಲಾವಧಿ :** 4 ವರ್ಷಗಳ ವಸತಿ ಕೋರ್ಸ್

**ಕೋರ್ಸ್ ಸಂರಚನೆ ಮತ್ತು ಮುಖ್ಯಾಂಶ :**

ಮೊದಲ ವರ್ಷ ಮೂಲಭೂತ ಮಾಹಿತಿ ತಂತ್ರಜ್ಞಾನ ಕೌಶಲ್ಯ, ಸಂವಹನ ಕೌಶಲ್ಯ ಮತ್ತು ಮೂಲಭೂತ ತಾಂತ್ರಿಕ ಕೌಶಲ್ಯಗಳು. ಎರಡನೇ ವರ್ಷದಿಂದ ವಿದ್ಯಾರ್ಥಿಗಳಿಗೆ ಹೈಟೆಕ್ ಡೊಮೇನ್ಸ್ (ವಿಎಲ್ಎಸ್ಐ) ಇದರಲ್ಲಿ ವೃತ್ತಿ ಕೈಗಾರಿಕಾ ತರಬೇತಿ. ಕೆಎಲ್ಇ ಟೆಕ್ನಾಲಜಿ ಯುನಿವರ್ಸಿಟಿಯಲ್ಲಿ ಎಲೆಕ್ಟ್ರಾನಿಕ್ಸ್‌ನಲ್ಲಿ ಬಿಎಸ್ಸಿ ಕೋರ್ಸ್ ಸ್ಪೆಷಲೈಜೇಶನ್ ಪಠ್ಯ ವಿಷಯಗಳೊಂದಿಗೆ (ಎಂಬೆಡೆಡ್ ಅಂಡ್ ಸಾಫ್ಟ್‌ವೇರ್) ಕೈಗಾರಿಕಾ ಮತ್ತು ತಾಂತ್ರಿಕ ಕೌಶಲ್ಯಗಳಲ್ಲಿ ವಿದ್ಯಾರ್ಥಿಗಳು ಪ್ರಾವಿಣ್ಯತೆ ಪಡೆಯಬೇಕಾಗುತ್ತದೆ.

**ಫೆಲೋಶಿಪ್ :**

ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮಾಸಿಕ ಫೆಲೋಶಿಪ್ ನೀಡಲಾಗುತ್ತದೆ. ಈ ಫೆಲೋಶಿಪ್ ಮೊತ್ತವನ್ನು ವಿದ್ಯಾರ್ಥಿಗಳು ತಮ್ಮ ಕೋರ್ಸ್ ಫೀ, ಆಹಾರ ಮತ್ತು ವಸತಿ ವೆಚ್ಚ ಭರಿಸಲು ಬಳಸಿಕೊಳ್ಳಬಹುದಾಗಿದೆ. ಕೋರ್ಸಿನ ಮೊದಲ ವರ್ಷ ಫೆಲೋಶಿಪ್ ಮೊತ್ತವು ಪ್ರತಿ ತಿಂಗಳು ರೂ. 4500 ಇರುವುದು. ಎರಡನೇ ವರ್ಷದಿಂದ ಇದು ಹೆಚ್ಚುತ್ತ ಹೋಗುತ್ತದೆ. ಮೊದಲೇ ಒಪ್ಪಂದವಾದಂತೆ, ಈ ಕೋರ್ಸಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಉದ್ಯೋಗದ ನಿಶ್ಚಿತತೆ ಇರುತ್ತದೆ.

ನಾಲ್ಕು ವರ್ಷಗಳ ಈ ಕೋರ್ಸ್ ಪೂರ್ಣವಾದ ಬಳಿಕ ಅರ್ಹತೆ ಮತ್ತು ಹೆಚ್ಚು ಕೌಶಲ್ಯವುಳ್ಳ ವಿದ್ಯಾರ್ಥಿಗಳಿಗೆ ಹೈಟೆಕ್/ಐಟಿಗೆ ಸಂಬಂಧಿಸಿದ ಕಂಪನಿಗಳಲ್ಲಿ ಉದ್ಯೋಗ ದೊರಕಿಸಿಕೊಡಲಾಗುವುದು.

**ಪೂರ್ವಸಿದ್ಧತಾ ಪ್ರವೇಶ ಪರೀಕ್ಷೆಗೆ ಹಾಜರಾಗಲು ನಿಗದಿಪಡಿಸಿದ ವಿದ್ಯಾರ್ಹತೆ :**

1. ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರದೊಂದಿಗೆ ಈಗ ಪಿಯುಸಿ ದ್ವಿತೀಯ ವಿಜ್ಞಾನ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು.
2. ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರದೊಂದಿಗೆ ಪಿ.ಯು.ಸಿ. ದ್ವಿತೀಯ ವಿಜ್ಞಾನ ಕೋರ್ಸ್ ಮುಗಿಸಿರುವ ವಿದ್ಯಾರ್ಥಿಗಳು.
3. ಯಾವುದೇ ಇತರ ಕಾಲೇಜಿನಲ್ಲಿ ಈಗ ಬಿ.ಎಸ್ಸಿ. ಕೋರ್ಸ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು.
4. 22 ವರ್ಷದೊಳಗಿನ ಬಿ.ಎಸ್ಸಿ. ಪದವೀಧರರು.
5. ಡಿಪ್ಲೋಮಾ ಅಂತಿಮ ವರ್ಷದಲ್ಲಿರುವ ಅಥವಾ ಮುಗಿಸಿರುವ ವಿದ್ಯಾರ್ಥಿಗಳು.

**ಆಯ್ಕೆ ವಿಧಾನ :** ಪೂರ್ವಸಿದ್ಧತಾ ಪರೀಕ್ಷೆ ಮತ್ತು ಸಂದರ್ಶನದ ಮುಖಾಂತರ ಒಟ್ಟು 82 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಕೋರ್ಸಿಗೆ ಸೇರ್ಪಡೆಗೊಂಡ ಒಟ್ಟು 52 ಅಭ್ಯರ್ಥಿಗಳಿಗೆ ಫೆಲೋಶಿಪ್ ನೊಂದಿಗೆ ಕೆ.ಎಲ್.ಇ. ಟೆಕ್ನಾಲಜಿಕಲ್ ಯೂನಿವರ್ಸಿಟಿ, ಹುಬ್ಬಳ್ಳಿಯಲ್ಲಿಉನ್ನತ ಶಿಕ್ಷಣ ನೀಡಲಾಗುತ್ತಿದೆ. ಪೂರ್ವಸಿದ್ಧತಾ ಪರೀಕ್ಷೆಯಲ್ಲಿ ಭಾಗವಹಿಸಿದ ಮತ್ತು ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ ಅರ್ಹತಾ ಪ್ರಮಾಣಪತ್ರ ನೀಡಲಾಗಿದೆ.

**ದಿನಾಂಕ 21–04–2016 ಮತ್ತು 26–04–2016ರಂದು ಮಾನ್ಯ ಮುಖ್ಯಮಂತ್ರಿಗಳು, ಸಚಿವರು ಹಾಗೂ ಜನಪ್ರತಿನಿಧಿಗಳು ಬರಗಾಲ ಕಾಮಗಾರಿ ಪರಿಶಿಲನೆ ಅಂಗವಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹಾವೇರಿ ಜಿಲ್ಲೆಯ ಹಾವೇರಿ ತಾಲ್ಲೂಕು, ಅಗಡಿ ಮತ್ತು ದೇವಿಹೋಸೂರ ಗ್ರಾಮ ಪಂಚಾಯತಿಯಲ್ಲಿ ಕೈಗೊಂಡ ಕಾಮಗಾರಿ ವಿಕ್ಷಣೆ ಮತ್ತು ಕೂಲಿಕಾರರ ಜೊತೆ ಸಂವಾದ ಮಾಡಿದ ಛಾಯಾಚಿತ್ರಗಳು.**















# ಅಭಿವೃದ್ಧಿ ಕಡೆಗೆ ಆನೂರ ಗ್ರಾಮ ಪಂಚಾಯತಿ

## ಯಶೋಗಾಥೆ



ಕಾಡಸಿದ್ದ ಎಸ್ ಕಟ್ಟಿಮನಿ

ಅಫಜಲಪೂರ ತಾಲ್ಲೂಕಿನ ಆನೂರು ಗ್ರಾಮ ಪಂಚಾಯಿತಿಯು ಕೇಂದ್ರ ಮತ್ತು ರಾಜ್ಯ ಸರಕಾರದ ಅನುಷ್ಠಾನ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ಸಮರ್ಪಕವಾಗಿ ಒದಗಿಸಿ ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿಗೊಳಿಸುವತ್ತ ದಾಪುಗಾಲು ಇಡುತ್ತಿದೆ.

"ಅಭಿವೃದ್ದಿ" ಎನ್ನುವುದು ನಿರಂತರ ಈ ಕುರಿತು ಇಚ್ಛಾಶಕ್ತಿ ಎಲ್ಲರಲ್ಲಿ ವ್ಯಕ್ತವಾಗುವ ಮೂಲಕ ಆ ನಿಟ್ಟಿನಲ್ಲಿ ಒಂದು ಸಂಘಟಿತ ಪ್ರಯತ್ನ ನಡೆದಲ್ಲಿ ಇಡೀ ಗ್ರಾಮ ಪಂಚಾಯತಿಯ ಚಿತ್ರಣವೇ ಬದಲಾಗಲು ಸಾಧ್ಯ.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿ ಅನುಷ್ಠಾನ ಮಾಡುವುದರಲ್ಲಿ ಅಫಜಲಪೂರ ತಾಲೂಕಿನ "ಮಾಶಾಳ" ಗ್ರಾಮ ಪಂಚಾಯತ ಪ್ರಥಮ ಸ್ಥಾನದಲ್ಲಿದ್ದರೆ, "ಆನೂರ" ಗ್ರಾಮ ಪಂಚಾಯತಿಯು ದ್ವಿತಿಯ ಸ್ಥಾನದಲ್ಲಿದೆ. ಅಫಜಲಪೂರ ತಾಲೂಕು ಕೇಂದ್ರ ಸ್ಥಾನದಿಂದ 10 ಕಿ.ಮೀ. ದೂರದಲ್ಲಿ "ಆನೂರ" ಗ್ರಾಮ



ಪಂಚಾಯತಿ ಇದ್ದು ಈ ಬದಲಾವಣೆಯು ಇಂದು ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲೂಕಿನ ಹಲವು ಗ್ರಾಮ ಪಂಚಾಯತಿಗಳಿಗೆ ಮಾದರಿ ಎನ್ನುವಂತಿದೆ. ಸುಮಾರು 300 ರಿಂದ 400 ಮನೆಗಳನ್ನು ಒಳಗೊಂಡು 3 ರಿಂದ 4 ಸಾವಿರಕ್ಕಿಂತ ಹೆಚ್ಚಿಗೆ ಜನಸಂಖ್ಯೆಯನ್ನು ಹೊಂದಿರುವ "ಆನೂರು" ಗ್ರಾಮ ಪಂಚಾಯತಿಯು ಇಲ್ಲಿನ ಜನರ ಉದ್ಯೋಗ 'ಕೃಷಿ' ಆಗಿರುವುದರಿಂದ ಕೃಷಿಯೇ ಇಲ್ಲಿನ ಜನರ ಮುಖ್ಯ ಜೀವನಾಧಾರವಾಗಿದೆ. ತೊಗರಿ, ಜೋಳ, ಹತ್ತಿ, ಸಜ್ಜೆ, ಸೂರ್ಯಕಾಂತಿ ಮತ್ತು ಕಬ್ಬು ಬೆಳೆಯು ಈ ಭಾಗದ ಜನರ ಮುಖ್ಯ ಬೆಳೆಗಳಾಗಿವೆ. ಆದ್ದರಿಂದ ನಮ್ಮ ಕಲಬುರಗಿ ಜಿಲ್ಲೆಗೆ "ತೊಗರಿಯ ಕಣಜ" ಎಂದು ಕರೆಯುತ್ತಾರೆ.

1996ರಲ್ಲಿ "ಆನೂರ" ಗ್ರಾಮ ಪಂಚಾಯತಿಯು ಅಸ್ತಿತ್ವಕ್ಕೆ ಬಂದಾಗ ಇಲ್ಲಿಯ ಜನರ ಮತ್ತು ಗ್ರಾಮಗಳ ಚಿತ್ರಣವೇ ಬೇರೆ ಇತ್ತು. ಆನೂರ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಕಂದಾಯ ಗ್ರಾಮಗಳ ಕೂಲಿಕಾರರು ಜೀವನ

ಗ್ರಾಮ ಸಂಪನ್ಮೂಲ ವ್ಯಕ್ತಿ, ತಾಲ್ಲೂಕು ಪಂಚಾಯತಿ, ಅಫಜಲಪೂರ, ಕಲಬುರಗಿ-585265



ಸಾಗಿಸುವುದಕ್ಕೆ ಮಹಾರಾಷ್ಟ್ರದ ಪುಣೆ, ಸಾತಾರಾ ಮತ್ತು ಮುಂಬಯಿ ನಗರಗಳಿಗೆ ವಲಸೆ ಹೋಗುತ್ತಿದ್ದರು. ಇಂತಹ ಕೂಲಿಕಾರರನ್ನು ವಲಸೆ ಹೋಗದಂತೆ ಜಾಗೃತಗೊಳಿಸಿ ಅವರಿಗೆ ರೈತರ ಹೊಲದಲ್ಲಿ ಉದ್ಯೋಗ ಕೊಡಿಸಿ, ಕೂಲಿಕಾರರು ವಲಸೆ ಹೋಗುವುದನ್ನು ತಡೆಗಟ್ಟುವುದರ ಮೂಲಕ "ಆನೂರ" ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳು ಉತ್ತಮ ಕಾರ್ಯ ನಿರ್ವಹಿಸಿದ್ದಾರೆ. 2015ರ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಗ್ರಾಮ ಪಂಚಾಯತಿಯ ನೂತನ ಸದಸ್ಯರ ಮತ್ತು ಜನ ಪ್ರತಿನಿಧಿಗಳ ಮನದಲ್ಲಿ ಮೂಡಿದ ಯೋಚನೆ ಹಾಗೂ ಅದಕ್ಕೆ ಪೂರಕವಾಗಿ ಸಮುದಾಯದ ಸ್ಪಂದನೆಯು "ಆನೂರ" ಗ್ರಾಮ ಪಂಚಾಯತಿಯ ಚಿತ್ರಣವು ಬದಲಾವಣೆಗೆ ಕಾರಣರಾಗಿರುತ್ತಾರೆ. ಗ್ರಾಮ ಪಂಚಾಯತಿಯಲ್ಲಿ ಬರುವ ಗ್ರಾಮಗಳಿಗೆ ಅಭಿವೃದ್ಧಿ ಅಧಿಕಾರಿಗಳು ಕೂಲಿಕಾರರ ಮನೆಗಳಿಗೆ ಖುದ್ದಾಗಿ ಭೇಟಿ ನೀಡಿ ನಿರುದ್ಯೋಗಿ ಯುವಕರಿಗೆ ಉದ್ಯೋಗ ಕೊಡುವುದರ ಮೂಲಕ ಆನೂರು ಗ್ರಾಮ ಪಂಚಾಯತಿಯನ್ನು ಉಳಿದ ಗ್ರಾಮ ಪಂಚಾಯತಿಗಳಿಗೆ ಮಾದರಿಯಾಗುವ ರೀತಿಯಲ್ಲಿ ಬದಲಾವಣೆ ಮಾಡುವುದರ ಮೂಲಕ ಗ್ರಾಮದಲ್ಲಿನ ನಿರುದ್ಯೋಗಿಗಳು ವಲಸೆ ಹೋಗುವುದನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದ್ದಾರೆ. ಕೆಲಸವಿಲ್ಲದ ಕೈಗಳಿಗೆ ಕೆಲಸ ನೀಡಿ ಅವರ ಜೀವನ ಮಟ್ಟ ಸುಧಾರಿಸಲು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ತುಂಬಾ ಸಹಕಾರಿಯಾಗಿದೆ.

## ಯೋಜನೆಯ ಗುರಿ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಾಚರಣೆಯ ಮಾರ್ಗಸೂಚಿಗಳ ಅಧ್ಯಾಯ-7ರ ಕಂಡಿಕೆ-7.13ರ ಪ್ರವರ್ಗ-4ರಲ್ಲಿ ವೈಯಕ್ತಿಕ ಫಲಾನುಭವಿಗಳ ಜಮೀನುಗಳಲ್ಲಿ ನೀರಾವರಿ ಸೌಲಭ್ಯ, ಕೃಷಿ ಹೊಂಡ, ತೋಟಗಾರಿಕೆ, ಅರಣ್ಯೀಕರಣ, ಕ್ಷೇತ್ರ ಬದು ನಿರ್ಮಾಣ, ಭೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಇಂತಹ ಸುಮಾರು 75,000 ಫಲಾನುಭವಿಗಳ ಹೊಲಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಿಸಲು ಪ್ರಸ್ತಾಪಿಸಿದ್ದಾರೆ. ಇದರ ಪ್ರಕಾರ ಈಗಾಗಲೇ ಈ ಕುರಿತು ಸೂಚನೆಗಳನ್ನು ನೀಡಲಾಗಿದೆ.

## ಆರ್ಥಿಕ ನೆರವು

ಆರ್ಥಿಕ ನೆರವನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ನಿಧಿಯಿಂದ ಭರಿಸಲಾಗುವುದು ಹಾಗೂ ಒಗ್ಗೂಡಿಸುವಿಕೆಯಡಿ ಕೈಗೊಂಡ ಕಾಮಗಾರಿಗೆ ಅದೇ ಯೋಜನೆಯಡಿ ಭಾಗಶಃ ಹಣ ಸಂದಾಯ ಮಾಡಬಹುದಾಗಿದೆ.

2015-16ನೇ ಸಾಲಿನ ಆನೂರು ಗ್ರಾಮ ಪಂಚಾಯತಿಯಲ್ಲಿ ಕಾಮಗಾರಿಗಳು ಯಶಸ್ವಿಯಾಗಿ ಅನುಷ್ಠಾನಗೊಂಡ ವಿವರ ಈ ಕೆಳಗಿನಂತಿವೆ:

| | | |
|---|---|---|
| 1. | **ಕೃಷಿ ಹೊಂಡ** | **20** |
| 2. | **ಕ್ಷೇತ್ರ ಬದು ನಿರ್ಮಾಣ** | **07** |
| 3. | **ಒಟ್ಟು ಸೃಜನೆಯಾದ ಮಾನವ ದಿನಗಳು** | **3539** |
| 4. | **ಒಟ್ಟು ಪಾವತಿಯಾದ ಅಕುಶಲ ಕೂಲಿಯ ಮೊತ್ತ** | **7,22,000** |



### ಕೃಷಿ ಹೊಂಡ ಮತ್ತು ಕ್ಷೇತ್ರ ಬದುಗಳ ಉದ್ದೇಶಗಳು

1. ಮಣ್ಣು ಮತ್ತು ಜಲ ಸಂರಕ್ಷಣೆ ಕಾಮಗಾರಿಗಳಿಗೆ ಹೆಚ್ಚಿನ ಒತ್ತು ನೀಡಿ ಬಡ ರೈತರ ಜೀವನ ರಕ್ಷಣೆ ಮಾಡುವುದು ಹಾಗೂ ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು.
2. ಗ್ರಾಮೀಣ ಪ್ರದೇಶ ಬರ ಪರಿಸ್ಥಿತಿ ಮತ್ತು ಪ್ರವಾಹ ನಿರ್ವಹಣೆ.
3. ಜೀವನೋಪಾಯಕ್ಕೆ ಉಪಕ್ರಮಗಳನ್ನು ಒಗ್ಗೂಡಿಸುವುದರ ಮೂಲಕ ವಿಕೇಂದ್ರಿತ ವ್ಯವಸ್ಥೆಯನ್ನು ಬಲಪಡಿಸುವುದು.
4. ಸೃಜನೆಯಾದ ಆಸ್ತಿಗಳಿಂದ ಕುಟುಂಬಗಳ ಜೀವನಾಧಾರ ಸುಸ್ಥಿರಗೊಳಿಸುವುದು.

ಅಫಜಲಪೂರ ತಾಲ್ಲೂಕಿನ ಆನೂರು ಗ್ರಾಮ ಪಂಚಾಯತಿಯು ಕೇಂದ್ರ ಮತ್ತು ರಾಜ್ಯ ಸರಕಾರದ ಅನುಷ್ಠಾನ ಯೋಜನೆಗಳನ್ನು ಅರ್ಹ ಫಲಾನುಭವಿ ಗಳಿಗೆ ಸಮರ್ಪಕವಾಗಿ ಒದಗಿಸಿ ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿಗೊಳಿಸುವತ್ತ ದಾಪುಗಾಲು ಇಡುತ್ತಿದೆ. ಜನ ಪ್ರತಿನಿಧಿಗಳಿಗೆ ದಕ್ಷವಾದ ಆಡಳಿತ ನೀಡಲು ಜನ ಪ್ರತಿನಿಧಿಗಳು ಹಾಗೂ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮುಂದಾಗಿ ದ್ದಾರೆ. ಜನರು ಉದ್ಯೋಗ ಖಾತರಿ ಕೆಲಸ ಮಾಡು ವಂತೆ ಮತ್ತು ಶೌಚಾಲಯಗಳನ್ನು ಕಟ್ಟಿಕೊಳ್ಳುವಂತೆ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದು ಇವರ ಜೊತೆಗೆ ಸ್ತ್ರೀ ಶಕ್ತಿ ಸಂಘಗಳು, ಆಶಾ ಕಾರ್ಯಕರ್ತೆಯರು, ಸಮಾಜ ಸೇವಕರು, ಸಾಕ್ಷರತಾ ಪ್ರೇರಕರು, ಕೃಷಿ ಅನುವುಗಾರರು ಹಾಗೂ ಸಾಮಾಜಿಕ ಪರಿಶೋಧನಾ ಗ್ರಾಮ ಸಂಪನ್ಮೂಲ ವ್ಯಕ್ತಿಗಳು ಜನ ಸಾಮಾನ್ಯರ ಮನ ಒಲಿಸಲು ಯಶಸ್ವಿಯಾಗಿರುತ್ತಾರೆ. ವಾರ್ಡ್ ಸಭೆ, ಗುಂಪು ಚರ್ಚೆ, ಮತ್ತು ಗ್ರಾಮ ಸಭೆ ಮಾಡಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಗಿದೆ. ಜಿಲ್ಲಾ ಆಡಳಿತ ವ್ಯವಸ್ಥೆಯು ಸಮತೋಲನ ಸಂಪನ್ನ ಅಭಿವೃದ್ಧಿಯ ಪರಿಕಲ್ಪನೆ ಯನ್ನು ಸಾಕಾರಗೊಳಿಸಲು ಸ್ಪರ್ಧಾತ್ಮಕ ಶಕ್ತಿಯನ್ನು ಶೋಧಿಸಿ ಗ್ರಾಮೀಣ ಜನರ ಸಮಗ್ರವಾದ ಜೀವನ ಗುಣಮಟ್ಟ ಸುಧಾರಣೆ ಬದಲಾವಣೆ ಮತ್ತು ಸಮೃದ್ಧಿಯ ದೆಸೆಯಲ್ಲಿ ಮುನ್ನಡೆಸುವಂತಹ ಅಭಿವೃದ್ಧಿಪರ ಆಡಳಿತವನ್ನು ಸೃಷ್ಟಿಸಲು ನಿರಂತರವಾಗಿ ಶ್ರಮಿಸಿರುತ್ತಾರೆ. ಅಧಿಕಾರ ವಿಕೇಂದ್ರಿಕರಣವು ಸಾಮಾಜಿಕ ಸೇವೆಯ ಸದವಕಾಶವಾಗಿದೆ. ನೂತನ ವ್ಯವಸ್ಥೆಯಲ್ಲಿ ಲಕ್ಷಾಂತರ ಗ್ರಾಮೀಣ ಮಹಿಳೆಯರು ಮತ್ತು ಪುರುಷರು ಹೊಂದಿರುವ ಹೊಸ ಅಧಿಕಾರ ಸದ್ಬಳಕೆ ಆಗಿದ್ದು, ಕೇಂದ್ರ ಸರ್ಕಾರದ ರಚನಾತ್ಮಕ ಕಾರ್ಯಕ್ರಮಗಳ ಶೀರೋನಾಮವನ್ನು ಪರಿವರ್ತಿಸಿ ಅವುಗಳಿಗೆ ಪರ್ಯಾಯವಾದ ನಾಮಕರಣ ಮಾಡುವುದರ ಮೂಲಕ ಅಮೂಲ್ಯವಾದ ಸಂಪನ್ಮೂಲಗಳನ್ನು ಅಸಮಂಜಸವಾದ ಧ್ಯೆಯಗಳಿಗೆ ಖರ್ಚು ಮಾಡುವ ಪ್ರವೃತ್ತಿಯನ್ನು ತ್ಯಜಿಸಬೇಕಾಗಿದೆ. ಗ್ರಾಮೀಣ ಜನರ ಜೀವನದಲ್ಲಿ ಗುಣಾತ್ಮಕ ಬದಲಾವಣೆ ಸಾಧಿಸಲು ಅರಿವು ಮೂಡಿಸುವ ಅಸ್ತ್ರವನ್ನು ಬಳಸಿ ಆ ನಿಟ್ಟಿನಲ್ಲಿ "ಆನೂರ" ಗ್ರಾಮ ಪಂಚಾಯತಿಯು ಮಾಡಿದ ಪ್ರಯತ್ನ ಅತ್ಯಂತ ಅರ್ಥಪೂರ್ಣವಾಗಿದೆ.

"ಆನೂರ" ಗ್ರಾಮ ಪಂಚಾಯತಿಯು ಹಾಲಿ ಅಭಿವೃದ್ಧಿ ಅಧಿಕಾರಿಗಳು ಕಾರ್ಯಭಾರ ವಹಿಸಿಕೊಂಡ ಕೇವಲ 6–7 ತಿಂಗಳಲ್ಲಿ ಉತ್ತಮ ಕಾರ್ಯ ನಿರ್ವಹಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹತ್ತು ಹಲವಾರು ಯೋಜನೆಗಳನ್ನು ಸಾರ್ವಜನಿಕರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದೆ.

# ಫಾಳಪೂಜಿ ಗ್ರಾಮದ ಹಾರೋಗಟ್ಟೆ ಕೆರೆ ಅಭಿವೃದ್ಧಿ

**–ಚನ್ನವೀರಸ್ವಾಮಿ ಎಸ್ ಹಿರೇಮಠ**

ಯಶೋಗಾಥೆ

ಫಾಳಪೂಜಿ ಗ್ರಾಮವು ಹಾವೇರಿ ಜಿಲ್ಲಾ ಕೇಂದ್ರದಿಂದ ಸುಮಾರು 29 ಕಿ.ಮೀ. ಹಾಗೂ ಬ್ಯಾಡಗಿ ತಾಲ್ಲೂಕು ಕೇಂದ್ರದಿಂದ 30 ಕಿ.ಮೀ. ದೂರದಲ್ಲಿ ಇದ್ದು, ಫಾಳಪೊಜಿ ಗ್ರಾಮ ಪಂಚಾಯತಿಯು ಸುಮಾರು 4556 ಜನಸಂಖ್ಯೆಯನ್ನು ಹೊಂದಿರುತ್ತದೆ. ಫಾಳಪೋಜಿ, ಗುಡ್ಡದಮಲ್ಲಾಪೂರ, ದುಮ್ಮಿಹಾಳ ಗ್ರಾಮಗಳನ್ನು ಒಳಗೊಂಡಿದ್ದು ಗ್ರಾಮ ಪಂಚಾಯತಿಯು ಹೆಚ್ಚಾಗಿ ಭೂರಹಿತ ಸಣ್ಣ, ಅತಿಸಣ್ಣ ಕೃಷಿ ಕೂಲಿ ಕಾರ್ಮಿಕರನ್ನು ಹೊಂದಿದೆ.



ಈ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆ ಹೆಚಾಗಿದ್ದು ಬೋರ್‌ವೆಲ್‌ಗಳ ಅಂತರ್ಜಲ ಕುಸಿತಗೊಂಡಿದೆ. ಹಾರೋಗಟ್ಟೆ ಕೆರೆ ಅಭಿವೃದ್ಧಿಪಡಿಸಿದರೆ ಮಾತ್ರ ಸಮುದಾಯ, ಜಾನುವಾರುಗಳು, ವನ್ಯ ಜೀವಿಗಳು, ಪಕ್ಷಿ ಸಂಕುಲ ಬದುಕಲು ಸಾದ್ಯವೆಂದು ಮನಗಂಡು ಗ್ರಾಮ ಪಂಚಾಯತಿ ಜನ ಪ್ರತಿನಿಧಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ದೃಢ ನಿರ್ಧಾರ ಮಾಡಿ, ಬಹು ದಿನದ ಕನಸನ್ನು ನನಸು ಮಾಡಲು " ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ"ಯಡಿಯಲ್ಲಿ ಕ್ರಿಯಾ ಯೋಜನೆಯನ್ನು ರೂಪಿಸಿಕೊಂಡು ಗ್ರಾಮ ಸಭೆಯಲ್ಲಿ 2015–16ನೇ ಸಾಲಿನಲ್ಲಿ "ಫಾಳಪೂಜಿ ಗ್ರಾಮದ ಹಾರೋಗಟ್ಟೆ ಕೆರೆ ಹೂಳೆತ್ತುವುದು ಮತ್ತು ಕೆರೆ ಏರಿ ಅಭಿವೃದ್ಧಿಪಡಿಸುವುದು" ಕಾಮಗಾರಿ ಅನುಮೋದನೆ ಪಡೆದುಕೊಂಡು ಕೆರೆ ಕಾಮಗಾರಿಯನ್ನು ಪ್ರಾರಂಭಿಸಲಾಯಿತು.

2015–16ನೇ ಸಾಲಿನಲ್ಲಿ ಕೆರೆ ಕಾಮಗಾರಿ ಕೈಗೊಂಡು ಈಗಾಗಲೇ ಮುಕ್ತಾಯ ಹಂತದಲ್ಲಿ ಇರುತ್ತದೆ. ಗ್ರಾಮಸ್ಥರಿಗೆ, ಕೂಲಿ ಕಾರ್ಮಿಕರಿಗೆ, ಕೂಲಿ

"ಕೆರೆ ಬರಿದಾದರೆ ಊರು ಬರಿದಾದಂತೆ, ಕೆರೆ ತುಂಬಿದರೆ ಊರು ತುಂಬಿದಂತೆ" ಎಂಬ ಗಾದೆಯ ಮಾತು ಇಂದಿನ "ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ"ಯು ಫಾಳಪೊಜಿ ಗ್ರಾಮಕ್ಕೆ ಕನಸು ನನಸಾಗುವಂತೆ ಮಾಡಿದೆ.

ಜಿಲ್ಲಾ ಐ.ಇ.ಸಿ. ಸಂಯೋಜಕರು, ಜಿಲ್ಲಾ ಪಂಚಾಯತ್, ಹಾವೇರಿ.

ಕೆಲಸದೊಂದಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದ ನೀರಿನ ದಾಹ ನೀಗಿದಂತಾಗಿದೆ ಎಂದು ಗ್ರಾಮದ ಹಿರಿಯರು, ಮಹಿಳೆಯರು, ಕುರಿಗಾಹಿಗಳು, ರೈತರು ಮತ್ತು ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಹಿಂದಿನ ಕಾಲದಿಂದಲೂ ಕುಡಿಯುವ ನೀರು, ಜಾನುವಾರುಗಳಿಗೆ, ಪಶು ಪಕ್ಷಿಗಳಿಗೆ ಮತ್ತು ನೀರಾವರಿ ಮಾಡುವ ಉದ್ದೇಶದಿಂದ ಕೆರೆಗಳನ್ನು ನಿರ್ಮಿಸುತ್ತಿದ್ದರು. ಕೆರೆಯೇ ಗ್ರಾಮದ ಜೀವಾಳವಾಗಿತ್ತು. ಸ್ವಾತಂತ್ರ್ಯಾನಂತರ ಕೆರೆಗಳ ಸುಸ್ಥಿರ ನಿರ್ವಹಣೆ ಇಲ್ಲದೆ ಇಂದು ಕೆರೆಗಳು, ಗೋಕಟ್ಟೆಗಳು ಮತ್ತು ಕಲ್ಯಾಣಿಗಳು ಹೂಳು ತುಂಬಿ, ಗಿಡ ಗಂಟೆ ಬೆಳೆದು ಮಳೆಯ ನೀರು ನಿಲ್ಲುವ ಸಾಮರ್ಥ್ಯ ಕಡಿಮೆಯಾಗಿ ಬೇಸಿಗೆ ಕಾಲದಲ್ಲಿ ಜನರಿಗೆ, ಜಾನುವಾರುಗಳಿಗೆ ಮತ್ತು ಪಶು ಪಕ್ಷಿಗಳಿಗೆ ಕುಡಿಯಲು ನೀರು ದೊರಕದಂತಾಗಿದೆ.

## ಗ್ರಾಮ ಪಂಚಾಯತಿಯಿಂದ ಅರಿವು ಕಾರ್ಯಕ್ರಮ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮಾರ್ಗ ಸೂಚಿಯ ಪ್ರಕಾರ ಗ್ರಾಮ ಪಂಚಾಯತಿಯಲ್ಲಿ ವಾರ್ಡ್ ಸಭೆ, ಗ್ರಾಮ ಸಭೆಗಳ ಮೂಲಕ ಹಾಗೂ ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮದ ಕುರಿತು ಪ್ರಾರಂಭದಲ್ಲಿ ಕರ ಪತ್ರಗಳ ಹಂಚಿಕೆ ಮತ್ತು ರೋಜಗಾರ್ ದಿನಾಚರಣೆಯ ಮೂಲಕ ಜಾಗೃತಿ ಮೂಡಿಸಲಾಯಿತು. ಇದರಿಂದ ಜನಪ್ರತಿನಿಧಿಗಳು ಸಮುದಾಯದವರು ಮತ್ತು ಕೂಲಿಕಾರ್ಮಿಕರು ಹಾರೋಗಟ್ಟೆ ಕೆರೆ ಅಭಿವೃದ್ಧಿಪಡಿಸಲು ಕೂಲಿ ಕೆಲಸ ಮಾಡಲು ಮುಂದೆ ಬಂದರು. ಗ್ರಾಮದ ಉದೋಗ ಚೀಟಿ ಹೊಂದಿದ ಕೂಲಿ ಕಾರ್ಮಿಕರಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸಕ್ಕಾಗಿ ಅರ್ಜಿ ನಮೂನೆ-6 ರಲ್ಲಿ ಸಲ್ಲಿಸಿ ಕೆಲಸ ನಿರ್ವಹಿಸಿ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳ ಮಾರ್ಗ ದರ್ಶನದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕೆರೆ ಕಾಮಗಾರಿಯನ್ನು ಅನುಷ್ಠಾನ ಮಾಡಿದರು.

### ಕಾಮಗಾರಿ ವಿವರ

| | |
|---|---|
| ಕಾಮಗಾರಿ ಹೆಸರು | : ಘಾಳಪೂಜಿ ಗ್ರಾಮದ ಹಾರೋಗಟ್ಟೆ ಕೆರೆ ಹೂಳೆತ್ತುವುದು ಮತ್ತು ಕೆರೆ ಏರಿ ಅಭಿವೃದ್ಧಿ ಪಡಿಸುವುದು |
| ಕಾಮಗಾರಿ ಸಂಕೇತ | : 1517001003/WH/ 83657098755 |
| ಅಂದಾಜು ಮೊತ್ತ | : 5.00 ಲಕ್ಷ |
| ಕೂಲಿ ಮೊತ್ತ | : 4.00 ಲಕ್ಷ |
| ಸಾಮಗ್ರಿ | : 1.00 ಲಕ್ಷ |
| ಖರ್ಚಾದ ಮೊತ್ತ | : 4.98 ಲಕ್ಷ |
| ಕೂಲಿ ಮೊತ್ತ | : 4.98 ಲಕ್ಷ |
| ಸಾಮಗ್ರಿ | : 0.00 ಲಕ್ಷ |
| ಸೃಜನೆಯಾದ ಮಾನವ ದಿನಗಳು | : 2330, |
| ಅನುಷ್ಠಾನ ವರ್ಷ | : 2015-16 |
| ಅನುಷ್ಠಾನ ಇಲಾಖೆ | : ಗ್ರಾಮ ಪಂಚಾಯತಿ |

ಕೆರೆಯಲ್ಲಿ ಬೆಳೆದ ಗಿಡ ಗಂಟೆಗಳನ್ನು ತೆಗೆದು ಕೆರೆಯ ಏರಿ, ಕೋಡಿ ದುರಸ್ತಿ ಮಾಡಿ ಕೆರೆಯ ಅಂಗಳದಲ್ಲಿನ ಹೂಳನ್ನು ತೆಗೆಯಲಾಯಿತು, ಕೆರೆಯ ಹೂಳನ್ನು ಕೆರೆಯ ಪಕ್ಕದ ದಂಡೆಯನ್ನು ಬಲಪಡಿಸಲು ಉಪಯೋಗಿಸಲಾಯಿತು. ಗ್ರಾಮದ ಕೂಲಿ ಕಾರ್ಮಿಕರು, ಮಹಿಳೆಯರು, ಯುವಕರು, ಕೆರೆಯ ಕಾಮಗಾರಿಯಲ್ಲಿ ಸಕ್ರಿಯವಾಗಿ ಕೂಲಿ ಕೆಲಸ ನಿರ್ವಹಿಸಿದರು. ಸುಮಾರು 410 ಜನ ಕೂಲಿಕಾರರ ಕೆಲಸ ನಿರ್ವಹಿಸಿದ್ದಾರೆ.

## ಸಮುದಾಯದ ಪ್ರತಿಕ್ರಿಯೆ

ಗ್ರಾಮದ ಜನರು ಕೆರೆಯ ಅಭಿವೃದ್ಧಿ ಕೆಲಸದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರಿಂದ ಕೂಲಿ ಕಾರ್ಮಿಕರು ಕೂಲಿ ಕೆಲಸಕ್ಕಾಗಿ ವಲಸೆ ಹೋಗುವುದು ತಪ್ಪಿದಂತಾಗಿದೆ. ಬರಗಾಲ ಪೀಡಿತ ಪ್ರದೇಶದಲ್ಲಿ ಕೆರೆ ಅಭಿವೃದ್ಧಿ ಮಾಡಿದ್ದರಿಂದ ವರ್ಷದಲ್ಲಿ ನಾಲ್ಕೈದು ಬಾರಿ ಕಡಿಮೆ

| ಎನ್.ಎಂ.ಆರ್. ಗಳ ಸಂಖ್ಯೆ | ಎನ್.ಎಂ.ಆರ್. ನಲ್ಲಿ ನಿರ್ವಹಿಸಿದ ಕೂಲಿಕಾರರ ವಿವರ. | | | |
|---|---|---|---|---|
| | ಎಸ್.ಸಿ. | ಎಸ್.ಟಿ. | ಇತರೆ | ಒಟ್ಟು |
| 618 | 27 | 28 | 67 | 122 |
| 619 | 26 | 28 | 65 | 119 |
| 667 | 2 | 20 | 13 | 35 |
| 669 | 4 | 9 | 24 | 37 |
| 700 | 4 | 11 | 25 | 40 |



ಮಳೆಯಾದರೂ ಇಲ್ಲಿ ಸುತ್ತಮುತ್ತಲಿನ ಬೋರ್ ವೆಲ್‌ಗಳ ಅಂತರ್ಜಲ ಮಟ್ಟ ಹೆಚ್ಚಳವಾಗಿವೆ. ಸಾರ್ವಜನಿಕರಿಗೆ, ಪಶು ಪಕ್ಷಿಗಳಿಗೆ, ವನ್ಯ ಜೀವಿಗಳಿಗೆ ಉಪಯುಕ್ತವಾಗಿದೆ ಎಂದು ಗ್ರಾಮಸ್ಥರು ಅನಿಸಿಕೆ ವ್ಯಕ್ತಪಡಿಸಿದ್ದಾರೆ. ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕೆರೆಯ ಪಕ್ಕದಲ್ಲಿರುವ ಬೋರ್‌ವೆಲ್‌ಗಳಿಂದ ಕೆರೆಗೆ ನೀರು ತುಂಬಿಸುತ್ತಿದ್ದಾರೆ. ಇದರಿಂದ ಬೇಸಿಗೆ ಕಾಲದಲ್ಲಿ ಜನರಿಗೆ, ಜಾನುವಾರುಗಳಿಗೆ, ಪಶುಪಕ್ಷಿಗಳಿಗೆ ಕುಡಿಯುವ ನೀರಿನ ದಾಹ ನೀಗಿಸಿದಂತಾಗಿದೆ.

"ಕೆರೆ ಬರಿದಾದರೆ ಊರು ಬರಿದಾದಂತೆ, ಕೆರೆ ತುಂಬಿದರೆ ಊರು ತುಂಬಿದಂತೆ" ಎಂಬ ಗಾದೆಯ ಮಾತು ಇಂದಿನ "ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ" ಯು ಘಾಳಪೂಜಿ ಗ್ರಾಮಕ್ಕೆ ಕನಸು ನನಸಾಗುವಂತೆ ಮಾಡಿದೆ .

## ಕೆರೆಯ ಅಭಿವೃದ್ಧಿಯಿಂದಾದ ಅನುಕೂಲಗಳು

1. ಗ್ರಾಮದ ಜೀವಾಳ ಕೆರೆಯ ಅಭಿವೃದ್ಧಿಯಿಂದ ನೀರು ನಿಲ್ಲುವ ಸಾಮರ್ಥ್ಯ ಹೆಚ್ಚಳವಾಗಿದೆ.
2. ಗ್ರಾಮಸ್ಥರಿಗೆ ದನ ಕರುಗಳಿಗೆ ಮತ್ತು ವನ್ಯ ಜೀವಿಗಳಿಗೆ ಬೇಸಿಗೆ ಕಾಲದಲ್ಲಿ ನೀರಿನ ದಾಹ ನೀಗಿದಂತಾಗಿದೆ.
3. ಕೆರೆಯ ಹೂಳು ಕೃಷಿಗೆ ಗೊಬ್ಬರವಾಗಿ ಬಳಕೆಯಾಗಿದೆ.
4. ಬೋರ್‌ವೆಲ್‌ಗಳ ಅಂತರ್ಜಲ ಮಟ್ಟ ಹೆಚ್ಚಳ ವಾಗಿದೆ .
5. ಗ್ರಾಮದಲ್ಲಿ ಕುಡಿಯುವ ನೀರಿನ ಹಾಹಾಕಾರ ಕಡಿಮೆಯಾಗಿದೆ.
6. ಕೂಲಿ ಕಾರ್ಮಿಕರಿಗೆ ಗ್ರಾಮದಲ್ಲಿ ಉದ್ಯೋಗ ಲಭಿಸಿದ್ದರಿಂದ ವಲಸೆ ತಡೆಗಟ್ಟಿದಂತಾಗಿದೆ.

## ಕೂಲಿ ಕಾರ್ಮಿಕರ ಅನಿಸಿಕೆ :

ಸದರಿ ಯೋಜನೆಯಡಿ ವರ್ಷಕ್ಕೆ 100 ದಿನ ಉದ್ಯೋಗ ಸಂಪೂರ್ಣವಾಗಿ ಪಡೆಯುತ್ತಿದ್ದು, ಈ ಯೋಜನೆಯಿಂದ ಬೇರೆ ಕಡೆ ಕೆಲಸಕ್ಕೆ ಹೋಗುವುದು ತಪ್ಪಿದಂತಾಗಿದೆ ಹಾಗೂ ಸದರಿ ಯೋಜನೆಯು ಹಳ್ಳಿಗಳಿಗೆ ವರದಾನವಾಗಿ ಪ್ರತಿ ವರ್ಷ 50 ಲಕ್ಷದ ಕಾಮಗಾರಿಗಳನ್ನು ಕೈಗೊಳ್ಳಲು ಘಾಳಪೂಜಿ ಗ್ರಾಮ ಪಂಚಾಯತಿ ನಿರ್ಧಾರ ತೆಗೆದುಕೊಂಡಿದೆ.

## ಯಶೋಗಾಥೆ

# ಅಗಡಿ ಗ್ರಾಮ ಪಂಚಾಯತಿಯಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ



ಗಿರೀಶ ಎಸ್. ಬೆನ್ನೂರ

ರೇಷ್ಮೆ ಬೆಳೆದ ರೈತನ ಮುಖದಲ್ಲಿ ಮಂದಹಾಸ ಮೂಡಲು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಕಾರಣವಾಗಿದೆ.

ಅಗಡಿ ಗ್ರಾಮ ಪಂಚಾಯತಿಯು ಜಿಲ್ಲಾ ಕೇಂದ್ರದಿಂದ ಕೇವಲ 10 ಕಿಲೋ ಮೀಟರ್ ದೂರವಿರುತ್ತದೆ. ಗ್ರಾಮ ಪಂಚಾಯತಿಯು ತನ್ನದೇ ಆದ ಅಚ್ಚುಕಟ್ಟಾದ ಸ್ವಂತ ಕಟ್ಟಡವನ್ನು ಹೊಂದಿರುತ್ತದೆ ಹಾಗೂ ಕಟ್ಟಡದ ಸುತ್ತಲೂ ಅಲಂಕರಿಸಲಾಗಿದೆ. ಅಗಡಿ ಗ್ರಾಮ ಪಂಚಾಯತಿಯಲ್ಲಿ ಒಟ್ಟು 2 ಗ್ರಾಮಗಳಿವೆ

ಅಗಡಿ ಮತ್ತು ಜಂಗಮನಕೊಪ್ಪ. (ಗಾಂಧೀಪುರ) ಅಗಡಿ ಗ್ರಾಮದಲ್ಲಿ 7 ವಾರ್ಡ್‌ಗಳು, ಜಂಗಮನಕೊಪ್ಪ ಗ್ರಾಮದಲ್ಲಿ 1 ವಾರ್ಡನ್ನು ಹೊಂದಿದ್ದು, ಒಟ್ಟಾರೆ 8 ವಾರ್ಡ್‌ಗಳು ಇರುತ್ತವೆ. ಈ ಪಂಚಾಯತಿಯು ಒಟ್ಟು 26 ಸದಸ್ಯರುಗಳನ್ನು ಹೊಂದಿದ್ದು, ಪೂರ್ಣ ಪ್ರಮಾಣದ ಸಿಬ್ಬಂದಿಯನ್ನು ಹೊಂದಿರುತ್ತದೆ.



2010–11 ನೇ ಸಾಲಿನ ಜನಗಣತಿಯ ಪ್ರಕಾರ ಅಂದಾಜು 9850 ಜನ ಸಂಖ್ಯೆಯನ್ನು ಹೊದಿರುತ್ತದೆ. ಇವರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವ್ಯವಸಾಯವನ್ನು ಆಯ್ದುಕೊಂಡಿರುತ್ತಾರೆ. ನಮ್ಮ ಗ್ರಾಮ ಪಂಚಾಯತಿಯು 7 ಸರಕಾರಿ ಪ್ರಾಥಮಿಕ ಶಾಲೆಗಳನ್ನು, 1 ಹೈಸ್ಕೂಲ್ ಹಾಗೂ 1 ಅರೆ ಸರಕಾರಿ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಹಾಗೂ 1 ಗ್ರಂಥಾಲಯವನ್ನು ಹೊಂದಿರುತ್ತದೆ. ಅಗಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬಹು ಗ್ರಾಮ ನದಿ ನೀರು ಸರಬರಾಜು ಯೋಜನೆ ಅಡಿಯಲ್ಲಿ 7 ಕೋಟಿ ರೂ.ಗಳನ್ನು ವ್ಯಯಿಸಿ ಹೊಂಡವನ್ನು ನಿರ್ಮಿಸಲಾಗಿದೆ. ಇದರ ಮುಖಾಂತರ 7 ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವ ಯೋಜನೆಯನ್ನು ಹೊಂದಿದೆ.

ತಾಲ್ಲೂಕು ಐಇಸಿ ಸಂಯೋಜಕರು, ತಾಲ್ಲೂಕು ಪಂಚಾಯತಿ, ಹಾವೇರಿ



## ಐತಿಹಾಸಿಕ ಸ್ಥಳಗಳು:

ಅಗಡಿ ಗ್ರಾಮದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಐತಿಹಾಸಿಕ ಸ್ಥಳಗಳು ಕಂಡು ಬರದಿದ್ದರೂ ಗ್ರಾಮದಲ್ಲಿ ಆನಂದವನ ಮಠ ಮತ್ತು ಶ್ರೀ ಬನಶಂಕರಿ ದೇವಿ ದೇವಸ್ಥಾನ ಮತ್ತು ಶ್ರೀ. ಆಂಜನೇಯ ದೇವಸ್ಥಾನ ಹಾಗೂ ವೀರಭದ್ರೇಶ್ವರ ದೇವಸ್ಥಾನ, ಶ್ರೀ ರುದ್ರಮನಿಶ್ವರ ದೇವಸ್ಥಾನವಿದೆ. ಅದು ಹಲವಾರು ಶತಮಾನಗಳ ಇತಿಹಾಸವನ್ನು ಹೊಂದಿದೆ. ದೇವಸ್ಥಾನವು ಶಿಥಿಲೀಕರಣಗೊಂಡ ಕಾರಣ ದೇವಸ್ಥಾನದ ಜೀರ್ಣೋದ್ಧಾರ ಸಂಘವು ಅದರ ಅಭಿವೃದ್ಧಿಯನ್ನು ಕೈಗೊಂಡಿದ್ದಾರೆ.

## ಪರಂಪರೆ :

ಗ್ರಾಮೀಣ ಪ್ರದೇಶದಲ್ಲಿ ಜೀವನೋಪಾಯಕ್ಕಾಗಿ ಕೃಷಿಯನ್ನು ನಂಬಿ ಬದುಕುವ ಕುಟುಂಬಗಳು ಹೆಚ್ಚಾಗಿವೆ. "ಉಳಿಸಿದ ಹಣ ಗಳಿಸಿದ ಹಣ" ಎಂಬ ಗಾದೆಯನ್ನು ಕೃಷಿ ಕ್ಷೇತ್ರಕ್ಕೆ ವಿಸ್ತರಿಸಿದರೆ ಉಳಿಸಿದ ಕಾಳು ಗಳಿಸಿದ ಕಾಳು ಎಂದು ಅರ್ಥೈಸಬಹುದು.

ರೇಷ್ಮೆ ಬೆಳೆಯುವುದರಿಂದ ರೈತರಿಗೆ ಹೆಚ್ಚಿನ ಅನುಕೂಲ ಹಾಗೂ ಹಣಕಾಸಿನ ಮೂಲವನ್ನು ಹೆಚ್ಚಿಸಿದಂತಾಗುತ್ತದೆ. ಇದನ್ನು ಮನಗಂಡ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಮಾರ್ಗದರ್ಶನದಂತೆ ರೇಷ್ಮೆ ಬೆಳೆಯುವ ಬಗ್ಗೆ ಸಲಹೆಗಳನ್ನು ನೀಡಲಾಗಿದೆ.

## ತಾಲ್ಲೂಕು ಪಂಚಾಯತಿಯ ಮಾರ್ಗದರ್ಶನ:

ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕಿನ ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ, ಇಂಜನಿಯರಗಳ ಒಂದು ದಿನದ ಕಾರ್ಯಾಗಾರವನ್ನು ಹಾವೇರಿಯ ಸಹಾಯಕ ರೇಷ್ಮೆ ನಿರ್ದೇಶಕರಾದ ಶ್ರೀ ಎಮ್ ಎಸ್ ಪಾಟೀಲ ರವರಿಂದ ಮಾರ್ಗದರ್ಶ ನೀಡಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಟ್ರಂಚಿಂಗ್ ಮತ್ತು ಮಲಚಿಂಗ್ ಕಾರ್ಯ ಕೈಗೆತ್ತಿಕೊಳ್ಳುವಂತೆ ಆದೇಶಿಸಿ ತುರ್ತಾಗಿ ಕೆಲಸ ನಿರ್ವಹಿಸಲು ಪ್ರೇರೇಪಿಸಿದರು.

## ಗ್ರಾಮ ಪಂಚಾಯತಿಯಿಂದ ಕಾರ್ಯಾಚರಣೆ:

2015-16ನೇ ಸಾಲಿನಲ್ಲಿ ಪ್ರಯೋಜನ ಪಡೆದ ಫಲಾನುಭವಿಯಾದ ಶ್ರೀ ಜಕಣಾಚಾರ್ಯ ಬಡಿಗೇರ ಇವರು ಅತೀ ಸಣ್ಣ ರೈತರಾಗಿದ್ದು, 5 ಎಕರೆ ಜಮೀನನ್ನು ಹೊಂದಿದ್ದು, ಕೊಳವೆ ಬಾವಿ ಕೊರೆಸಿ ಅಲ್ಪಮಟ್ಟಿಗೆ ರೇಷ್ಮೆ ಬೆಳೆಯುತ್ತಿದ್ದರು. ಕೆಲವು ವರ್ಷಗಳ ನಂತರ ಕೊಳವೆ ಬಾವಿಯಲ್ಲಿ ನೀರಿನ ಮಟ್ಟ ಕಡಿಮೆಯಾಗಿದ್ದರಿಂದ, ರೇಷ್ಮೆ ಬೆಳೆಯಲಾಗದೆ ಕಂಗಾಲಾಗಿದ್ದ ಸಮಯದಲ್ಲಿ ನೆರವಾಗಿದ್ದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ.

ಯೋಜನೆಯನ್ನು ಪರಿಣಾಮವಾಗಿ ಅನುಷ್ಠಾನಗೊಳಿಸಲು ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ಮಾಹಿತಿ, ಶಿಕ್ಷಣ ಮತ್ತು ಸಂವಹನ, ಕರಪತ್ರಗಳ ಮೂಲಕ ಯೋಜನೆ ಬಗ್ಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಪ್ರಚುರಪಡಿಸಿ ಗ್ರಾಮ ಸಭೆಯಲ್ಲಿ ರೈತರುಗಳಿಗೆ ಯೋಜನೆಯ ಸಮಗ್ರ ಮಾಹಿತಿ ಅಂದರೆ ಉದ್ಯೋಗ ಚೀಟಿ ನೋಂದಣಿ, ಕೆಲಸಕ್ಕೆ ಸಿಗುವ ಕೂಲಿ ಮತ್ತು ಯೋಜನೆಯಿಂದ ಅನುಷ್ಠಾನಗೊಳಿಸುವ ಕಾಮಗಾರಿಗಳು ಹಾಗೂ ವೈಯಕ್ತಿಕ ಕಾಮಗಾರಿಗಳ ಬಗ್ಗೆ ತಿಳುವಳಿಕೆ ನೀಡಿದರು. ತಕ್ಕ ಮಟ್ಟಿಗೆ ವಿದ್ಯಾವಂತ, ವವ್ಯಹಾರಸ್ತರಾಗಿದ್ದ ಶ್ರೀ ಜಕಣಾಚಾರ್ಯ ಬಡಿಗೇರ ಗ್ರಾಮ ಸಭೆಗೆ




ಹಾಜರಾಗಿ ಸಭೆಯಲ್ಲಿ ಯೋಜನೆಯ ಬಗ್ಗೆ ಮತ್ತು ಇಲಾಖೆಗಳ ಬಗ್ಗೆ ಮಾಹಿತಿಯನ್ನು ಪಡೆದು ರಸ್ತೆಯ ಪಕ್ಕದಲ್ಲಿದ್ದ ಜಮೀನು ಅಭಿವೃದ್ಧಿಪಡಿಸಿ, ರೇಷ್ಮೆ ಬೆಳೆಯಲು ಯೋಚಿಸಿದರು. ನಂತರ ಗ್ರಾಮ ಸಭೆಯ ಆಯ್ಕೆ ಪಟ್ಟಿಯಲ್ಲಿ ತಮ್ಮ ಜಮೀನು ಅಭಿವೃದ್ಧಿ ಕಾಮಗಾರಿಯನ್ನು ಸೇರಿಸಿದರು. ಕ್ರಿಯಾಯೋಜನೆ ಅನುಮೋದನೆ ಆಗಿ ಬಂದ ನಂತರ, ಕಾಮಗಾರಿ ಯನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರ ಅನುಮತಿ ಪಡೆದು ಎನ್.ಎಮ್.ಆರ್ ತೆಗೆಸಿ ಜಮೀನನ್ನು ಮಟ್ಟ ಮಾಡಿದರು. ಯೋಜನೆಯಡಿ ರೇಷ್ಮೆ ಇಲಾಖೆಯಿಂದ ನರ್ಸರಿ ಮಾಡಿ, ರೇಷ್ಮೆ ಬೆಳೆಯನ್ನು ಬೆಳೆಯಲು ತಿರ್ಮಾನಿಸಿದ ರೈತನಿಗೆ ಕಾಡಿದ್ದು, ನೀರಿನ ಸಮಸ್ಯೆ. ಹಾಲಿ ಇದ್ದ ಕೊಳವೆ ಬಾವಿಯಲ್ಲಿ ನೀರಿನ ಪ್ರಮಾಣ ಕಡಿಮೆಯಿದ್ದುದರಿಂದ, ಸ್ವಲ್ಪ ಪ್ರಮಾಣದಲ್ಲಿ ಗೋವಿನಜೋಳ ಬೇಸಾಯ ಮಾಡುತ್ತಿದ್ದರು.

ಕ್ರಿಯಾಯೋಜನೆ ಅನುಮೋದನೆಗೊಂಡ ನಂತರ ಇಲಾಖೆಯವರು ಪಂಚಾಯತಿಯಿಂದ ಅನುಮತಿ ಪಡೆದು ಎನ್.ಎಮ್.ಆರ್ ತೆಗೆಸಿ ಕಾಮಗಾರಿಯನ್ನು ಪ್ರಾರಂಬಿಸಿ ಹಳ್ಳಕ್ಕೆ ಒಡ್ಡು ನಿರ್ಮಾಣ ಮಾಡಲಾಗಿ, ಹಳ್ಳದಲ್ಲಿ ಹರಿದು ಹೋಗುತ್ತಿದ್ದ ನೀರು ಹೆಚ್ಚು ಸಂಗ್ರಹಣೆ ಆಗುವಂತಾಯಿತು. ಸಂಗ್ರಹಿಸಿದ ನೀರಿನಿಂದ ರೈತ ತನ್ನ ಮಟ್ಟ ಮಾಡಿದ ಜಮೀನಿನಲ್ಲಿ ರೇಷ್ಮೆ ನರ್ಸರಿ ಮಾಡಿ ಜಮೀನಿಗೆ ಸಾಕಾಗುವಷ್ಟು ರೇಷ್ಮೆಯನ್ನು ನಾಟಿ ಮಾಡಿ ಉಳಿದ ಸಸಿಗಳನ್ನು ಬೇರೆ ರೈತರುಗಳಿಗೆ ಮಾರಿ ಹಣ ಸಂಪಾದಿಸಿದರು.

## ಫಲ ನೀಡಿದ ಕಾರ್ಯಾಕ್ರಮ :

ಬದು ನಿರ್ಮಾಣ ಮಾಡಿ ನೀರು ಶೇಖರಣೆ ಗೊಂಡಿದ್ದರಿಂದ ಕೊಳವೆ ಬಾವಿಯಲ್ಲಿ ನೀರಿನ ಮಟ್ಟ ಜಾಸ್ತಿಯಾಗಿ ಮೊದಲು ರಾಗಿ ಬೆಳೆಯುತ್ತಿದ್ದ ರೈತ ಈಗ ಜೊತೆಗೆ ರೇಷ್ಮೆ ಬೆಳೆಯುತ್ತಿದ್ದು, ವರ್ಷಕ್ಕೆ ಸರಾಸರಿ ರೂ.1.50 ಲಕ್ಷ ಸಂಪಾದಿಸುತ್ತಿದ್ದಾರೆ. ಟ್ರಂಚಿಂಗ್ ಮಲ್ಚಿಂಗ್ ಮಾಡಿಕೊಂಡ ಶ್ರೀ ಜಕಣಾಚಾರ್ಯ ಬಡಿಗೇರರವರ ರೇಷ್ಮೆ ಬೆಳೆಗೆ ಸಾಕಷ್ಟು ತೇವಾಂಶ



ಲಭಿಸಿದೆ. ಸಸಿಗಳ ಬೆಳವಣಿಗೆಗಾಗಿ ಬೆಳೆಗೆ ಲಘು ಪೋಷಕಾಂಶ ದೊರೆತು, ಇಳುವರಿ ಹೆಚ್ಚಾಗಲು ಸಹಕಾರಿಯಾಗಿದೆ.. ಇದರ ಜೊತೆಗೆ ಸಾವಯುವ ಕೃಷಿ ರೈತರನ್ನು ಪ್ರೊತ್ಸಾಹಿಸಲು ಬಹುಮುಖ್ಯವಾದ ಪಾತ್ರ ವಹಿಸಿದೆ.

## ಉಪಸಂಹಾರ :

ರೇಷ್ಮೆ ಬೆಳೆದ ರೈತನ ಮುಖದಲ್ಲಿ ಮಂದಹಾಸ ಮೂಡಲು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಬಳಸಿಕೊಂಡಿದ್ದರಿಂದ ಸಾಧ್ಯವಾಗಿದ್ದು, ಶ್ರೀ ಜಕಣಾಚಾರ್ಯ ಬಡಿಗೇರ ಇವರು ಅಕ್ಕಪಕ್ಕದ ರೈತರಲ್ಲಿ ಜಾಗೃತಿ ಮೂಡಿಸಿ, ಇತರೆ ರೈತರುಗಳಿಗೆ ಕೂಡ ಈ ಯೋಜನೆಯನ್ನು ಬಳಸಿಕೊಳ್ಳಲು ಪ್ರೇರೇಪಣೆ ನೀಡುತ್ತಿದ್ದಾರೆ.

# ಅಂತರ್ಜಲ ಮರುಪೂರಣ ಮತ್ತು ಜಲಸಂಚಯಗಳ ಪುನಃಶ್ಚೇತನ ಅಭಿವೃದ್ಧಿ ಕಾಮಗಾರಿ

ಯಶೋಗಾಥೆ



ರಂಜೀತ ಕಾಂಬಳೆ

ಮುಗಳಿ ಗ್ರಾಮ ಪಂಚಾಯಿತಿಯಲ್ಲಿ ಅಂತರ್ಜಲದ ಮರುಪೂರಣ, ಕೆರೆಗಳ ಹೂಳೆತ್ತುವುದು ಸೇರಿದಂತೆ ನೀರಿನ ಸಂಚಯ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ.

ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕು ಕೇಂದ್ರದಿಂದ 13 ಕಿ.ಮೀ ದೂರದಲ್ಲಿರುವ ಮುಗಳಿ ಗ್ರಾಮ ಪಂಚಾಯತಿಯು ಸುಮಾರು 5827 ಕುಟುಂಬಗಳನ್ನು ಹೋಂದಿದ್ದು, ಹೆಚ್ಚಾಗಿ ಭೂ ರಹಿತ ಸಣ್ಣ, ಅತಿಸಣ್ಣ ಕೃಷಿ ಕೂಲಿ ಕಾರ್ಮಿಕರನ್ನು ಹೊಂದಿದೆ. ಮಳೆ ಆಧಾರಿತ ಗ್ರಾಮದ ಸುತ್ತಲೂ ಗುಡ್ಡ–ಗಾಡು ಪ್ರದೇಶವನ್ನು ಹೊಂದಿದ್ದು, ಜಾನುವಾರು ಸಾಕಾಣಿಕೆಗೆ ಯೋಗ್ಯ ಪ್ರದೇಶವಾಗಿದೆ. ಈ ಗ್ರಾಮದಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿದ್ದು ಅಂತರ್ಜಲ ಕುಸಿತಗೊಂಡಿದ್ದು, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ



ನರೇಗಾ ಯೋಜನೆಯಡಿ ಕೂಲಿ ಕಾರ್ಮಿಕರಿಗೆ ಕೆಲಸ ಮಾಡಲು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ರೂಪಾಲಿ ಬಂಡಕುಂದ್ರಿ ಹಾಗೂ ಗ್ರಾಮ ಪಂಚಾಯತಿ ಜನ ಪ್ರತಿನಿಧಿಗಳು 2016–17 ನೇ ಸಾಲಿನಲ್ಲಿ ಚೆಕ್ ಡ್ಯಾಂನ ಹೂಳೆತ್ತುವ ಕಾಮಗಾರಿ ಯೋಜನೆಯನ್ನು ಗ್ರಾಮ ಸಭೆಯಲ್ಲಿ ತಯಾರಿಸಿ, ಅನುಮೋದನೆ ಪಡೆದು ಕಾಮಗಾರಿ ಪ್ರಾರಂಭಿಸಲಾಯಿತು. ಇದರಿಂದ ಗ್ರಾಮದ ಕೂಲಿ ಕಾರ್ಮಿಕರಿಗೆ ಕೆಲಸ ದೊರೆತಂತಾಯಿತು.

ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಚೆಕ್ ಡ್ಯಾಂನ ಹೂಳೆತ್ತುವ ಕಾಮಗಾರಿಯನ್ನು ಅನುಷ್ಠಾನ ಮಾಡಿದರು. ಗ್ರಾಮದ ಜನರು ಕೂಲಿ ಕೆಲಸ ಮಾಡಲು ಮುಂದೆ ಬಂದು ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನಮೂನೆ 6 ರಲ್ಲಿ ಅರ್ಜಿ ಸ್ವೀಕರಿಸಿ 150 ಜನರಿಗೆ ಕೆಲಸ ಮಾಡಲು ಅವಕಾಶ ಮಾಡಲಾಯಿತು.

ಚೆಕ್ ಡ್ಯಾಂನ ಹೂಳೆತ್ತುವ ಕಾಮಗಾರಿಯಿಂದ ದೊರೆತ ಹೂಳನ್ನು ರೈತರು ತಮ್ಮ ಜಮೀನಿಗೆ ಗೊಬ್ಬರವಾಗಿ ಬಳಕೆ ಮಾಡಿಕೊಂಡರು. ಗ್ರಾಮದ

ಐಇಸಿ ಸಂಯೋಜಕರು, ತಾಲ್ಲೂಕು ಪಂಚಾಯತ್, ಚಿಕ್ಕೋಡಿ , ಬೆಳಗಾವಿ ಜಿಲ್ಲೆ



ಕೂಲಿ ಕಾರ್ಮಿಕರು ಮಹಿಳೆಯರು, ಯುವಕರು ಚೆಕ್ ಡ್ಯಾಂನ ಹೂಳೆತ್ತುವ ಕಾಮಗಾರಿಯಲ್ಲಿ ಸಕ್ರಿಯವಾಗಿ ಕೂಲಿ ಕೆಲಸ ನಿರ್ವಹಿಸಿದರು.

**ಅನುಕೂಲಗಳು**

1. ಹೂಳೆತ್ತುವ ಕಾಮಗಾರಿಯಿಂದ ದೊರೆತ ಹೂಳನ್ನು ಕೃಷಿಗೆ ಗೊಬ್ಬರವಾಗಿ ಬಳಕೆ ಮಾಡಲಾಯಿತು.
2. ಅಂತರ್ಜಲ ಮಟ್ಟ ಹೆಚ್ಚಳವಾಗುವುದು.
3. ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಡಿಮೆಯಾಗಿದೆ.
4. ಕೂಲಿ ಕಾರ್ಮಿಕರಿಗೆ ಗ್ರಾಮದಲ್ಲಿ ಉದ್ಯೋಗ ಲಭಿಸಿದ್ದರಿಂದ ವಲಸೆ ತಡೆಗಟ್ಟಿದಂತಾಗಿದೆ.

ಬೇಡಿಕೆಯ ಪ್ರಕಾರ ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಕುಟುಂಬಕ್ಕೆ ಒಂದ ನೂರು ದಿನಗಳಿಗಿಂತ ಕಡಿಮೆ ಇಲ್ಲದಂತೆ ಅಕುಶಲ ದೈಹಿಕ ಉದ್ಯೋಗವನ್ನು ಒದಗಿಸಲಾಗಿದೆ. ಬಾಳಿಕೆ ಬರುವ ಆಸ್ತಿಗಳ ಉತ್ಪಾದನೆ ಉಂಟು ಮಾಡುವುದು, ಗ್ರಾಮದ ಜೀವನೋಪಾಯದ ಸಂಪನ್ಮೂಲಗಳನ್ನು ಬಲಪಡಿಸುವುದು, ಗ್ರಾಮದ ಎಲ್ಲರೂ ಸೇರಿ ಸಕ್ರಿಯವಾಗಿ ಪಾಲ್ಗೊಂಡು ಯೋಜನೆ ಅಧಿನಿಯಮದ ಪ್ರಕಾರ ಕಾಮಗಾರಿಗಳನ್ನು ಮಾಡಿದ್ದರಿಂದ ಯೋಜನೆ ಯಶಸ್ವಿಯಾಗಿದೆಯೆಂದು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮುಗಳಿ ಗ್ರಾಮದಲ್ಲಿ ನೀರಿನ ಕೊಯ್ಲು ಸೇರಿದಂತೆ ಅಂತರ್ಜಲದ ಮರುಪೂರಣ ಕಾಮಗಾರಿಗಳಿಗೆ ವಿಶೇಷ ಒತ್ತು ನೀಡುವುದು. ಜಲಸಂಚಯಗಳ ಪುನಶ್ಚೇತನಗೊಳಿಸುವ ಕಾಮಗಾರಿಗಳು ಕೆರೆಗಳ ಹೂಳೆತ್ತುವುದು ಸೇರಿದಂತೆ ಹಾಗೂ ಇತರೆ ನೀರಿನ ಸಂಚಯ ಕಾಮಗಾರಿಗಳನ್ನು ಮಾಡಲಾಗುವುದು ಎಂದು ತಾಂತ್ರಿಕ ಸಿಬ್ಬಂದಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

**ಕಾಮಗಾರಿ ಹೆಸರು:**

**1) ಕಮತೇನಟ್ಟಿ ಗ್ರಾಮ ಸಣ್ಣ ಹಳ್ಳದ ಸನದಿ ತೋಟದ ಹತ್ತಿರ ಇರುವ ಚೆಕ್ಕ ಡ್ಯಾಂ ಹೂಳೆತ್ತವದು**

| | | |
|---|---|---|
| ಕಾಮಗಾರಿ ಸಂಕೇತ | : | 83657107265 |
| ಅಂದಾಜು ಮೊತ್ತ | : | 3.00 |
| ಖರ್ಚಾದ ಮೊತ್ತ | : | 70000 |
| ಅನುಷ್ಠಾನ ವರ್ಷ | : | 2016–17 |
| ಅನುಷ್ಠಾನ ಇಲಾಖೆ | : | ಗ್ರಾಮ ಪಂಚಾಯತಿ |
| ಕೂಲಿ ಕಾರ್ಮಿಕರ ಸಂಖ್ಯೆ | : | 45 |

**ಕಾಮಗಾರಿ ಹೆಸರು:**

**2) ಕಮತೇನಟ್ಟಿ ಗ್ರಾಮ ಸಿದ್ದೇಶ್ವರ ಗುಡಿಯಿಂದ ಕುಂಬಾರ ತೋಟದವರಿಗೆ ಸಣ್ಣ ಹಳ್ಳ ಪುನಃಶ್ಚೇತನ**

| | | |
|---|---|---|
| ಕಾಮಗಾರಿ ಸಂಕೇತ | : | 83657099711 |
| ಅಂದಾಜು ಮೊತ್ತ | : | 8.00 |
| ಖರ್ಚಾದ ಮೊತ್ತ | : | 8.00 |
| ಅನುಷ್ಠಾನ ವರ್ಷ | : | 2015–16 –2016–17 |
| ಅನುಷ್ಠಾನ ಇಲಾಖೆ | : | ಗ್ರಾಮ ಪಂಚಾಯತಿ |
| ಕೂಲಿ ಕಾಮೀಕರ ಸಂಖ್ಯೆ | : | 36 |

**ಕಾಮಗಾರಿ ಹೆಸರು:**

**3) ಮುಗಳಿ ಗ್ರಾಮದ ದೊಡ್ಡ ಕರೆಯ ಪುನ;ಶ್ಚೇತನ ಮಾಡುವುದು (ದಕ್ಷಣ ಭಾಗ)**

| | | |
|---|---|---|
| ಕಾಮಗಾರಿ ಸಂಕೇತ | : | 83657108775 |
| ಅಂದಾಜು ಮೊತ್ತ | : | 5.00 |
| ಖರ್ಚಾದ ಮೊತ್ತ | : | ಮುಂದುವರೆದಿದೆ |
| ಅನುಷ್ಠಾನ ವರ್ಷ | : | 2016–17 |
| ಅನುಷ್ಠಾನ ಇಲಾಖೆ | : | ಗ್ರಾಮ ಪಂಚಾಯತಿ |
| ಕೂಲಿ ಕಾರ್ಮಿಕರ ಸಂಖ್ಯೆ | : | 63 |

ಯಶೋಗಾಥೆ

# ಬಿಸಿಲ ನಾಡಲ್ಲಿ ಜರ್ಬೆರಾ ಹೂಗಳ ಕಲರವ



ಜಿ. ಚಂದ್ರಕಾಂತ

> ಕಲಬುರಗಿ ಜಿಲ್ಲೆಯಲ್ಲಿ ಜರ್ಬೆರಾ ಹೂವಿನ ಬೇಸಾಯವನ್ನು ಯಶಸ್ವಿಯಾಗಿ ಮಾಡುವ ಮೂಲಕ ಸೈಯ್ಯದ್ ರಿಯಾಜುದ್ದಿನ್ ಎಲ್ಲರಿಗೂ ಮಾದರಿಯಾಗಿದ್ದಾರೆ.

ಬಿಸಿಲ ನಾಡೆಂದೇ ಹೆಸರುವಾಸಿಯಾಗಿರುವ ಕಲಬುರಗಿ ಜಿಲ್ಲೆಯಲ್ಲಿ ಕೃಷಿಭಾಗ್ಯ ಯೋಜನೆಯ ಪ್ರಯೋಜನ ಪಡೆದು ಜಿಲ್ಲೆಯ ಇತಿಹಾಸದಲ್ಲಿ ಮೊದಲ ಬಾರಿಗೆ “ಜರ್ಬೆರಾ” ಬೆಳೆದ ಕೀರ್ತಿ ಕಲಬುರಗಿ ತಾಲೂಕಿನ ಕಪನೂರ ಗ್ರಾಮದ ರೈತ ಸೈಯ್ಯದ್ ರಿಯಾಜುದ್ದಿನ್ ಭುಟ್ಟೊ ಅವರಿಗೆ ಸಲ್ಲುತ್ತದೆ. ಇವರು ಒಟ್ಟು 3 ಎಕರೆ ಜಮೀನು ಹೊಂದಿದ್ದಾರೆ. ಪ್ರಾರಂಭದಲ್ಲಿ ಕೇವಲ 10 ಗುಂಟೆ ಜಮೀನಿನಲ್ಲಿ ಕೆಎಫ್ ಬಯೋ ಟೆಕ್ ತಂತ್ರಜ್ಞಾನ ಅಳವಡಿಸಿ ಬೆಡ್ ಸಿಸ್ಟಂನಿಂದ



ನೈಸರ್ಗಿಕ ನೆರಳು ಪರದೆ (ಪಾಲಿ ಹೌಸ್) ಘಟಕ ಸ್ಥಾಪಿಸಿಕೊಂಡು ಪೂನಾದಿಂದ 6000 ಜರ್ಬೆರಾ ಹೂ ಸಸಿಗಳನ್ನು ಆಗಸ್ಟ್ ಮಾಹೆಯಲ್ಲಿ ನಾಟಿ ಮಾಡಿ 3 ತಿಂಗಳ ಬಳಿಕ ಪ್ರತಿ ದಿನ ಒಂಭತ್ತು ವಿಧದ ಸುಮಾರು 1000ದಂತೆ ತಿಂಗಳಿಗೆ 30000 ಜರ್ಬೆರಾ ಹೂಗಳನ್ನು ಪಡೆಯುತ್ತಿದ್ದಾರೆ. ಇವುಗಳ ಮಾರಾಟದಿಂದ ಎಲ್ಲ ಖರ್ಚು ವೆಚ್ಚ ಹೋಗಿ ಮಾಸಿಕ ಸರಾಸರಿ ರೂ. 50000 ಲಾಭ ಗಳಿಸುತ್ತಿದ್ದಾರೆ. ಈ ಬೆಡ್ ಸಿಸ್ಟಂನಿಂದ ಇಳುವರಿ ಪ್ರಮಾಣ ಹೆಚ್ಚು ಬರುತ್ತದೆ. ಆದರೆ ನಿರ್ವಹಣಾ ವೆಚ್ಚ ಮತ್ತು ಕೀಟ ಬಾಧೆ ಅಪಾಯ ಹೆಚ್ಚು ಇರುತ್ತದೆ. ಸದರಿ ರೈತರು ಪುನಃ 10 ಗುಂಟೆ ಪ್ರದೇಶದಲ್ಲಿ ನೈಸರ್ಗಿಕ ನೆರಳು ಪರದೆ(ಪಾಲಿ ಹೌಸ್) ಘಟಕದಲ್ಲಿ ಜರ್ಬೆರಾ ಹೂ ಕೃಷಿಯನ್ನು ವಿಸ್ತರಿಸಿಕೊಂಡಿದ್ದಾರೆ. ಹೊಸ ಪದ್ಧತಿಯ ಮೂಲಕ 7200 ಹೂಕುಂಡಗಳಲ್ಲಿ ಕೋಕೋ ಪಿಟ್ ಮಣ್ಣಿನಲ್ಲಿ ಜರ್ಬೆರಾ ಸಸಿಗಳನ್ನು ಬೆಳೆದಿದ್ದಾರೆ. ಈ ಪದ್ಧತಿಯಿಂದ ಸರಾಸರಿ ಇಳುವರಿ ಪ್ರಮಾಣ ಕಡಿಮೆ ಇದ್ದರೂ ನಿರ್ವಹಣಾ ವೆಚ್ಚ ಮತ್ತು ಕೀಟ ಬಾಧೆ ಹೆಚ್ಚು ಇರುವುದಿಲ್ಲ.

ಈ ಜರ್ಬೆರಾ ಹೂ ಕೃಷಿಯನ್ನು ಒಂದು ಸವಾಲಾಗಿ ಸ್ವೀಕರಿಸಿದ ರಿಯಾಜುದ್ದಿನ್ ಭುಟ್ಟೊ “ಜಿಲ್ಲೆಯ ವಿವಿಧ ಪ್ರಗತಿಪರ ರೈತರ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳ ಪ್ರೋತ್ಸಾಹ ಮತ್ತು ತಾಂತ್ರಿಕ ಸಲಹೆಯ ಮೇರೆಗೆ ಜರ್ಬೆರಾ ಹೂ ಕೃಷಿ ಕೈಗೊಂಡಿದ್ದೇನೆ. ಪ್ರಾರಂಭದಲ್ಲಿ ಮಣ್ಣಿನ ಹಾಗೂ

ಹಿರಿಯ ಸಹಾಯಕ ನಿರ್ದೇಶಕರು, ಉಪನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಿಕಾಸಭವನ ಆವರಣ, ಕಲಬುರಗಿ-585102



ಇತರ ಸಮಸ್ಯೆ ಎದುರಿಸಿದ್ದರೂ ಕೊಳವೆಬಾವಿಯಲ್ಲಿ ಮೂರು ಇಂಚು ನೀರಿನ ಲಭ್ಯತೆಯ ಮೆರೆಗೆ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡು ಧೃತಿಗೆಡದೆ ಮುಂದೆ ಬಂದು ಜರ್ಬೆರಾ ಬೆಳೆದಿದ್ದೇನೆ. ವರ್ಷಪೂರ್ತಿ ಜರ್ಬೆರಾ ಹೂಗಳು ಬಿಡುತ್ತವೆ ಯಾದರೂ ಮದುವೆ ಮುಂಜಿ ಋತುವಿನಲ್ಲಿ ಇವುಗಳ ಮಾರಾಟ ಹೇರಳವಾಗಿ ನಡೆಯುತ್ತದೆ ಹಾಗೂ ಪ್ರತಿ ಹೂ ರೂ. 8–10ರಂತೆ ಒಂದೊಂದು ಸಲ ರೂ. 15ಗೂ ಮಾರಾಟವಾಗುತ್ತದೆ. ಪ್ರಾರಂಭದಲ್ಲಿ ಹೈದ್ರಾಬಾದಿನಲ್ಲಿ ಮಾರಾಟ ಮಾಡಿದ್ದು, ಈಗ ಸ್ಥಳೀಯವಾಗಿಯೂ ಮಾರಾಟ ಮಾಡಲಾಗುತ್ತಿದೆ. ಇದಕ್ಕಾಗಿ ಪ್ಯಾಕಿಂಗ್ ಘಟಕ ಸಹ ಸ್ಥಾಪಿಸಲಾಗಿದೆ. ಒಂದು ಬಾಕ್ಸಿನಲ್ಲಿ 150–400 ಜರ್ಬೆರಾ ಹೂಗಳನ್ನಿಟ್ಟು ಸಹೋದರ ಸೈಯ್ಯದ್ ಸಿರಾಜುದ್ದಿನ್ ಅವರ ಸಹಾಯ ಸಹಕಾರ ಪಡೆದು ಈ ಬೇಸಾಯ ಕೈಗೊಂಡಿರುವುದು ತುಂಬಾ ಅನುಕೂಲವಾಗಿದೆ. ಇದಲ್ಲದೆ ಎರಡು ಎಕರೆಯಲ್ಲಿ ಬಾಳೆ ಸಹ ಬೆಳೆಯಲಾಗಿದೆ" ಎಂದು ಹೇಳುತ್ತಾರೆ.

ಕೃಷಿಭಾಗ್ಯ ಯೋಜನೆಯಡಿ ಒಂದು ಎಕರೆವರೆಗೆ ನೈಸರ್ಗಿಕ ನೆರಳು ಪರದೆ(ಪಾಲಿ ಹೌಸ್) ಘಟಕ ಸ್ಥಾಪಿಸಿಕೊಳ್ಳಲು ಅವಕಾಶವಿದ್ದು, ಪ್ರತಿ ಚ.ಮೀ.ಗೆ 490 ರೂ. ಸಹಾಯಧನ ನೀಡಲಾಗುತ್ತದೆ. ಸದರಿ ರೈತರು ಸ್ಥಾಪಿಸಿಕೊಂಡ ಎರಡೂ ಘಟಕಗಳಿಗೆ ಸುಮಾರು ರೂ. 20 ಲಕ್ಷ ವೆಚ್ಚ ತಗುಲಿದ್ದು, ತೋಟಗಾರಿಕೆ ಇಲಾಖೆಯಿಂದ ರೂ. 10 ಲಕ್ಷ ಸಹಾಯಧನ ಒದಗಿಸಲಾಗಿದೆ. ಹರಿಯಾಣ ರಾಜ್ಯದಲ್ಲಿ ಜರ್ಬೆರಾ ಹೂವಿನ ಬೇಸಾಯ ದೊಡ್ಡ ಪ್ರಮಾಣದಲ್ಲಿ ಮಾಡುತ್ತಿರುವುದನ್ನು ಗಮನಿಸಿ ಕಲಬುರಗಿ ಜಿಲ್ಲೆಯಲ್ಲಿಯೂ ಈ ಬೇಸಾಯ ಮಾಡುವ ಪ್ರಥಮ ಪ್ರಯತ್ನವಾಗಿ ಸೈಯ್ಯದ್ ರಿಯಾಜುದ್ದಿನ್ ಮುಂದೆ ಬಂದಿರುವುದು ಶ್ಲಾಘನೀಯ ಮತ್ತು ಇವರ ಧೈರ್ಯ ಮೆಚ್ಚುವಂಥದ್ದು. ಜರ್ಬೆರಾ ನಾಟಿ ಮಾಡಿದ 90–100 ದಿನಗಳ ಬಳಿಕ ಕಟಾವು ಪ್ರಾರಂಭವಾಗಲಿದ್ದು, ಸುಮಾರು 3 ವರ್ಷಗಳವರೆಗೆ ಲಾಭ ಪಡೆಯಬಹುದು.

ಕಲಬುರಗಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ಕೃಷಿಭಾಗ್ಯ ಯೋಜನೆಯಡಿ ಕಳೆದ ಎರಡು ವರ್ಷಗಳಲ್ಲಿ 34 ನ್ಯಾಚುರಲಿ ವೆಂಟಿಲೇಟೆಡ್ ಪಾಲಿ ಹೌಸ್ ಮತ್ತು 110 ಶೆಡ್ ನೆಟ್ ಪಾಲಿ ಹೌಸ್ ಘಟಕಗಳು ಸೇರಿದಂತೆ ಒಟ್ಟು 144 ಘಟಕಗಳಿಗೆ ಕಾರ್ಯಾದೇಶ ನೀಡಲಾಗಿದೆ. ಈ ಪೈಕಿ 23 ಪಾಲಿ ಹೌಸ್ ಮತ್ತು 66 ನೆರಳು ಪರದೆ ಘಟಕಗಳು ಸೇರಿ 89 ಘಟಕಗಳ ನಿರ್ಮಾಣ ಕಾರ್ಯ ಮುಗಿದಿದೆ. ತೋಟಗಾರಿಕೆ ಇಲಾಖೆಯಿಂದ 2016ರ ಜನವರಿಯಿಂದ ಕೃಷಿಭಾಗ್ಯ ಯೋಜನೆಯಡಿ ನಿರಂತರ 4 ವರ್ಷ ಕಾಲ ಸತತವಾಗಿ ಬರಗಾಲಕ್ಕೆ ತುತ್ತಾದ ರಾಜ್ಯದ 7 ಜಿಲ್ಲೆಗಳ 23 ತಾಲೂಕುಗಳ ಪೈಕಿ ಕಲಬುರಗಿ ಜಿಲ್ಲೆಯ ಆಳಂದ, ಚಿಂಚೋಳಿ ಮತ್ತು ಜೇವರ್ಗಿ ತಾಲೂಕುಗಳ ಎಸ್‌ಸಿ/ಎಸ್‌ಟಿ ಫಲಾನುಭವಿಗಳಿಗೆ ಶೇ.90ರಷ್ಟು ಹಾಗೂ ಇತರರಿಗೆ ಶೇ.75ರಷ್ಟು ಸಹಾಯಧನ ನೀಡಲಿದೆ. ಉಳಿದ ತಾಲೂಕುಗಳ ಎಸ್‌ಸಿ/ಎಸ್‌ಟಿ ಫಲಾನುಭವಿಗಳಿಗೆ ಶೇ.90ರಷ್ಟು ಹಾಗೂ ಇತರರಿಗೆ ಶೇ.50ರಷ್ಟು ಸಹಾಯಧನ ನೀಡಲಾಗುತ್ತಿದೆ ಎಂದು ತೋಟಗಾರಿಕೆ ಉಪನಿರ್ದೇಶಕ ಡಿ. ಮಂಜುನಾಥ ಹೇಳುತ್ತಾರೆ.

ಕವಿಯ(ಕ್ಷ) ಪ್ರಶ್ನೆ?

# ಶಿಕ್ಷಣದಲ್ಲಿ ಕನ್ನಡ

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ 1957 ರಲ್ಲಿ ಕರ್ನಾಟಕವನ್ನು ಒಂದು ಪ್ರತ್ಯೇಕ ರಾಜ್ಯವನ್ನಾಗಿ ಮಾಡಿ, ಕನ್ನಡ ಭಾಷೆಯನ್ನು ಆಡಳಿತ ಭಾಷೆಯಾಗಿ, ಕನ್ನಡಿಗರ ರಾಜ್ಯವಾಗಿ ಮಾರ್ಪಡಿಸಿದ್ದು ನಮ್ಮೆಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದರೂ ಸಹ ಕರ್ನಾಟಕ ರಾಜ್ಯದ ಅನೇಕ ಹಳ್ಳಿಗಳಲ್ಲಿ ಕನ್ನಡ ಮಾಧ್ಯಮ ಶಾಲೆಗಳೇ ಇಲ್ಲದ ಕಾರಣ ಹಲವೆಡೆ ಕನ್ನಡ ಅಪರಿಚಿತ ಭಾಷೆಯಾಗಿದೆ. ಪ್ರಾಥಮಿಕ ಶಿಕ್ಷಣವನ್ನು ಉರ್ದು, ಮರಾಠಿ, ತೆಲುಗು, ಆಂಗ್ಲ, ಹಿಂದಿ ಭಾಷೆಗಳಲ್ಲಿ ಕಲಿತ ಮಕ್ಕಳು ಅದೇ ಭಾಷೆಯಲ್ಲಿ ಪ್ರೌಢ ಶಿಕ್ಷಣವನ್ನು ಪಡೆಯಲಾಗದೆ ಅರ್ಧಕ್ಕೆ ನಿಲ್ಲಿಸುತ್ತಿದ್ದಾರೆ. ಅಷ್ಟೇ ಅಲ್ಲದೆ ಬೇರೆ ರಾಜ್ಯಗಳಲ್ಲಿ ಶಿಕ್ಷಣ ಪಡೆದು ಅಲ್ಲಿನ ಭಾಷೆಗಳಲ್ಲಿ ವ್ಯಾಸಂಗ ಮಾಡಿರುವುದರಿಂದ ಕರ್ನಾಟಕದವರೇ ಆಗಿದ್ದರೂ ಉದ್ಯೋಗ ಪಡೆಯುವುದು ಕಷ್ಟವಾಗಿದೆ.



## ಈ ಕುರಿತು ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು

1. ಕರ್ನಾಟಕಕ್ಕೆ ಹೊಂದಿಕೊಂಡಿರುವ ರಾಜ್ಯಗಳಲ್ಲಿ ಕನ್ನಡ ಭಾಷೆಯನ್ನು ಒಂದು ಭಾಷೆಯನ್ನಾಗಿ ಓದುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದು ಒಳ್ಳೆಯದಲ್ಲವೇ?
2. ಸರ್ಕಾರಿ ಶಾಲೆಗಳನ್ನು ತೊರೆದು ಆಂಗ್ಲ ಮಾಧ್ಯಮ ಶಾಲೆಗಳತ್ತ ಹೋಗುತ್ತಿರುವ ಮಕ್ಕಳಿಗೆ ಕನ್ನಡ ಭಾಷೆ ಕುರಿತು ಹೆಚ್ಚು ಹೆಚ್ಚು ತಿಳಿಹೇಳುವುದು ಒಳಿತಲ್ಲವೇ?
3. ಗ್ರಾಮೀಣ ಮಕ್ಕಳ ಶೈಕ್ಷಣಿಕ ಬದುಕಿನತ್ತ ಸರ್ಕಾರ ಒಂದು ಹೆಜ್ಜೆ ಮುಂದಿಟ್ಟು ಅವರ ಭವಿಷ್ಯಕ್ಕಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ಒಳ್ಳೆಯ ಬದಲಾವಣೆ ತರುವಲ್ಲಿ ಇನ್ನು ಹೆಚ್ಚು ಶ್ರಮಪಡುವುದು ಸರಿಯಲ್ಲವೇ?
4. ಖಾಸಗಿ ಸಂಸ್ಥೆಗಳಲ್ಲಿ ಆಂಗ್ಲ ಭಾಷೆಗೆ ನೀಡುವಷ್ಟೇ ಪ್ರಾಮುಖ್ಯತೆ ಕನ್ನಡ ಭಾಷೆಗೂ ನೀಡುವಂತೆ ಸರ್ಕಾರ ಕ್ರಮ ಕೈಗೊಳ್ಳುವುದು ಸೂಕ್ತವಲ್ಲವೇ?

**ಸಿದ್ದರಾಜು ಎಂ.**
ಕೆರೆಕತ್ತಗನೂರು, ಬಿಲ್ಲಿನಕೋಟೆ ಪೋಸ್ಟ್,
ಸೋಂಪುರ ಹೋಬಳಿ, ನೆಲಮಂಗಲ ತಾಲೂಕು,
ಬೆಂಗಳೂರು ಗ್ರಾಮಾಂತರ

ಕಾವ್ಯ ವಿಕಾಸ

# ಗ್ರಾಮ ಸರ್ಕಾರ



ಕೊದ್ದಡ್ಡಿ ಮಹೇಶ್

ಇದು ನಮ್ಮ ಸರ್ಕಾರ ಗ್ರಾಮ ಸರ್ಕಾರ
ಪ್ರಜಾಪ್ರಭುತ್ವದ ಸಹಕಾರ ನಮ್ಮೆಲ್ಲರ ಅಧಿಕಾರ
ಗ್ರಾಮಗಳ ಉದ್ಧಾರ ದೇಶಕ್ಕೆ ಸಹಕಾರ
ಗ್ರಾಮಗಳ ಬೆಳೆಯೇ ನಮಗೆಲ್ಲ ಪರಿಹಾರ

ಇದು ಹಳ್ಳಿಗರ ಸರ್ಕಾರ ನಮ್ಮೆಲ್ಲರ ದರ್ಬಾರ
ಅಭಿಮತಗಳ ಚಮತ್ಕಾರ ಮಾಡುವುದು ಉತ್ತಮ ಸರ್ಕಾರ
ಇರಬೇಕು ಹಳ್ಳಿಗರಲ್ಲಿ ಮಮಕಾರ ಆಗುವುದೆಲ್ಲರಿಗೂ ಉಪಕಾರ
ಹಳ್ಳಿಗಳಾದರೆ ಶೃಂಗಾರ ಭಾರತ ಬೆಳಗುವುದು ಅಲಂಕಾರ

ಹಳ್ಳಿಗರ ವಿಧಾನಸಭೆ ಅದುವೇ ನಮ್ಮ ಗ್ರಾಮಸಭೆ
ಸಮಸ್ಯೆಗಳ ಪರಿಹಾರದ ಸಭೆ ಅದುವೇ ನಮ್ಮ ಗ್ರಾಮಸಭೆ
ದೇಶವನ್ನು ಬೆಳಗಿಸುವ ಸಭೆ ಅದುವೇ ನಮ್ಮ ಗ್ರಾಮಸಭೆ
ಗಾಂಧೀಜಿ ಕನಸು ನನಸಾಗಿಸುವ ಸಭೆ ಅದುವೇ ನಮ್ಮ ಗ್ರಾಮಸಭೆ

ಹಳ್ಳಿಹಳ್ಳಿಗೂ ಮಾಡೋಣ ಗ್ರಾಮಸಭೆಯ ಪ್ರಚಾರ
ಮಾಡೋಣ ದೀನರ ಜೀವನವ ಸತ್ಕಾರ
ಕಂಡುಕೊಳ್ಳೋಣ ರೈತರ ಆತ್ಮಹತ್ಯೆಗೆ ಪರಿಹಾರ
ಬೆಳಗಿಸೋಣ ಭಾರತವ ಜಗತ್ತಿಗೆಲ್ಲ ಪರಮಾಧಿಕಾರ

ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ನಕ್ಕಲಹಳ್ಳಿ ಗ್ರಾಮ ಪಂಚಾಯತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 28-05-2016 ರಲ್ಲಿದ್ದಂತೆ.

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2014-15ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | ನೇ ಸಾಲಿನಲ್ಲಿ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2015-16 ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60 ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗಾ.ಪಂ. ಗಳು | ಹಿಂದಿನ ದಿನದ ಹಾಜರಾತಿ ದಾಖಲಿಸಿದ ಶೇಕಡವಾರು ಗ್ರಾ.ಪಂಗಳು | ಒಟ್ಟಾರೆ ಶೇಕಡವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|---|
| ಬೆಂಗಳೂರು (ಗ್ರಾ) | 105 | 93 | 71 | 5 | 90 | 73 | 16 | 85 | 61 | 1 |
| ಉತ್ತರ ಕನ್ನಡ | 231 | 89 | 29 | 82 | 29 | 85 | 14 | 85 | 59 | 2 |
| ಉಡುಪಿ | 158 | 90 | 12 | 77 | 55 | 39 | 38 | 87 | 56 | 3 |
| ದಕ್ಷಿಣ ಕನ್ನಡ | 230 | 87 | 20 | 90 | 13 | 57 | 31 | 92 | 55 | 4 |
| ಕೊಡಗು | 104 | 94 | 91 | 34 | 1 | 61 | 24 | 83 | 55 | 5 |
| ಬಾಗಲಕೋಟೆ | 198 | 79 | 14 | 2 | 75 | 95 | 40 | 74 | 54 | 6 |
| ಕೋಲಾರ | 156 | 100 | 0 | 1 | 100 | 88 | 11 | 50 | 50 | 7 |
| ತುಮಕೂರು | 331 | 96 | 45 | 1 | 76 | 64 | 6 | 55 | 49 | 8 |
| ರಾಮನಗರ | 127 | 99 | 0 | 0 | 70 | 85 | 18 | 73 | 49 | 9 |
| ಮೈಸೂರು | 266 | 87 | 34 | 0 | 55 | 74 | 13 | 75 | 48 | 10 |
| ಚಿಕ್ಕಬಳ್ಳಾಪುರ | 157 | 96 | 0 | 1 | 88 | 82 | 12 | 59 | 48 | 11 |
| ಮಂಡ್ಯ | 234 | 99 | 28 | 2 | 39 | 88 | 12 | 70 | 48 | 12 |
| ಶಿವಮೊಗ್ಗ | 271 | 95 | 9 | 16 | 45 | 85 | 21 | 39 | 44 | 13 |
| ಬೆಂಗಳೂರು (ನ) | 96 | 84 | 10 | 27 | 52 | 13 | 41 | 78 | 43 | 14 |
| ಚಿಕ್ಕಮಗಳೂರು | 227 | 99 | 31 | 25 | 19 | 44 | 11 | 64 | 41 | 15 |
| ದಾವಣಗೆರೆ | 233 | 97 | 2 | 0 | 49 | 92 | 14 | 29 | 40 | 16 |
| ಧಾರವಾಡ | 144 | 88 | 12 | 0 | 53 | 92 | 6 | 33 | 40 | 17 |
| ಬೀದರ್ | 186 | 94 | 10 | 0 | 47 | 65 | 8 | 54 | 39 | 18 |
| ಹಾಸನ | 267 | 96 | 34 | 7 | 22 | 41 | 9 | 62 | 38 | 19 |
| ಚಾಮರಾಜನಗರ | 130 | 91 | 0 | 0 | 23 | 66 | 6 | 86 | 38 | 20 |
| ಗದಗ | 122 | 86 | 0 | 0 | 54 | 83 | 5 | 31 | 37 | 21 |
| ಹಾವೇರಿ | 223 | 92 | 0 | 0 | 49 | 70 | 5 | 34 | 35 | 22 |
| ಚಿತ್ರದುರ್ಗ | 189 | 97 | 0 | 0 | 56 | 72 | 5 | 17 | 35 | 23 |
| ಬಳ್ಳಾರಿ | 199 | 91 | 36 | 4 | 6 | 48 | 7 | 26 | 31 | 24 |
| ರಾಯಚೂರು | 180 | 88 | 0 | 0 | 36 | 41 | 1 | 48 | 30 | 25 |
| ವಿಜಯಪುರ | 213 | 90 | 3 | 0 | 45 | 49 | 2 | 18 | 29 | 26 |
| ಬೆಳಗಾವಿ | 502 | 93 | 5 | 0 | 16 | 56 | 2 | 28 | 28 | 27 |
| ಕೊಪ್ಪಳ | 153 | 84 | 2 | 0 | 19 | 43 | 5 | 24 | 25 | 28 |
| ಕಲಬುರಗಿ | 264 | 82 | 0 | 0 | 13 | 42 | 1 | 0 | 19 | 29 |
| ಯಾದಗಿರಿ | 123 | 92 | 4 | 4 | 0 | 30 | 0 | 2 | 18 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಮೇ 2016)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) | ವಿಳಂಬವಾಗಿ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು | ಒಂದು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ | ಅಂತಿಮವಾಗಿ ಪಡೆದ ಶ್ರೇಣಿ [ (D) ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (F) ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] |
|---|---|---|---|---|---|---|---|
| | A | B | C | D | E | F | G |
| ಕೋಲಾರ | 23203 | 22683 | 0.8 | 5 | 1546 | 1 | 1 |
| ಬಾಗಲಕೋಟೆ | 13087 | 13252 | 0.1 | 2 | 727 | 3 | 2 |
| ಚಿಕ್ಕಬಳ್ಳಾಪುರ | 8426 | 8272 | 1.7 | 9 | 702 | 4 | 3 |
| ಉಡುಪಿ | 6233 | 5801 | 1.6 | 8 | 566 | 5 | 4 |
| ಶಿವಮೊಗ್ಗ | 4812 | 4794 | 0.4 | 4 | 283 | 7 | 5 |
| ಬೆಂಗಳೂರು (ಗ್ರಾ) | 9991 | 9988 | 4.3 | 16 | 1110 | 2 | 6 |
| ಉತ್ತರ ಕನ್ನಡ | 2911 | 3080 | 0 | 1 | 207 | 11 | 7 |
| ಚಿತ್ರದುರ್ಗ | 3342 | 3419 | 1.8 | 10 | 208 | 10 | 8 |
| ತುಮಕೂರು | 8650 | 8836 | 5.3 | 20 | 332 | 6 | 9 |
| ಚಿಕ್ಕಮಗಳೂರು | 2432 | 2460 | 3.5 | 15 | 221 | 9 | 10 |
| ದಕ್ಷಿಣ ಕನ್ನಡ | 2161 | 2280 | 1.2 | 7 | 108 | 13 | 11 |
| ರಾಮನಗರ | 2229 | 1938 | 8.1 | 22 | 222 | 8 | 12 |
| ಮೈಸೂರು | 3932 | 3763 | 3.2 | 14 | 135 | 12 | 13 |
| ಕೊಪ್ಪಳ | 1268 | 1274 | 2.5 | 11 | 97 | 14 | 14 |
| ಗದಗ | 824 | 923 | 4.6 | 18 | 82 | 15 | 15 |
| ಹಾಸನ | 1082 | 961 | 7.5 | 21 | 63 | 17 | 16 |
| ಮಂಡ್ಯ | 1156 | 1135 | 12 | 25 | 64 | 16 | 17 |
| ವಿಜಯಪುರ | 1332 | 1331 | 9.8 | 23 | 63 | 17 | 18 |
| ದಾವಣಗೆರೆ | 897 | 833 | 2.9 | 12 | 47 | 22 | 19 |
| ಕೊಡಗು | 260 | 245 | 4.5 | 17 | 52 | 20 | 20 |
| ಬೆಳಗಾವಿ | 922 | 918 | 0.2 | 3 | 19 | 27 | 21 |
| ಧಾರವಾಡ | 353 | 378 | 0.8 | 5 | 19 | 27 | 22 |
| ಹಾವೇರಿ | 869 | 827 | 12.7 | 26 | 57 | 19 | 23 |
| ಚಾಮರಾಜನಗರ | 475 | 396 | 4.8 | 19 | 47 | 22 | 24 |
| ಬಳ್ಳಾರಿ | 771 | 623 | 2.9 | 12 | 30 | 25 | 25 |
| ಬೆಂಗಳೂರು (ನ) | 4854 | 3579 | 15.4 | 28 | 51 | 21 | 26 |
| ಬೀದರ್ | 794 | 766 | 11.1 | 24 | 46 | 24 | 27 |
| ರಾಯಚೂರು | 501 | 523 | 14.5 | 27 | 26 | 26 | 28 |
| ಯಾದಗಿರಿ | 131 | 52 | 19.2 | 30 | 11 | 29 | 29 |
| ಕಲಬುರಗಿ | 107 | 92 | 16.3 | 29 | 4 | 30 | 30 |

ಸುತ್ತೋಲೆ

**ಕರ್ನಾಟಕ ಸರ್ಕಾರ**


ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-01.
ದೂರವಾಣಿ ಸಂಖ್ಯೆ : 080-22372738,
E-mail: karnregs@gmail.com


**ಸಂಖ್ಯೆ: ಗ್ರಾಅಪ 41 ಉಖಾಯೋ 2015**

ದಿನಾಂಕ: 07-04-2016

# ಸುತ್ತೋಲೆ

**ವಿಷಯ:** ಕೇಂದ್ರ ಪುರಸ್ಕೃತ ಮಹಾತ್ಮ ಗಾಂಧಿ ನರೇಗಾ ಮತ್ತು ರಾಜ್ಯ ಸರ್ಕಾರದ ವಿಕಾಸ ಯೋಜನೆಗಳ ಒಗ್ಗೂಡಿಸುವಿಕೆ ಮೂಲಕ ಗ್ರಾಮಗಳ ಸಮಗ್ರ ಅಭಿವೃದ್ಧಿ ಕುರಿತು.

**ಉಲ್ಲೇಖ:**
1. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಉಖಾಯೋ: ಕಾಯ್ದೆ 2005, ಕಾರ್ಯಾಚರಣೆ ಮಾರ್ಗಸೂಚಿ 2013 (ನಾಲ್ಕನೆಯ ಆವೃತ್ತಿ) ಮತ್ತು ಕಾಯ್ದೆಯ ಪರಿಷ್ಕೃತ ಅನುಸೂಚಿ I ಮತ್ತು II.
2. ಗ್ರಾಮ ವಿಕಾಸ ಮಾರ್ಗಸೂಚಿ
3. ನಿರ್ದೇಶಕರು (ಸುಗ್ರಾಯೋ) ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಗಳ ಇವರ 07-04-2016 ರಂದು ಪಂಚಾಯತ್ ರಾಜ್ಯ ಸಂಸ್ಥೆ ಹಾಗೂ ಅನುಷ್ಠಾನ ಇಲಾಖೆಗಳಿಗೆ ಈ ಒಗ್ಗೂಡಿಸುವಿಕೆ ಕುರಿತು ನೀಡಲು ಕೋರಿದ ಎರಡು ಅನಧಿಕೃತ ಟಿಪ್ಪಣಿಗಳು.

******

189 ಗ್ರಾಮೀಣ ವಿಧಾನ ಸಭೆ ಕ್ಷೇತ್ರಗಳ 935 ಗ್ರಾಮಗಳಿಗೆ ಪ್ರತಿ ಗ್ರಾಮಕ್ಕೆ ರೂ 75.00 ಲಕ್ಷದಂತೆ ಅನುದಾನ ನಿಗದಿಪಡಿಸಿ, ಗ್ರಾಮಗಳ ಅಭಿವೃದ್ಧಿಗಾಗಿ ಗ್ರಾಮ ವಿಕಾಸ ಯೋಜನೆಯನ್ನು ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಉಲ್ಲೇಖ (4)ರ ಪ್ರಕಾರ ಸುತ್ತೋಲೆ/ಮಾರ್ಗಸೂಚಿ ಹೊರಡಿಸಿದೆ. ಗ್ರಾಮಗಳ ಪಟ್ಟಿಯೊಂದಿಗೆ ಸದರಿ ಮಾರ್ಗಸೂಚಿಗಳನ್ನು ಇದರೊಂದಿಗೆ ಸಿದ್ದ ಮಾಹಿತಿಗಾಗಿ ಲಗತ್ತಿಸಿದೆ.

ಗ್ರಾಮ ವಿಕಾಸ ಯೋಜನೆಯ ಅನುದಾನ ಹಾಗೂ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಅನುದಾನ ಒಗ್ಗೂಡಿಸಿ ಈ 935 ಗ್ರಾಮಗಳ ಸಮಗ್ರ ಅಭಿವೃದ್ಧಿ ಕೈಗೊಳ್ಳಲು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು ದಿನಾಂಕ: 06-04-2016ರಂದು ನಡೆದ ಸಭೆಯಲ್ಲಿ ಸೂಚನೆ ನೀಡಿರುತ್ತಾರೆ.


ಮಹಾತ್ಮ ಗಾಂಧಿ ನರೇಗಾ ಕಾಯ್ದೆ ಹಾಗೂ ಮಾರ್ಗಸೂಚಿಗಳನ್ವಯ (ಸಂಧಾನ ಮಾಡಬಾರದ ವಿಷಯ ಸಹಿತ) ಈಗಾಗಲೇ ಈ 935 ಗ್ರಾಮ ಸಹಿತ ರಾಜ್ಯದ ಎಲ್ಲಾ ಗ್ರಾಮೀಣ ಭಾಗದಲ್ಲಿ ಈ ಯೋಜನೆ ಗ್ರಾಮ ಪಂಚಾಯತಿ ಹಾಗೂ ಅನುಷ್ಠಾನ ಇಲಾಖೆ ಮೂಲಕ ಅನುಷ್ಠಾನಿಸಲಾಗುತ್ತಿದೆ. ಈ ಯೋಜನೆಯ ಕಾರ್ಯಾಚರಣೆ ಮಾರ್ಗಸೂಚಿ ಅಧ್ಯಾಯ 15ರಲ್ಲಿ ಒಗ್ಗೂಡಿಸುವಿಕೆ ಕುರಿತು ವಿವರಣೆ ನೀಡಲಾಗಿದೆ. ಅದೇ ರೀತಿ ಮಾಸ್ಟರ್ ಸರ್ಕ್ಯೂಲರ್ 2016ರಲ್ಲಿ ಸಹ ಒಗ್ಗೂಡಿಸುವಿಕೆ ಬಗ್ಗೆ ವಿವರಿಸಲಾಗಿದೆ. ಈಗಾಗಲೇ, ಈ ಕುರಿತು ಹಲವಾರು ಸುತ್ತೋಲೆಗಳನ್ನು ಹೊರಡಿಸಲಾಗಿದೆ.

ಸನ್ಮಾನ್ಯ ಮುಖ್ಯ ಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯ 13 ಅಂಶಗಳಿಗೆ ಅವಕಾಶ ಕಲ್ಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಇದೇ ತೆರನಾದ ಕಾಮಗಾರಿಗಳಿಗೆ ಗ್ರಾಮ ವಿಕಾಸ ಪುಟ ಸಂಖ್ಯೆ 26, 27ರಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಎರಡೂ ಯೋಜನೆಗಳ ಒಗ್ಗೂಡಿಸುವಿಕೆಯ ಮೂಲಕ

ಸಮಗ್ರ ಗ್ರಾಮಗಳ ಅಭಿವೃದ್ಧಿಗೆ ಅಗತ್ಯ ಕಾಮಗಾರಿ ತೆಗೆದುಕೊಳ್ಳಲು ಈ ಮೂಲಕ ಅವಕಾಶ ಕಲ್ಪಿಸಿದೆ. ಇದಲ್ಲದೇ ಅನುಸೂಚಿ ಖರ ಕಂಡಿಕೆ (4)ರಡಿ ಪ್ರವರ್ಗ 'ಎ' ರಿಂದ 'ಡಿ'ವರೆಗೆ ಎಲ್ಲಾ ಕಾಮಗಾರಿಗಳನ್ನು ಒಗ್ಗೂಡಿಸುವಿಕೆಯಡಿ ತೆಗೆದುಕೊಳ್ಳಬಹುದು. ಕೂಲಿ ಬಾಬತ್ತು ನರೇಗಾದಡಿ ಮತ್ತು ಅದಕ್ಕೆ ಅನುಗುಣವಾಗಿ ಶೇ 40ರ ಅನುಪಾತದ ಸಾಮಗ್ರಿಗಳ ವೆಚ್ಚ ನರೇಗಾದಡಿ ಭರಿಸಬಹುದು. ಉಳಿದ ಸಾಮಗ್ರಿ ಬಾಬತ್ತಿನ ಮೊತ್ತವನ್ನು ಗ್ರಾಮ ವಿಕಾಸ ಯೋಜನೆಯಡಿ ಭರಿಸುವುದು.

ಇದರಲ್ಲಿ ರಸ್ತೆ ಮತ್ತು ಚರಂಡಿ, ತಿಪ್ಪೆಗುಂಡಿಗಳ ಸಂಸ್ಕರಣೆ ಹಾಗೂ ಆಟದ ಮೈದಾನಗಳಿಗೆ ಹೆಚ್ಚಿನ ಒತ್ತು ನೀಡುವಂತೆ ಮಾನ್ಯ ಸಚಿವರು ನಿರ್ದೇಶಿಸಿರುತ್ತಾರೆ.

ಈ ಎರಡೂ ಯೋಜನೆಯ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ದಾಖಲೆ ಹಾಗೂ ಲೆಕ್ಕ ಪತ್ರಗಳನ್ನು ನಿರ್ವಹಿಸುವುದು. ಗ್ರಾಮ ಸಭೆಯ ಮೂಲಕ ಅರ್ಹ ಕಾಮಗಾರಿ ಆಯ್ಕೆ ಮಾಡಿಕೊಂಡು ಸಮಗ್ರವಾಗಿ ಅಂದಾಜು ಪಟ್ಟಿ ತಯಾರಿಸಿ, ನರೇಗಾದಡಿ ಮತ್ತು ಗ್ರಾಮ ವಿಕಾಸ ಯೋಜನೆಯಲ್ಲಿ ತೆಗೆದುಕೊಳ್ಳಬಹುದಾದ ಬಾಬತ್ತುಗಳನ್ನು ವಿಂಗಡಿಸಿಕೊಳ್ಳುವುದು. ಕಾಮಗಾರಿಗಳನ್ನು ಉದ್ಯೋಗ ಚೀಟಿ ಹೊಂದಿದ ಅಕುಶಲ ಕಾರ್ಮಿಕರಿಂದ ಅನುಷ್ಠಾನಿಸತಕ್ಕದ್ದು, ಮಾನವ ಅಕುಶಲ ಕೆಲಸಗಳನ್ನು ನಿರ್ವಹಿಸಬಹುದಾದ ಕಾಮಗಾರಿಗಳಿಗೆ ಯಂತ್ರಗಳನ್ನು ಬಳಸುವಂತಿಲ್ಲ, ಗುತ್ತಿಗೆದಾರರ ಮೂಲಕ ಕಾಮಗಾರಿ ನಿರ್ವಹಣೆ ನಿಷೇದಿತವಾಗಿದೆ. ಇಂತಹ ಕಾಮಗಾರಿಗಳು ಸಾಮಾಜಿಕ ಪರಿಶೋಧನೆ, SQM/DQM ಪರಿವೀಕ್ಷಣೆ ಮತ್ತು ಓಂಬುಡ್ಸ್‌ಮನ್ ವ್ಯವಸ್ಥೆಗೆ ಒಳಪಟ್ಟಿರುತ್ತವೆ.



(ಮುನೀಷ್ ಮೌದ್ಗಿಲ್)
ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸುತ್ತೋಲೆ

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:16–04–2016.

ಸಂ.ಗ್ರಾಅಪ/09/ಗ್ರಾಪಂಅ/2016

## ಸುತ್ತೋಲೆ–1

**ವಿಷಯ:** ಗ್ರಾಮ ಪಂಚಾಯತಿಗಳು ತೆರಿಗೆಗಳು, ದರಗಳು ಮತ್ತು ಶುಲ್ಕಗಳನ್ನು ವಿಧಿಸುವ ಹಾಗೂ ಪರಿಷ್ಕರಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ : ಸಂವ್ಯಶಾಇ 45 ಶಾಸನ 2015, ದಿನಾಂಕ:31–12–2015.
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 09 ಗ್ರಾಪಂಅ 2016 ದಿನಾಂಕ:25–02–2016.

******

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ನ್ನು ಜಾರಿಗೊಳಿಸುವ ಮೂಲಕ ಹಾಗೂ ವಿಕೇಂದ್ರಿಕರಣದ ತತ್ವಕ್ಕನುಸಾರವಾಗಿ ರಾಜ್ಯದ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನ, ಪ್ರಕಾರ್ಯಗಳು ಹಾಗೂ ಸಿಬ್ಬಂದಿಗಳನ್ನು ಹಸ್ತಾಂತರಿಸಲಾಗಿದೆ. ಆಯಾ ಪ್ರಕಾರ್ಯಗಳನ್ನು ಆಯಾ ಹಂತಗಳಲ್ಲಿಯೇ ಅನುಷ್ಠಾನಗೊಳಿಸಲು ಅನುವಾಗುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಎಲಾ ಯೋಜನೆಗಳನ್ನು ಗ್ರಾಮ ಪಂಚಾಯತಿಯಿಂದ ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ವಹಿಸಿದ್ದು, ಅದರಂತೆ ಪ್ರತಿ ಯೋಜನೆಯ ಅನುದಾನವನ್ನು ನೇರವಾಗಿ ಗ್ರಾಮ ಪಂಚಾಯತಿಗೆ ಬಿಡುಗಡೆ ಮಾಡಲಾಗುತ್ತಿದೆ. ಇದರಿಂದಾಗಿ ಗ್ರಾಮ ಪಂಚಾಯತಿಗಳು ಪರಿಣಾಮಕಾರಿಯಾಗಿ ಸ್ಥಳೀಯ ಸರ್ಕಾರದಂತೆ ಕಾರ್ಯನಿರ್ವಹಿಸಬೇಕಾಗಿದ್ದು, ಅವುಗಳ ಜವಾಬ್ದಾರಿ ಮತ್ತು ಕರ್ತವ್ಯಗಳು ಹೆಚ್ಚಾಗಿವೆ.

ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) ಅಧಿನಿಯಮ, 2015 ದಿನಾಂಕ:25–02–2016 ರಿಂದ ಜಾರಿಗೆ ಬಂದಿದ್ದು, ಅದರಂತೆ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳು ಕ್ರಮವಹಿಸುವಂತೆ ಈಗಾಗಲೆ ಎಲ್ಲಾ ಜಿಲ್ಲಾ ಪಂಚಾಯತಿಯು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) ಅಧಿನಿಯಮ, 2015ರ ಪ್ರಕರಣ 199 ರಲ್ಲಿ ಗ್ರಾಮ ಪಂಚಾಯತಿಗಳು ಪಂಚಾಯತಿ ಪ್ರದೇಶದ ಪರಿಮಿತಿಗೊಳಗಿರುವ **ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಕಟ್ಟಡಗಳು ಮತ್ತು ಭೂಮಿಗಳ ಮೇಲೆ ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿ** ಹಾಗೂ ಗ್ರಾಮ ಪಂಚಾಯತಿಯು ಕುಡಿಯುವುದಕ್ಕೆ ಮತ್ತು ಇತರ ಉದ್ದೇಶಗಳಿಗಾಗಿ ನೀರು ಸರಬರಾಜು ಮಾಡಲು ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರರಕಣ 199 ರಂತೆ ಗ್ರಾಮ ಪಂಚಾಯತಿಗಳು ತೆರಿಗೆ ಮತ್ತು ಶುಲ್ಕವನ್ನು ಅನುಸೂಚಿ–IV ರಲ್ಲಿ ನಿರ್ದಿಷ್ಟಪಡಿಸಿರುವಂತೆ ಹಾಗೂ ನಿಯಮಿಸಬಹುದಾದಂತ ಯಾವುದೇ ಇತರೆ ಶುಲ್ಕವನ್ನು ವಿಧಿಸಿ, ವಸೂಲಿ ಮಾಡಬಹುದಾಗಿದೆ.

ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) ಅಧಿನಿಯಮ, 2015ರ **ಅನುಸೂಚಿ–IV ರಲ್ಲಿ ಗ್ರಾಮ ಪಂಚಾಯತಿಗಳು ಕೈಗಾರಿಕೆಗಳು, ಕಾರ್ಖಾನೆಗಳು, ಐ.ಟಿ. ಪಾರ್ಕ್‌ಗಳು, ಹಾರ್ಡ್‌ವೇರ್ ಪಾರ್ಕ್, ಟೆಕ್ಸ್‌ಟೈಲ್ ಪಾರ್ಕ್, ಬಯೋಟೆಕ್ ಪಾರ್ಕ್, ಪವರ್ ಪ್ಲಾಂಟ್ಸ್, ಹೈಡ್ರೋ ಥರ್ಮಲ್, ಸೋಲಾರ್ ಸ್ಥಾವರಗಳು, ವಿಂಡ್‌ಮಿಲ್ಸ್ ಮತ್ತು ಏರ್‌ಪೋರ್ಟ್ ಮತ್ತು ಇವುಗಳಿಗೆ ಸಂಬಂಧಿಸಿದ ಪ್ರದೇಶ ಇತ್ಯಾದಿಗಳು (ಕೆ.ಐ.ಎ.ಡಿ.ಬಿ ಕೈಗಾರಿಕಾ ಪ್ರದೇಶದಲ್ಲಿ ವಿಶೇಷ ಆರ್ಥಿಕ ವಲಯ (SEZ) ಮತ್ತು ಇತರ ಕೈಗಾರಿಕಾ ಪ್ರದೇಶ ಅಥವಾ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ವಲಯಗಳು) ಕೃಷಿಯೇತರ ಖಾಲಿ ಜಮೀನು ಹಾಗೂ ವಾರ್ಷಿಕ ಎಲ್ಲಾ ರೀತಿಯ ಪ್ರತಿ ಮೊಬೈಲ್ ಟವರ್‌ಗಳ ಮೇಲೆ ತೆರಿಗೆ ವಿಧಿಸಲು ಅವಕಾಶ** ಕಲ್ಪಿಸಲಾಗಿದೆ.

ತೆರಿಗೆಗೆ ಗುರಿಯಾಗುವ ಸ್ವತ್ತಿನ ಮೂಲ ಮೌಲ್ಯ ಎಂದರೆ (ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ, 1957 ರ ಪ್ರಕರಣ 45ಬಿ ರಡಿಯಲ್ಲಿ ಪ್ರಕಟಿಸಲಾದ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದಲ್ಲಿ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ ನಿರ್ಧರಣೆಯ ಸಮಯದ ಮೌಲ್ಯದ ಸವಕಳಿಯನ್ನು ಕಳೆದು ತೆರಿಗೆ ನಿರ್ಧರಿಸಬೇಕಾಗಿರುತ್ತದೆ. ಉಪನೋಂದಾಣಾಧಿಕಾರಿಗಳಿಂದ ಸ್ವತ್ತಿನ ಮೂಲ ಮಾರುಕಟ್ಟೆ ಮೌಲ್ಯವನ್ನು ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪಡೆದುಕೊಂಡು ತೆರಿಗೆ ನಿರ್ಧರಿಸಲು ಕ್ರಮ ವಹಿಸತಕ್ಕದ್ದು.

ಮುಂದುವರೆದು, ಗ್ರಾಮ ಪಂಚಾಯತಿಗಳು ಮನೋರಂಜನೆಗಳ ಮೇಲೆ, ವಾಹನ ನಿಲುಗಡೆ, ಮಾರುಕಟ್ಟೆಗಳ ಮೇಲೆ, ಪಶುಗಳ ನೊಂದಣಿಯ ಮೇಲೆ ಹಾಗೂ ಆಪ್ಟಿಕಲ್ ಫೈಬರ್ಸ್ ಕೇಬಲ್‌ಗಳನ್ನು ಹಾಕುವುದಕ್ಕಾಗಿ ರಸ್ತೆಗಳನ್ನು ತೋಡುವುದಕ್ಕಾಗಿ ಶುಲ್ಕಗಳನ್ನು ವಿಧಿಸಿ, ವಸೂಲಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಸದರಿ ಅಧಿನಿಯಮದ ಪ್ರಕರಣ 199 ಎ ರನ್ವಯ ಗ್ರಾಮ ಪಂಚಾಯತಿಯು 199ನೇ ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ ತೆರಿಗೆಗಳು ಮತ್ತು ದರಗಳನ್ನು, ಕಟ್ಟಡಗಳು ಮತ್ತು ಕೃಷಿಯೇತರ ಭೂಮಿಯ ಸಂಬಂಧದಲ್ಲಿ ಕನಿಷ್ಠ 2 ವರ್ಷಗಳಿಗೊಮ್ಮೆ ಮತ್ತು ಅನುಸೂಚಿ–IV ರಲ್ಲಿ ನಿರ್ದಿಷ್ಟಪಡಿಸಿದ ಇತರ ಬಾಬ್ತುಗಳ ಮೇಲೆ ವರ್ಷದಲ್ಲಿ ಕನಿಷ್ಠ ಒಮ್ಮೆ ಪರಿಷ್ಕರಿಸತಕ್ಕದ್ದು, **ಸದರಿ ಅಧಿನಿಯಮದ ಪ್ರಕರಣ 200 ರನ್ವಯ ಬಾಕಿಗಳನ್ನು ಹೊರತುಪಡಿಸಿ ಗ್ರಾಮ ಪಂಚಾಯತಿಗೆ ಸಲ್ಲಿಕೆಯಾಗಬೇಕಾಗಿರುವ ತೆರಿಗೆಗಳು ವಸೂಲಿ ಮಾಡುವುದು ಗ್ರಾಮ ಪಂಚಾಯತಿಗಳ ಪ್ರಾಥಮಿಕ ಹೊಣೆಗಾರಿಕೆಯಾಗಿರುತ್ತದೆ ಮತ್ತು ವಸೂಲು ಆಗಬೇಕಾಗಿರುವ ತೆರಿಗೆಯಲ್ಲಿ ಶೇ 80 ರಷ್ಟು ಕಡಿಮೆ ವಸೂಲಾತಿಯಾಗಿದ್ದರೆ ಹಾಗೆ ಕಡಿಮೆ ವಸೂಲಾತಿಯಾಗಿರುವುದಕ್ಕೆ ಕಾರಣಗಳ ಬಗ್ಗೆ ಗ್ರಾಮ ಪಂಚಾಯತ್ ತನಿಖೆ ಮಾಡಿ ಅವಶ್ಯಕ ಕ್ರಮ ತೆಗೆದುಕೊಳ್ಳತಕ್ಕದೆಂದೂ ಸೂಚಿಸಿದೆ.**

ಮೇಲ್ಕಂಡಂತೆ ವಿವರಿಸಿರುವಂತೆ ಗ್ರಾಮ ಪಂಚಾಯತಿಗಳು ತೆರಿಗೆಗಳನ್ನು ವಿಧಿಸುವ, ಪರಿಷ್ಕರಿಸುವ ಹಾಗೂ ದರಗಳು ಮತ್ತು ಶುಲ್ಕವನ್ನು ವಿಧಿಸುವ ಬಗ್ಗೆ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳಿಗೆ ತಿಳಿಸಿದೆ.

**(ಕೆ. ಯಾಲಕ್ಕಿಗೌಡ)**
ನಿರ್ದೇಶಕರು(ಪಂ.ರಾಜ್–1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಸುತ್ತೋಲೆ

## ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:16-04-2016.

ಸಂ.ಗ್ರಾಅಪ/09/ಗ್ರಾಪಂಅ/2016

## ಸುತ್ತೋಲೆ-2

**ವಿಷಯ:** ಗ್ರಾಮ ಪಂಚಾಯತಿಗಳು ಮೊಬೈಲ್ ಟವರ್ ಸ್ಥಾಪಿಸಲು ಮತ್ತು ಜಾಹೀರಾತು ಹಾಗೂ ಜಾಹೀರಾತು ಫಲಕಗಳನ್ನು ನಿಲ್ಲಿಸಲು ಅನುಮತಿ ನೀಡಲು ಹಾಗೂ ತೆರಿಗೆ ವಿಧಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 45 ಶಾಸನ 2015, ದಿನಾಂಕ: 31-12-2015.
2. ಸರ್ಕಾರದ ಅಧಿಸೂಚನೆ ಸಂಖ್ಯೆ 2 :ಗ್ರಾಅಪ 788 ಗ್ರಾಪಂಅ 2014, ದಿನಾಂಕ:08-05-2015.
3. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 09 ಗ್ರಾಪಂಅ 2016 ದಿನಾಂಕ:25-02-2016.

******

ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) ಅಧಿನಿಯಮ, 2015 ದಿನಾಂಕ:25-02-2016 ರಿಂದ ಜಾರಿಗೆ ಬಂದಿದ್ದು, ಅದರಂತೆ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳು ಕ್ರಮವಹಿಸುವಂತೆ ಈಗಾಗಲೆ ಎಲ್ಲಾ ಜಿಲ್ಲಾ ಪಂಚಾಯತಿಯು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) ಅಧಿನಿಯಮ, 2015ರ ಪ್ರಕರಣ ಪ್ರಕರಣ 64 ಮತ್ತು ಕರ್ನಾಟಕ ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯತಿಗಳ, ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯತಿಗಳ ನಿಯಂತ್ರಣ) ಮಾದರಿ ಉಪವಿಧಿಗಳು 2015 ರನ್ವಯ ಗ್ರಾಮ ಪಂಚಾಯತಿಯಿಂದ ಬರಹದ ಅನುಮತಿಯಿಲ್ಲದೆ ಯಾವುದೇ ಕಟ್ಟಡವನ್ನು ನಿರ್ಮಿಸಲು ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಕಟ್ಟಡವನ್ನು ಬದಲಾಯಿಸಲು ಅಥವಾ ಅದಕ್ಕೆ ಸೇರ್ಪಡೆ ಮಾಡಲು ಅಥವಾ ಕಟ್ಟಡವನ್ನು ಪುನರ್ ನಿರ್ಮಿಸಲು ಅವಕಾಶವಿರುವುದಿಲ್ಲ. ಜಾಹೀರಾತು ಫಲಕಗಳನ್ನು ನಿಲ್ಲಿಸಲು ಅಥವಾ ಆವರಣಗಳ ಒಳಗೆ ಖಾಲಿ ಇರುವ ಯಾವುದೇ ಜಾಗದಲ್ಲಿ ಅಥವಾ ಆ ಸ್ಥಳಕ್ಕೆ ಹೊಂದಿಕೊಂಡಿರುವ ಮೊಬೈಲ್ ಟವರ್‌ಗಳನ್ನು ಸ್ಥಾಪಿಸಲು ಗ್ರಾಮ ಪಂಚಾಯತಿಯಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ.

ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) ಅಧಿನಿಯಮ, 2015ರ **ಅನುಸೂಚಿ-IV** ರಲ್ಲಿ **ಗ್ರಾಮ ಪಂಚಾಯತಿಗಳು ವಾರ್ಷಿಕ ಎಲ್ಲಾ ರೀತಿಯ ಪ್ರತಿ ಮೊಬೈಲ್ ಟವರ್‌ಗಳ ಮೇಲೆ ರೂ.12,000/- ತೆರಿಗೆ ವಿಧಿಸಲು** ಮತ್ತು ಜಾಹೀರಾತುಗಳು ಹಾಗೂ ಹೋರ್ಡಿಂಗ್‌ಗಳ ಮೇಲೆ ಪ್ರತಿ ಚದರ ಮೀಟರ್‌ಗೆ ಅಥವಾ ಅದರ ಭಾಗಕ್ಕೆ ತಿಂಗಳೊಂದಕ್ಕೆ 5.00 ರೂಪಾಯಿಗಳು ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.

ಮೇಲ್ಕಂಡಂತೆ ವಿವರಿಸಿರುವಂತೆ ಗ್ರಾಮ ಪಂಚಾಯತಿಗಳು ಮೊಬೈಲ್ ಟವರ್ ಸ್ಥಾಪಿಸಲು ಮತ್ತು ಜಾಹೀರಾತು ಹಾಗೂ ಜಾಹೀರಾತು ಫಲಕಗಳನ್ನು ನಿಲ್ಲಿಸಲು ಅನುಮತಿ ನೀಡಲು ಹಾಗೂ ತೆರಿಗೆ ವಿಧಿಸುವ ಬಗ್ಗೆ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳಿಗೆ ತಿಳಿಸಿದೆ.

**(ಕೆ. ಯಾಲಕ್ಕಿಗೌಡ)**

ನಿರ್ದೇಶಕರು(ಪಂ.ರಾಜ್–1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಸುತ್ತೋಲೆ

## ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:16–04–2016.

ಸಂ.ಗ್ರಾಅಪ/09/ಗ್ರಾಪಂಅ/2016

## ಸುತ್ತೋಲೆ–3


**ವಿಷಯ:** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸ್ಥಾಪಿಸುವ ಕೈಗಾರಿಕೆಗಳಿಗೆ ಗ್ರಾಮ ಪಂಚಾಯತಿಗಳಿಂದ "ಅನುಮತಿ" ಪಡೆಯಲು ಹಾಗೂ ಟ್ರೇಡ್ ಲೈಸೆನ್ಸ್ ಮತ್ತು ನವೀಕರಣ ಲೈಸೆನ್ಸ್ ಫೀಜುಗಳನ್ನು ವಸೂಲಿ ಮಾಡದಿರುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 17 ಗ್ರಾಪಂಅ 2015 ದಿನಾಂಕ: 24–02–2016.

******

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸ್ಥಾಪಿಸುವ ಕೈಗಾರಿಕೆಗಳಿಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 66 ರಡಿ ಕೈಗಾರಿಕೆಗಳನ್ನು ಸ್ಥಾಪಿಸಲು ಗ್ರಾಮ ಪಂಚಾಯತಿಗಳಿಂದ "ಅನುಮತಿ" ಮಾತ್ರ ಅಗತ್ಯವಿದೆ. **ಆದರೆ ಟ್ರೇಡ್ ಲೈಸೆನ್ಸ್ ನೀಡಲು ಗ್ರಾಮ ಪಂಚಾಯತಿಗಳಿಗೆ ಯಾವುದೇ ಅಧಿಕಾರವಿರುವುದಿಲ್ಲ.** ಗ್ರಾಮ ಪಂಚಾಯತಿಗಳು ಅವುಗಳ ವ್ಯಾಪ್ತಿಯ ಕೈಗಾರಿಕೆಗಳ ಮಾಲೀಕರಿಂದ ಲೈಸೆನ್ಸ್ ಹಾಗೂ ಲೈಸೆನ್ಸ್ ನವೀಕರಣ ಬಾಬ್ತಿಗಾಗಿ ಕೈಗಾರಿಕೆಗಳ ಮೇಲೆ ನಿಯಮಬಾಹಿರವಾಗಿ ಗರಿಷ್ಠ ಮೊತ್ತವನ್ನು ನಿಗದಿಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 66 ರಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಗ್ರಾಮ ಪಂಚಾಯತಿಗಳಿಂದ ಅನುಮತಿಯನ್ನು ಮಾತ್ರ ನೀಡಬೇಕಾಗಿರುತ್ತದೆ. **ಪ್ರಸ್ತುತ ಗ್ರಾಮ ಪಂಚಾಯತಿಗಳು ಟ್ರೇಡ್ ಲೈಸೆನ್ಸ್ ಮತ್ತು ನವೀಕರಣ ಲೈಸೆನ್ಸ್ ಫೀಜುಗಳನ್ನು ತತ್‌ಕ್ಷಣದಿಂದ ವಸೂಲಿ ಮಾಡದಿರುವಂತೆ ತಿಳಿಸಿದೆ. ಮುಂದುವರೆದು, ಕೈಗಾರಿಕೆಗಳಿಗೆ ಅಭಿವೃದ್ಧಿ ಶುಲ್ಕ ವಿಧಿಸಲು ಗ್ರಾಮ ಪಂಚಾಯತಿಗಳಿಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರಲ್ಲಿ ಅವಕಾಶ ಕಲ್ಪಿಸಿರುವುದಿಲ್ಲವಾದ್ದರಿಂದ ಗ್ರಾಮ ಪಂಚಾಯತಿಗಳು ಕೈಗಾರಿಕೆಗಳಿಗೆ ಅಭಿವೃದ್ಧಿ ಶುಲ್ಕ ವಿಧಿಸದಂತೆ ಸೂಚಿಸಿದೆ.**

ಮೇಲ್ಕಂಡಂತೆ ವಿವರಿಸಿರುವಂತೆ ಗ್ರಾಮ ಪಂಚಾಯತಿಗಳು ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳಿಗೆ ತಿಳಿಸಿದೆ.



(ಕೆ. ಯಾಲಕ್ಕಿಗೌಡ)
ನಿರ್ದೇಶಕರು(ಪಂ.ರಾಜ್–1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಸುತ್ತೋಲೆ

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:16–04–2016.

ಸಂ.ಗ್ರಾಅಪ/09/ಗ್ರಾಪಂಅ/2016

## ಸುತ್ತೋಲೆ–4

**ವಿಷಯ:** ಗ್ರಾಮ ಪಂಚಾಯತಿಗಳು ಸೇವಾ ಮತ್ತು ನಿರ್ವಹಣಾ ಶುಲ್ಕವನ್ನು ವಿಧಿಸಿ ವಸೂಲಿ ಮಾಡುವ ಬಗ್ಗೆ

**ಉಲ್ಲೇಖ:**

1. ಸರ್ಕಾರದ ಅಧಿಸೂಚನೆ ಸಂಖ್ಯೆ : ಸಂವ್ಯಶಾಇ 45 ಶಾಸನ 2015, ದಿನಾಂಕ:31–12–2015.
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 09 ಗ್ರಾಪಂಅ 2016 ದಿನಾಂಕ: 25–02–2016.
3. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 86 ಗ್ರಾಪಂಅ 2014, ದಿನಾಂಕ: 11–11–2014.

******

ಸರ್ಕಾರವು ದಿನಾಂಕ : 11–11–2014 ರಲ್ಲಿ ಹೊರಡಿಸಿರುವ ಪತ್ರದಲ್ಲಿನ ಮಾರ್ಗಸೂಚಿಗಳಲ್ಲಿ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿನ ಇರುವ ಪ್ರದೇಶ ಮತ್ತು ಏಕನಿವೇಶನ ವಸತಿ / ವಸತಿಯೇತರಗಾಗಿ ಭೂ ಪರಿವರ್ತಿತ ಜಮೀನುಗಳಲ್ಲಿನ ವಿನ್ಯಾಸ ಅನುಮೋದನೆಗಾಗಿ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳು, ಅನುಸರಿಸಬೇಕಾದ ವಿಧಾನಗಳ ಬಗ್ಗೆ ಸವಿವರವಾಗಿ ತಿಳಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯು ನಿಗಧಿಪಡಿಸಿದ ಹಾಗೂ ಸೂಚಿತ ಮಾರ್ಗಸೂಚನೆಯನ್ವಯ ಶುಲ್ಕಗಳನ್ನು ಹಾಗೂ ಬಡಾವಣೆಗೆ ಗ್ರಾಮ ಪಂಚಾಯ್ತಿಯಿಂದಲೇ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಅರ್ಜಿದಾರರು ಒಪ್ಪಿಗೆ ನೀಡಿದ್ದಲ್ಲಿ, **ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳಿಗೆ ತಗಲುವ ಅಂದಾಜು ಪಟ್ಟಿಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ಪಡೆದುಕೊಂಡು ಅಂದಾಜು ಪಟ್ಟಿಯಂತೆ ಅಭಿವೃದ್ಧಿ ಶುಲ್ಕವನ್ನು ಪಾವತಿಸುವ ಬಗ್ಗೆ ಅರ್ಜಿದಾರರಿಗೆ / ಅಭಿವೃದ್ಧಿದಾರರಿಗೆ ತಿಳುವಳಿಕೆ ನೀಡಿ ಮುಂಗಡವಾಗಿ ಪಂಚಾಯ್ತಿಗೆ ಪಾವತಿಸಿಕೊಳ್ಳಬೇಕಾಗಿರುತ್ತದೆ.** ಲೇಔಟ್ ಮಾಡುವ ಅರ್ಜಿದಾರರು ಅಂದಾಜು ವೆಚ್ಚಕ್ಕೆ ಅನುಗುಣವಾಗಿ ಪ್ರಸ್ತುತ ನಿಗದಿಪಡಿಸಿರುವ ಅಭಿವೃದ್ಧಿ ಶುಲ್ಕಕ್ಕೆ ಹೆಚ್ಚುವರಿಯಾಗಿ ಶೇ 5 ರಷ್ಟು ಸೇವಾ ಶುಲ್ಕ ಮತ್ತು ಶೇ 5 ರಷ್ಟು ನಿರ್ವಹಣಾ ಶುಲ್ಕವನ್ನು ಪಾವತಿಕೊಳ್ಳಲು ಅವಕಾಶ ಕಲ್ಪಿಸಲಾಗಿದ್ದು, ಅದರಂತೆ **ಗ್ರಾಮ ಪಂಚಾಯತಿಗಳು ಶೇ 10 ರಷ್ಟು ಸೇವಾ ಮತ್ತು ನಿರ್ವಹಣಾ ಶುಲ್ಕವನ್ನು ವಿಧಿಸಿ, ವಸೂಲಿ ಮಾಡಿಕೊಳ್ಳಬಹುದಾಗಿದೆ.**

ಗ್ರಾಮ ಪಂಚಾಯತಿಗಳು ಕಟ್ಟಡದ ಲೈಸೆನ್ಸ್ ಅಥವಾ ವಸತಿ ಅಥವಾ ವಾಸಸ್ಥಳಗಳ ಲೇಔಟ್‌ಗಳ ಅನುಮೋದನೆಗಳನ್ನು ನೀಡುವ ವಿಷಯದಲ್ಲಿ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 ರ ಉಪಬಂಧಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯತಿಗಳು ಸ್ಥಳೀಯ ಯೋಜನಾ ಪ್ರಾಧಿಕಾರಗಳಿಂದ ಲೇಔಟ್‌ಗೆ ಅನುಮೋದನೆ ಪಡೆಯಬೇಕಾಗುತ್ತದೆ. ಸ್ಥಳೀಯ ಯೋಜನಾ ಪ್ರಾಧಿಕಾರದ ಹೊರಗಡೆ ಇರುವ ಪ್ರದೇಶಕ್ಕೆ ಗ್ರಾಮ ಪಂಚಾಯತಿ

ಮತ್ತು ತಾಲ್ಲೂಕು ಪಂಚಾಯತಿಯಿಂದ ಲೇಔಟ್‌ಗೆ ಅನುಮೋದನೆ ಪಡೆಯಬೇಕಾಗುತ್ತದೆ. ಯಾವುದೇ ಅನುಮೋದನೆಯು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 ರ ಉಪಬಂಧಗಳ ಯಾವುದೇ ಉಲ್ಲಂಘನೆಯು ದುರ್ನಡತೆಯಾಗಿದ್ದು, ಅದಕ್ಕಾಗಿ ಸಂಬಂಧಪಟ್ಟ ಅಧಿಕಾರಿ ಅಥವಾ ಸಿಬ್ಬಂದಿಯು ಶಿಸ್ತು ಕ್ರಮಕ್ಕೆ ಹೊಣೆಗಾರರಾಗಿರಬೇಕಾಗಿರುತ್ತದೆ.

ಮೇಲ್ಕಂಡಂತೆ ವಿವರಿಸಿರುವಂತೆ ಗ್ರಾಮ ಪಂಚಾಯತಿಗಳು ಸೇವಾ ಮತ್ತು ನಿರ್ವಹಣಾ ಶುಲ್ಕವನ್ನು ವಿಧಿಸುವ ಬಗ್ಗೆ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳಿಗೆ ತಿಳಿಸಿದೆ.



(ಕೆ. ಯಾಲಕ್ಕಿಗೌಡ)
ನಿರ್ದೇಶಕರು(ಪಂ.ರಾಜ್–1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2016–17ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 5 ಲಕ್ಷ ವೈಯಕ್ತಿಕ ಕಾಮಗಾರಿಗಳನ್ನು ಹಾಗೂ 1 ಲಕ್ಷ ಸಮುದಾಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು.

**ಓದಲಾಗಿದೆ:**

1. 2016–17ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಗ್ರಾ.ಅ.ಪಂ.ರಾಜ್ ಇಲಾಖೆಗೆ ಸಂಬಂಧಿಸಿದಂತೆ ಕಂಡಿಕೆ 283ರಲ್ಲಿ ಘೋಷಿಸಿರುವ ರೀತ್ಯಾ.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 186 ಉಖಾಯೋ 2012, ಬೆಂಗಳೂರು, ದಿನಾಂಕ: 23–10–2013.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 247 ಉಖಾಯೋ 2014, ಬೆಂಗಳೂರು, ದಿನಾಂಕ: 12–01–2016.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 186 ಉಖಾಯೋ 2012, ಬೆಂಗಳೂರು, ದಿನಾಂಕ: 02–09–2014.
5. ಸರ್ಕಾರದ ಆದೇಶದ ಸಂಖ್ಯೆ: ಗ್ರಾಅಪ 247 ಉಖಾಯೋ 2014, ಬೆಂಗಳೂರು, ದಿನಾಂಕ: 31–03–2016.
6. ಆಯುಕ್ತಾಲಯದ ಪತ್ರ ಸಂಖ್ಯೆ: ಗ್ರಾಅಪ 439 ಉಖಾಯೋ 2015, ದಿನಾಂಕ: 26–03–2015.

******

**ಪ್ರಸ್ತಾವನೆ:**

ಮಹಾತ್ಮ ಗಾಂಧಿ ನರೇಗಾ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಮಹಾತ್ಮ ಗಾಂಧಿ ನರೇಗಾ ಯೋಜನೆಯು ಕೇಂದ್ರ ಪುರಸ್ಕೃತ ಹಕ್ಕು ಆಧಾರಿತ, ಬೇಡಿಕೆ ಆಧಾರಿತವಾದ ಕಾರ್ಯಕ್ರಮವಾಗಿರುತ್ತದೆ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ಇದೊಂದು ಪ್ರಮುಖ ಯೋಜನೆಯಾಗಿರುತ್ತದೆ.

ಮೇಲೆ ಓದಲಾದ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 247 ಉಖಾಯೋ 2014, ಬೆಂಗಳೂರು, ದಿನಾಂಕ: 12–01–2016 ಮತ್ತು ಸರ್ಕಾರದ ಆದೇಶದ ಸಂಖ್ಯೆ: ಗ್ರಾಅಪ 247 ಉಖಾಯೋ 2014, ಬೆಂಗಳೂರು, ದಿನಾಂಕ: 31–03–2016ರ ಸರ್ಕಾರದ ಆದೇಶಗಳಲ್ಲಿ ನಿಯಮಿತವಾಗಿ ಪಾಲ್ಗೊಳ್ಳುವ ಅನುಷ್ಠಾನ ಇಲಾಖೆಗಳನ್ನು ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಇಲಾಖೆಗಳ ಕಾಮಗಾರಿಗಳನ್ನು ಸ್ವತಂತ್ರವಾಗಿ ಅಥವಾ ಒಗ್ಗೂಡಿಸುವಿಕೆಯ ಮೂಲಕ ಅನುಷ್ಠಾನಗೊಳಿಸಲು ಅನುಷ್ಠಾನ ಸಂಸ್ಥೆಗಳನ್ನಾಗಿ ಘೋಷಿಸಲಾಗಿದೆ.

ಮೇಲೆ ಓದಲಾದ 2016–17ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಗ್ರಾ.ಅ.ಪಂ.ರಾಜ್ ಇಲಾಖೆಗೆ ಸಂಬಂಧಿಸಿದಂತೆ ಕಂಡಿಕೆ 283ರಲ್ಲಿ ಘೋಷಿಸಿರುವ ರೀತ್ಯಾ 2016–17ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಮಹಾತ್ಮ ಗಾಂಧಿ ನರೇಗಾ ಯೋಜನೆಗೆ ಸಂಬಂಧಿಸಿದಂತೆ 5 ಲಕ್ಷ ವೈಯಕ್ತಿಕ ಕಾಮಗಾರಿಗಳು ಹಾಗೂ 1 ಲಕ್ಷ ಸಮುದಾಯ ಕಾಮಗಾರಿಗಳನ್ನು ಕೈಗೊಳ್ಳಲಾಗುವುದೆಂದು ಘೋಷಿಸಲಾಗಿರುತ್ತದೆ.

ಕೇಂದ್ರ ಸರ್ಕಾರವು ಕೂಡ 2016–17ನೇ ಸಾಲಿನಲ್ಲಿ ಕೆಲವು ಪ್ರಮುಖವಾದ ಕಾಮಗಾರಿಗಳನ್ನು ಅನುಮೋದಿಸಿದ ಅನುದಾನದಲ್ಲಿ ಬಳಸಿಕೊಂಡು ಅನುಷ್ಠಾನಿಸಲು ತಿಳಿಸಿದ್ದು, ಅವುಗಳ ಮೇಲೆ ಹೆಚ್ಚಿನ ಆದ್ಯತೆ

ನೀಡಲು ತಿಳಿಸಿರುತ್ತದೆ. ಹೆಚ್ಚಾಗಿ ಮಾನವ ದಿನಗಳನ್ನು ಸೃಜಿಸಿ, ಉದ್ಯೋಗಾವಕಾಶಗಳನ್ನು ಸೃಷ್ಟಿಸಿ, ಇದರ ಮೂಲಕ ಗ್ರಾಮೀಣ ಜನರಿಗೆ ಉದ್ಯೋಗವನ್ನು ಒದಗಿಸಿ, ವಲಸೆ ಹೋಗುವುದನ್ನು ತಪ್ಪಿಸಬಹುದಾಗಿರುತ್ತದೆ. ಈಗಾಗಲೇ, ಆಯವ್ಯಯದಲ್ಲಿ ಘೋಷಿಸಿರುವ ಕಾರ್ಯಕ್ರಮಗಳನ್ನು ಹಾಗೂ ಕೇಂದ್ರ ಸರ್ಕಾರ ಆದ್ಯತೆ ನೀಡಿರುವ ಕಾರ್ಯಕ್ರಮಗಳನ್ನು ಕೂಡಲೇ, 2016-17ನೇ ಸಾಲಿಗೆ 5.70 ಲಕ್ಷ ವೈಯಕ್ತಿಕ ಕಾಮಗಾರಿಗಳನ್ನು ಹಾಗೂ 1.14 ಲಕ್ಷ ಸಮುದಾಯದ ಕಾಮಗಾರಿಗಳನ್ನು ಹಮ್ಮಿಕೊಂಡು, ಅನುಷ್ಠಾನಿಸಲು ತಿಳಿಸಲಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ವೈಯಕ್ತಿಕ ಕಾಮಗಾರಿಗಳನ್ನು ಮಹಾತ್ಮ ಗಾಂಧಿ ನರೇಗಾ ಅಧಿನಿಯಮದ ಪರಿಷ್ಕೃತ ಅನುಸೂಚಿ-Iರ ಕಂಡಿಕೆ 5ರಲ್ಲಿ ಸೂಚಿಸಿದ ಅರ್ಹಫಲಾನುಭವಿಗಳಿಗೆ ಒದಗಿಸಿ ಅನುಷ್ಠಾನಿಸಲು ಅವಕಾಶ ಕಲ್ಪಿಸಿದೆ. ಸಮುದಾಯದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುಷ್ಠಾನದಲ್ಲಿ ಪಾಲ್ಗೊಳ್ಳುವ ಎಲ್ಲಾ ಅನುಷ್ಠಾನ ಇಲಾಖೆಗಳು ನರೇಗಾ ಯೋಜನೆಯಡಿ ನೇರವಾಗಿ ಅಥವಾ ಪರೋಕ್ಷವಾಗಿ (ಒಗ್ಗೂಡಿಸುವಿಕೆಯ ಮೂಲಕ) ತಮ್ಮ ಕಾಮಗಾರಿಗಳನ್ನು ಅನುಷ್ಠಾನಿಸಲು 2016-17ನೇ ಸಾಲಿನಲ್ಲಿ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ.

ಮೇಲೆ ಓದಲಾದ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 186 ಉಖಾಯೋ 2012, ಬೆಂಗಳೂರು, ದಿನಾಂಕ: 02-09-2014ರ ಸರ್ಕಾರದ ಆದೇಶದಲ್ಲಿ ಅನುಷ್ಠಾನ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು (ಇಲಾಖೆಗಳು ಸೂಚಿಸಿರುವ ಅಧಿಕಾರಿಗಳು) ಹೆಚ್ಚುವರಿ ಕಾರ್ಯಕ್ರಮದ ಅಧಿಕಾರಿಗಳೆಂದು ಘೋಷಿಸಲಾಗಿರುತ್ತದೆ ಹಾಗೂ ಸದರಿ ಇಲಾಖೆಗಳ ಅಧಿಕಾರಿಯವರಿಗೆ ಲಾಗಿನ್‌ಗಳನ್ನು ನೀಡಿ ಲಾಗಿನ್‌ನಲ್ಲಿ ಅಂದಾಜು ಪಟ್ಟಿಗಳ ಫ್ರೀಜಿಂಗ್, ಇ-ಹಾಜರಾತಿ ಪಟ್ಟಿಗಳ ಸೃಜನೆ, ಪಾವತಿ ಹಾಗೂ ಸಾಮಗ್ರಿ ಬಿಲ್ಲುಗಳ ಸೃಜನೆಗೆ ಮತ್ತು ಪಾವತಿಗೆ ಅವಕಾಶ ಕಲ್ಪಿಸಿದೆ. ಘೋಷಿಸಿದ ಅಧಿಕಾರಿಗಳಿಗೆ, ಇದರಲ್ಲಿ ನೈಪುಣ್ಯತೆಯನ್ನು ಪಡೆಯಲು ತಾಂತ್ರಿಕತೆಯಲ್ಲಿ ತರಬೇತಿನ್ನು ನೀಡಲು ಕ್ರಮವಹಿಸಿದೆ. ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಬಂಧದಲ್ಲಿ ಸೂಚಿಸಿದಂತೆ, ತಮ್ಮ ಜಿಲ್ಲೆಯ ವೈಯಕ್ತಿಕ ಕಾಮಗಾರಿಗಳಿಗೆ ಹಾಗೂ ಸಮುದಾಯದ ಕಾಮಗಾರಿಗಳಿಗೆ, ಫಲಾನುಭವಿಗಳನ್ನು ಹಾಗೂ ಕಾಮಗಾರಿಗಳನ್ನು ಸಂಬಂಧಿಸಿದ ಆಯಾ ಗ್ರಾಮ ಪಂಚಾಯತಿಗಳ ಗ್ರಾಮ ಸಭೆಗಳಲ್ಲಿ ಆಯ್ಕೆ ಮಾಡಿ ಗ್ರಾಮ ಪಂಚಾಯತಿಯಿಂದ ಅನುಮೋದನೆ ಪಡೆದು ಹಾಗೂ ನರೇಗಾ ಯೋಜನೆಯ ಮಾರ್ಗಸೂಚಿಗಳನುಸಾರ ಹಾಗೂ ನಿಯಮಾನುಸಾರ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಅನುಮೋದನೆ ಪಡೆದು ಅನುಷ್ಠಾನಗೊಳಿಸಬಹುದಾಗಿರುತ್ತದೆ.

2016-17ನೇ ಸಾಲಿನ ರಾಜ್ಯದ ಆಯವ್ಯಯದಲ್ಲಿ ಘೋಷಿಸಿದಂತೆ ಹಾಗೂ ಕೂಲಿ ಆಯವ್ಯಯದಲ್ಲಿ ಕೇಂದ್ರ ಸರ್ಕಾರವು ಅನುಮೋದಿಸಿದಂತೆ, 2016-17ನೇ ಸಾಲಿನಲ್ಲಿ ಕೆಲವು ಪ್ರಮುಖ ಕಾಮಗಾರಿಗಳಾದ, ಅಂಗನವಾಡಿ ಕೇಂದ್ರಗಳ ನಿರ್ಮಾಣ, ಕೃಷಿ ಹೊಂಡ, ಎರೆಹುಳ ಗೊಬ್ಬರದ ಗುಂಡಿಗಳು ಹಾಗೂ ರಸ್ತೆ ಬದಿಯಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮಗಳನ್ನು ಅನುಷ್ಠಾನಿಸಲು ಹೆಚ್ಚಿನ ಆದ್ಯತೆ ನೀಡಿರುತ್ತದೆ. ಆದ್ದರಿಂದ, ಅನುಬಂಧದಲ್ಲಿ ಸೂಚಿಸಿರುವ ವೈಯಕ್ತಿಕ ಕಾಮಗಾರಿಗಳಿಗೆ ಹಾಗೂ ಸಮುದಾಯದ ಕಾಮಗಾರಿಗಳಿಗೆ ಕ್ರಿಯಾ ಯೋಜನೆಯನ್ನು ತಯಾರಿಸಿ ನರೇಗಾ ಯೋಜನೆಯ ಮಾರ್ಗಸೂಚಿಗಳನುಸಾರ ಅನುಮೋದನೆ ಪಡೆದು ಹಾಗೂ ಕೂಲಿ ಬೇಡಿಕೆಗೆ ಅನುಗುಣವಾಗಿ ಕಾಮಗಾರಿಗಳನ್ನು ಒಗ್ಗೂಡಿಸುವಿಕೆಯ ಮೂಲಕ ಅಥವಾ ಸ್ವತಂತ್ರವಾಗಿ ಅನುಷ್ಠಾನಗೊಳಿಸಲು ಸರ್ಕಾರವು ನಿರ್ಧರಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶದ ಸಂಖ್ಯೆ: ಗ್ರಾಅಪ 378 ಉಖಾಯೋ 2016, ಬೆಂಗಳೂರು, ದಿನಾಂಕ: 30-04-2016.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಘೋಷಿಸಲಾದ ಅನುಷ್ಠಾನ ಇಲಾಖೆಗಳ ಮೂಲಕ ಸ್ವತಂತ್ರವಾಗಿ ಅಥವಾ ಒಗ್ಗೂಡಿಸುವಿಕೆಯ ಮೂಲಕ ಜಿಲ್ಲಾವಾರು ಹಮ್ಮಿಕೊಳ್ಳಬೇಕಾದ ಕಾಮಗಾರಿಗಳು ಅನುಬಂಧದಲ್ಲಿ ನಮೂದಿಸಿದಂತೆ, ವೈಯಕ್ತಿಕ ಫಲಾನುಭವಿಗಳ ಕಾರ್ಯಕ್ರಮಗಳನ್ನು ಮಹಾತ್ಮ ಗಾಂಧಿ ನರೇಗಾ ಅಧಿನಿಯಮದ ಪರಿಷ್ಕೃತ ಅನುಸೂಚಿ-Iರ ಕಂಡಿಕೆ(5)ರಲ್ಲಿ ಸೂಚಿಸಿರುವ ಅರ್ಹಫಲಾನುಭವಿಗಳ ಜಮೀನುಗಳ ಪ್ರದೇಶದಲ್ಲಿ ಮತ್ತು ಜಿಲ್ಲಾವಾರು ಹಮ್ಮಿಕೊಳ್ಳಬೇಕಾದ ಸಮುದಾಯದ

ಕಾಮಗಾರಿಗಳು ಅನುಬಂಧದಲ್ಲಿ ನಮೂದಿಸಿದಂತೆ, ಈ ಕೆಳಕಂಡಂತೆ ಸೂಚಿಸಿರುವ ಷರತ್ತುಗಳು ಮತ್ತು ನಿಬಂಧನೆಗಳ ಅನುಪಾಲನೆಗೆ ಒಳಪಟ್ಟು ಅನುಷ್ಠಾನಗೊಳಿಸಲು ಆದೇಶಿಸಿದೆ.

1. ಮಹಾತ್ಮ ಗಾಂಧಿ ನರೇಗಾ ಅಧಿನಿಯಮದ ಪರಿಷ್ಕೃತ ಅನುಸೂಚಿ–I ಮತ್ತು ಯೋಜನೆಯ ಕಾರ್ಯಚರಣೆಯ ಮಾರ್ಗಸೂಚಿಗಳಂತೆ, ಫಲಾನುಭವಿಗಳನ್ನು ಮತ್ತು ಕಾಮಗಾರಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆಮಾಡಿಕೊಂಡು, ಗ್ರಾಮ ಪಂಚಾಯತಿಯಿಂದ ಅನುಮೋದನೆ ಪಡೆದು, ತರುವಾಯ ಕಾಮಗಾರಿಗಳಿಗೆ ಕ್ರಿಯಾಯೋಜನೆ ತಯಾರಿಸಿಕೊಂಡು, ಸಂಬಂಧಿಸಿದ ಜಿಲ್ಲಾ ಕಾರ್ಯಕ್ರಮ ಸಂಯೋಜಕರಿಂದ ಅನುಮೋದನೆ ಪಡೆದುಕೊಂಡು, ಅನುಷ್ಠಾನಕ್ಕೆ ಕ್ರಮವಹಿಸುವುದು.

2. 2013–14, 2014–15 ಮತ್ತು 2015–16ನೇ ಸಾಲುಗಳಲ್ಲಿ ಗ್ರಾಮ ಸಭೆಯಿಂದ ಅನುಮೋದನೆ ಪಡೆದಿದ್ದು, ಕ್ರಿಯಾ ಯೋಜನೆಗೆ ಜಿಲ್ಲಾ ಕಾರ್ಯಕ್ರಮ ಅಧಿಕಾರಿಗಳಿಂದ ಅನುಮೋದನೆ ಪಡೆದಿರುವ ಕಾಮಗಾರಿಗಳಿಗೆ, 2016–17ನೇ ಸಾಲಿಗೆ ಅಧಿಸೂಚಿಸಿ ನಿಗಧಿಪಡಿಸಿದ ಕೂಲಿದರ ಹಾಗೂ ನರೇಗಾ ಯೋಜನೆಯ ಕೂಲಿದರ ಪಟ್ಟಿಯನ್ವಯ (SoR for 2016-17) ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.

3. ಮೇಲೆ ಓದಲಾದ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 186 ಉಖಾಯೋ 2012, ಬೆಂಗಳೂರು, ದಿನಾಂಕ:02–09–2014ರ ಸರ್ಕಾರದ ಆದೇಶದಲ್ಲಿ ಅನುಷ್ಠಾನ ಇಲಾಖೆಗಳ ತಾಲ್ಲೂಕುಗಳ ಮಟ್ಟದ ಅಧಿಕಾರಿಗಳನ್ನು (ಆಯಾ ಇಲಾಖೆಗಳು ಸೂಚಿಸುವ ಅಧಿಕಾರಿಗಳು) ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿಗಳೆಂದು ಘೋಷಿಸಲಾಗಿದೆ ಹಾಗೂ ಸದರಿ ಇಲಾಖೆಗಳ ಅಧಿಕಾರಿಗಳ ಲಾಗಿನ್‌ನಲ್ಲಿ ಅಂದಾಜು ಪಟ್ಟಿಗಳ ಫ್ರೀಜಿಂಗ್, ಇ–ಹಾಜರಾತಿ ಪಟ್ಟಿಗಳ ಸೃಜನೆ ಹಾಗೂ ಪಾವತಿ ಮತ್ತು ಸಾಮಗ್ರಿ ಬಿಲ್ಲುಗಳ ಸೃಜನೆ ಹಾಗೂ ಪಾವತಿಗ ಅವಕಾಶ ಕಲ್ಪಿಸಿದೆ.

4. ಈ ಯೋಜನೆಯಡಿ ಕೈಗೊಳ್ಳಲಾದ ಎಲ್ಲಾ ಕಾಮಗಾರಿಗಳ Geo-tag (Latitude & Longitude) ಮಾಹಿತಿಯನ್ನು ಆದ್ಯತೆಯ ಮೇರೆಗೆ ಮತ್ತು ಆಸ್ತಿ ವಹಿಯನ್ನು ಸಮರ್ಪಕವಾಗಿ ನಿರ್ವಹಿಸುವುದು.

5. ವ್ಯಕ್ತಿಗತ ಫಲಾನುಭವಿಗಳಿಗೆ ಅವರ ಹೆಸರಿನಲ್ಲಿ e-NMRಗಳನ್ನು ವಿತರಿಸಿ, ಕೂಲಿ ಮತ್ತು ಸಾಮಗ್ರಿ ವೆಚ್ಚಗಳ ಸಂದಾಯಕ್ಕೆ e-FMS ಮೂಲಕ ಕ್ರಮವಹಿಸುವುದು.

6. ಪ್ರಸ್ತಾಪಿಸಿರುವ ಕಾಮಗಾರಿಗಳನ್ನು ಅನುಷ್ಠಾನ ಇಲಾಖೆಗಳಿಗೆ ನೀಡಿದ ಲಾಗಿನ್‌ನಿಂದ ಮೊದಲ ಆದ್ಯತೆ ಮೇರೆಗೆ ಹಾಗೂ ಅನಿವಾರ್ಯ ಸಂದರ್ಭಗಳಲ್ಲಿ ಗ್ರಾಮ ಪಂಚಾಯತಿಯ ಲಾಗಿನ್ ಮೂಲಕ ಅನುಷ್ಠಾನ ಇಲಾಖೆಯು ನಿರ್ವಹಿಸತಕ್ಕದ್ದು.

7. ವೈಯಕ್ತಿಕ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಪ್ರಥಮ ಆದ್ಯತೆಯನ್ನು ನೀಡಿ ನಂತರ ಉಳಿದ ಅರ್ಹಫಲಾನುಭವಿಗಳಿಗೆ ಆದ್ಯತೆ ನೀಡುವುದು.

8. ಅನುಷ್ಠಾನ ಇಲಾಖೆಗಳು ಅನುಷ್ಠಾನ ಮಾಡುವ ಎಲ್ಲಾ ಕಾಮಗಾರಿಗಳ ಕೂಲಿ ಮತ್ತು ಸಾಮಗ್ರಿಗಳ ಶೇಕಡಾ 60:40ರ ಅನುಪಾತವನ್ನು ಜಿಲ್ಲಾ ಮಟ್ಟದಲ್ಲಿ ನಿರ್ವಹಿಸತಕ್ಕದ್ದು.

9. ಪ್ರತಿ ಕಾಮಗಾರಿಗೆ ಒಂದು ಪ್ರತ್ಯೇಕವಾದ ಕಡತವನ್ನು ತೆರೆದು ನಿರ್ವಹಿಸುವುದು ಮತ್ತು ಆಯುಕ್ತಾಲಯದಿಂದ ಸೂಚಿಸಿರುವ 16 ದಾಖಲೆಗಳನ್ನು ನಿರ್ವಹಿಸುವುದು. ಈ ದಾಖಲೆಗಳನ್ನು ಪರಿವೀಕ್ಷಣಾ ಸಮಯದಲ್ಲಿ ಲಭ್ಯವಾಗುವಂತೆ, ಕ್ರಮವಹಿಸುವುದು.

10. ಕೆಲವು ಕಾಮಗಾರಿಗಳು ಋತುಮಾನ ಆಧಾರಿತವಾಗಿದ್ದು, ಅವುಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಇದರ ಜೊತೆಗೆ ಮಣ್ಣು ಮತ್ತು ತೇವಾಂಶಗಳನ್ನು ಗಮನದಲ್ಲಿಟ್ಟುಕೊಂಡು, ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು.

11. ಕಾಮಗಾರಿಗಳಿಗೆ (ವ್ಯಕ್ತಿಗತ ಫಲಾನುಭವಿಗಳ ಕಾಮಗಾರಿಗಳಾಗಲಿ ಅಥವಾ ಸಮುದಾಯದ ಕಾಮಗಾರಿಗಳಾಗಲಿ) ಮೂರು ಹಂತಗಳ ಛಾಯ ಚಿತ್ರಗಳನ್ನು ಕಡ್ಡಾಯವಾಗಿ ನಿರ್ವಹಣೆ ಮಾಡುವುದು. ಕಾಮಗಾರಿಗಳ ಸ್ಥಳದಲ್ಲಿ ನಾಮಫಲಕಗಳನ್ನು ಅಳವಡಿಸುವುದು. ಇದಕ್ಕೆ ತಗಲುವ ವೆಚ್ಚವನ್ನು ಅಂದಾಜು ಪತ್ರಿಕೆಯಲ್ಲಿ ಸೇರಿಸುವುದು ಮತ್ತು ಇದರ ವೆಚ್ಚವನ್ನು ಶೇಕಡಾ 40ರಷ್ಟಿನ ಸಾಮಗ್ರಿ ವೆಚ್ಚದಲ್ಲಿ ಭರಿಸುವುದು.

12. ಗುತ್ತಿಗೆದಾರರನ್ನು ಮತ್ತು ಯಂತ್ರಗಳನ್ನು ಅನುಷ್ಠಾನದಲ್ಲಿ ಬಳಸುವುದನ್ನು ಕಡ್ಡಾಯವಾಗಿ ನಿಷೇದಿಸಿದೆ.

13. ಕಾಮಗಾರಿಗಳ ಕೆಲಸವನ್ನು ಉದ್ಯೋಗ ಚೀಟಿ ಹೊಂದಿದ ಅಕುಶಲ ಕಾರ್ಮಿಕರಿಂದ ನಿರ್ವಹಿಸತಕ್ಕದ್ದು.

14. ವೈಯಕ್ತಿಕ ಕಾಮಗಾರಿಗಳಿಗೆ ಕುರಿತಂತೆ, ಎಲ್ಲಾ ಅರ್ಹಫಲಾನುಭವಿಗಳನ್ನು ಗುರುತಿಸಿ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡುವುದು ಮತ್ತು ಸಮುದಾಯದ ಕಾಮಗಾರಿಗಳಿಗೆ ಕುರಿತಂತೆ, ಕಾಮಗಾರಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡುವುದು. ಆಯ್ಕೆ ಮಾಡಿದಂತಹ, ಫಲಾನುಭವಿಗಳಿಗೆ ಹಾಗೂ ಸಮುದಾಯದ ಕಾಮಗಾರಿಗಳಿಗೆ ಕ್ರಿಯಾಯೋಜನೆಯನ್ನು ತಯಾರಿಸಿ ನಿಯಮಾನುಸಾರ ಅನುಮೋದನೆ ಪಡೆದು end2end ತಂತ್ರಾಂಶದಲ್ಲಿ ದಾಖಲಿಸಲು ಕ್ರಮವಹಿಸುವುದು.


15. ಒಗ್ಗೂಡಿಸುವಿಕೆಯ ಕಾಮಗಾರಿಗಳಿಗೆ ಆದ್ಯತೆ ನೀಡುವುದು.

16. ವೈಯಕ್ತಿಕ ಕಾಮಗಾರಿಗಳಿಗೆ ಕುರಿತಂತೆ, ಆಯಾ ಅನುಷ್ಠಾನ ಇಲಾಖೆಗಳು ನೀಡಿರುವ ಅನುಮೋದಿತ ಮಾದರಿ ಅಂದಾಜು ಪತ್ರಿಕೆಯಂತೆ ಅಥವಾ ನರೇಗಾ ಯೋಜನೆಯ ಆಯುಕ್ತಾಲಯದವರು ತಿಳಿಸಿರುವ ಅನುಮೋದಿತ ಮಾದರಿ ಅಂದಾಜು ಪತ್ರಿಕೆಯಂತೆ ಅನುಷ್ಠಾನ ನಿರ್ವಹಿಸುವುದು. ಸಮುದಾಯದ ಕಾಮಗಾರಿಗಳಿಗೆ ಕುರಿತಂತೆ, ಆಯಾ ಅನುಷ್ಠಾನ ಇಲಾಖೆಗಳು ನೀಡಿರುವ ಅನುಮೋದಿತ ಮಾದರಿ ಅಂದಾಜು ಪತ್ರಿಕೆಯಂತೆ ಅಥವಾ ನರೇಗಾ ಯೋಜನೆಯ ಆಯುಕ್ತಾಲಯದವರು ತಿಳಿಸಿರುವ ಮಾದರಿ ಅಂದಾಜು ಪತ್ರಿಕೆಯಂತೆ ಅನುಷ್ಠಾನ ನಿರ್ವಹಿಸುವುದು.

17. ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕಾಮಗಾರಿಗಳನ್ನು ಜಂಟಿಯಾಗಿ ಚೆಕ್‌ಮೇಷರ್‌ಮೆಂಟ್ ಮಾಡುವ, ತಾಂತ್ರಿಕ ಅನುಮೋದನೆಯನ್ನು ನೀಡುವ ಬಗ್ಗೆ ದಿನಾಂಕ: 07/10–03–2015ರ ಸುತ್ತೋಲೆಯಲ್ಲಿ ಹಾಗೂ ತರುವಾಯ ನೀಡಿದ ಪರಿಷ್ಕೃತ ಸುತ್ತೋಲೆಯ ಪತ್ರದ ದಿನಾಂಕ: 30–12–2015/01–01–2016ರಲ್ಲಿ ತಿಳಿಸಿರುವಂತೆ ಕ್ರಮವಹಿಸುವುದು.

18. ಕಾರ್ಯಚರಣೆಯ ಮಾರ್ಗಸೂಚಿಗಳು 2013ರ 4ನೇ ಆವೃತ್ತಿಯ ಅಧ್ಯಾಯ 7ರ ಕಂಡಿಕೆ 7.3ರಲ್ಲಿ ಸೂಚಿಸಿದಂತೆ, ನಿಷೇದಿತ ಕಾಮಗಾರಿಗಳನ್ನು ತೆಗೆದುಕೊಳ್ಳುವಂತಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ



(ಸಿದ್ದೇಶ್ ಪೋತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಅನುಬಂಧ

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 378 ಉಖಾಯೋ 2016, ಬೆಂಗಳೂರು, ದಿನಾಂಕ: 30–04–2016.**

2016–17ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ವೈಯಕ್ತಿಕ ಕಾಮಗಾರಿಗಳನ್ನು ಹಾಗೂ ಸಮುದಾಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ವಿವರಗಳ ತಃಖ್ತೆ

| ಕ್ರ.ಸಂ. | ಜಿಲ್ಲೆ | ವೈಯಕ್ತಿಕ ಕಾಮಗಾರಿಗಳ ಸಂಖ್ಯೆ | ಸಮುದಾಯದ ಕಾಮಗಾರಿಗಳ ಸಂಖ್ಯೆ |
|---|---|---|---|
| 1 | ಬಾಗಲಕೋಟೆ | 20300 | 4060 |
| 2 | ಬೆಂಗಳೂರು ನಗರ | 5050 | 1010 |
| 3 | ಬೆಂಗಳೂರು ಗ್ರಾಮಾಂತರ | 5250 | 1050 |
| 4 | ಬೆಳಗಾಂ | 51700 | 10340 |
| 5 | ಬಳ್ಳಾರಿ | 20500 | 4100 |
| 6 | ಬೀದರ್ | 18600 | 3720 |
| 7 | ಬಿಜಾಪುರ | 22000 | 4400 |
| 8 | ಚಾಮರಾಜನಗರ | 13100 | 2620 |
| 9 | ಚಿಕ್ಕಬಳ್ಳಾಪುರ | 15700 | 3140 |
| 10 | ಚಿಕ್ಕಮಗಳೂರು | 22700 | 4540 |
| 11 | ಚಿತ್ರದುರ್ಗ | 19000 | 3800 |
| 12 | ದಕ್ಷಿಣ ಕನ್ನಡ | 23200 | 4640 |
| 13 | ದಾವಣಗೆರೆ | 23500 | 4700 |
| 14 | ಧಾರವಾಡ | 14300 | 2860 |
| 15 | ಗದಗ | 12200 | 2440 |
| 16 | ಕಲಬುರ್ಗಿ | 26400 | 5280 |
| 17 | ಹಾಸನ | 26600 | 5320 |
| 18 | ಹಾವೇರಿ | 22300 | 4460 |
| 19 | ಕೊಡಗು | 5200 | 1040 |
| 20 | ಕೋಲಾರ | 15600 | 3120 |
| 21 | ಕೊಪ್ಪಳ | 15700 | 3140 |
| 22 | ಮಂಡ್ಯ | 23500 | 4700 |
| 23 | ಮೈಸೂರು | 26700 | 5340 |
| 24 | ರಾಯಚೂರು | 15800 | 3160 |
| 25 | ರಾಮನಗರ | 13000 | 2600 |
| 26 | ಶಿವಮೊಗ್ಗ | 27100 | 5420 |
| 27 | ತುಮಕೂರು | 33100 | 6620 |
| 28 | ಉಡುಪಿ | 8100 | 1620 |
| 29 | ಉತ್ತರ ಕನ್ನಡ | 11650 | 2330 |
| 30 | ಯಾದಗಿರಿ | 11700 | 2340 |
| ಒಟ್ಟು | | 569550 | 113910 |

(ಸಿದ್ದೇಶ್ ಪೋತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಸುತ್ತೋಲೆ

## ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 12.05.2016

ಸಂಖ್ಯೆ:ಗ್ರಾಅಪ:46:ಗ್ರಾವಿಯೋ:2015

## ಸುತ್ತೋಲೆ

**ವಿಷಯ:** ಗ್ರಾಮ ವಿಕಾಸ ಯೋಜನೆಯ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಯೋಜನೆಯಡಿ ಕೈಗೊಳ್ಳಬಹುದಾದ ಕಾಮಗಾರಿಗಳೊಂದಿಗೆ ಒಳಚರಂಡಿ ಕಾಮಗಾರಿಗಳನ್ನು ಸೇರ್ಪಡಿಸುವ ಬಗ್ಗೆ.

**ಉಲ್ಲೇಖ:** 1. ಗ್ರಾಮ ವಿಕಾಸ ಯೋಜನೆ ಮಾರ್ಗಸೂಚಿ.

2. ಮಾನ್ಯ ಶಾಸಕರು, ಹಾಸನ ಜಿಲ್ಲೆ, ಹಾಸನ ವಿಧಾನ ಸಭಾ ಕ್ಷೇತ್ರ ಇವರು ಸರ್ಕಾರಕ್ಕೆ ಸಲ್ಲಿಸಿದ ಮನವಿ ದಿನಾಂಕ: 01.03.2016.

******

ಗ್ರಾಮ ವಿಕಾಸ ಯೋಜನೆ ಉಲ್ಲೇಖಿತ 1 ರ ಮಾರ್ಗಸೂಚಿ ಪುಸ್ತಕದ ಪುಟ ಸಂಖ್ಯೆ 24 ರಲ್ಲಿ ತಿಳಿಸಿರುವಂತೆ ಗ್ರಾಮಗಳಿಗೆ ನಿಗಧಿಪಡಿಸಿದ ಅನುದಾನದಲ್ಲಿ ಶೇಕಡಾ 50 ರಷ್ಟು ಮೊತ್ತವನ್ನು ಗ್ರಾಮದೊಳಗಿನ ಪರಿಸರವನ್ನು ಉತ್ತಮಪಡಿಸಲು ರಸ್ತೆ, ಚರಂಡಿ, (ಸ್ಥಳಿಯ ಅವಶ್ಯಕತೆಯನ್ನು ಆಧರಿಸಿ ಸಿ.ಸಿ.ರಸ್ತೆ / ಕಲ್ಲು ಚಪ್ಪಡಿ ರಸ್ತೆಗಳನ್ನು ಗ್ರಾಮ ಪಂಚಾಯತ್‌ಗಳು ನಿರ್ಧರಿಸಿದ ಮಾದರಿಯಲ್ಲಿ) ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶ ಕಲ್ಪಿಸಿದೆ.

ಹಾಸನ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು ಗ್ರಾಮ ವಿಕಾಸ ಯೋಜನೆಯಡಿ ಹಾಸನ ವಿಧಾನ ಸಭಾ ಕ್ಷೇತ್ರದಲ್ಲಿ ಆಯ್ಕೆಯಾದ ಗ್ರಾಮಗಳಲ್ಲಿ ಒಳಚರಂಡಿ ವ್ಯವಸ್ಥೆ ಕಾಮಗಾರಿಗಳಿಗಾಗಿ ಅನುಮತಿ ಕೋರಿ ಸರ್ಕಾರಕ್ಕೆ ಉಲ್ಲೇಖ 2 ರಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿದೆ ಮತ್ತು ಮಾರ್ಗಸೂಚಿ ಪುಸ್ತಕದ ಪುಟ ಸಂಖ್ಯೆ 24 ರ ಕಂಡಿಕೆ 4 ರ ಕ್ರಮ ಸಂಖ್ಯೆ 1 ರಲ್ಲಿನ ವಿವರಗಳನ್ನು ಕೆಳಕಂಡಂತೆ ಓದಿಕೊಳ್ಳತಕ್ಕದ್ದು.

| ಕೈಗೊಳ್ಳಲು ಸೂಚಿಸಿರುವ ಕಾಮಗಾರಿಗಳು | ನಿಗಧಿಪಡಿಸಬೇಕಾದ ಶೇಕಡವಾರು ಮೊತ್ತ |
|---|---|
| 1. ಗ್ರಾಮದೊಳಗಿನ ಪರಿಸರವನ್ನು ಉತ್ತಮಪಡಿಸಲು ರಸ್ತೆ, ಚರಂಡಿ (ಸ್ಥಳಿಯ ಅವಶ್ಯಕತೆಗಳನ್ನು ಆಧರಿಸಿ ಸಿ.ಸಿ.ರಸ್ತೆ / ಕಲ್ಲು ಚಪ್ಪಡಿ ರಸ್ತೆಗಳನ್ನು ಗ್ರಾಮ ಪಂಚಾಯತ್‌ಗಳು ನಿರ್ಧರಿಸಿದ ಮಾದರಿಯಲ್ಲಿ) ಕಾಮಗಾರಿಗಳನ್ನು ಕೈಗೊಳ್ಳುವುದರೊಂದಿಗೆ ಗ್ರಾಮದ ಅವಶ್ಯಕತೆಗನುಗುಣವಾಗಿ ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳುವುದು. | 50% |

ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಮಾರ್ಗಸೂಚಿಯಂತೆ ಇತರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

(ಬೂವನಹಳ್ಳಿನಾಗರಾಜ್)
ನಿರ್ದೇಶಕರು (ಸುಗ್ರಾಯೋ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಗುಮ್ಮಗೋಳ ಗ್ರಾಮ ಪಂಚಾಯತಿಯಲ್ಲಿ ಗ್ರಾಮೋದಯದಿಂದ ಭಾರತ್ ಉದಯ್ ಅಭಿಯಾನ ಕುರಿತ ಸಭೆಯ ಛಾಯಾಚಿತ್ರಗಳು











# KARNATAKA VIKAS : JUNE 2016

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2015-17, License to Post "without Prepayment" WPP - 32
RNI No. : 28103 / 1974 Total No. Pages 52, Posted at Bengaluru PSO, Mysore Road,
Bengaluru on 9th, 10th, 11th of Every Month


## ವಿಶ್ವ ಪರಿಸರ ದಿನ



## ಜೂನ್ 5


Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Name of the Editor
**Y. Mahankalappa**

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob:+91 95919 88347

Price : ಬೆಲೆ : ₹10.00